

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 17 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 62 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com


₹4



ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ

ಮಧು ಮಾದೇಗೌಡ ಗೆಲುವು

● 30 ಗಂಟೆಗಳ ಎಣಿಕೆ ನಂತರ ಮಧ್ಯಾಹ್ನ 2 ಗಂಟೆಗೆ ಫಲಿತಾಂಶ ಪ್ರಕಟ ● ಮೊದಲ ಬಾರಿ ಕಾಂಗ್ರೆಸ್ ಜಯದ ದಾಖಲೆ ● 3ನೇ ಸ್ಥಾನಕ್ಕಿಳಿದ ಜೆಡಿಎಸ್ ● ಬಿಜೆಪಿಯ ಮೈ.ವಿ.ರವಿಶಂಕರ್‌ಗೆ ಸತತ 2ನೇ ಸೋಲು



ದಕ್ಷಿಣ ಪದವೀಧರ ಕ್ಷೇತ್ರದ ವಿಜೇತ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರಿಗೆ ಚುನಾವಣಾಧಿಕಾರಿ, ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಪ್ರಮಾಣ ಪತ್ರ ವಿತರಿಸಿದರು. ಡಿಸಿ ಡಾ.ಬಗಾದಿ ಗೌತಮ್ ಇನ್ನಿತರರಿದ್ದಾರೆ.

ಮೈಸೂರು, ಜೂ.16(ಆರ್‌ಕೆ)–ತೀವ್ರ ಕುತೂಹಲ ಕೆರಳಿಸಿದ್ದ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ, ತಮ್ಮ ಸಮೀಪ ಪ್ರತಿಸ್ಪರ್ಧಿ ಬಿಜೆಪಿಯ ಮೈ.ವಿ.ರವಿಶಂಕರ್ ವಿರುದ್ಧ 12,204 ಮತಗಳ ಅಂತರದಲ್ಲಿ ಭರ್ಜರಿ ಜಯ ಗಳಿಸಿದ್ದಾರೆ. ಈ ಮೂಲಕ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಇದೇ ಪ್ರಥಮ ಬಾರಿಗೆ ಕಾಂಗ್ರೆಸ್ ಗೆಲುವು ಸಾಧಿಸಿ ದಾಖಲೆ ಬರೆದಿದೆ.

ಗುರುವಾರ ಮಧ್ಯಾಹ್ನ ಅಂತಿಮ ಸುತ್ತಿನ ಮತ ಎಣಿಕೆ ಮುಕ್ತಾಯವಾದಾಗ ಮಧು ಮಾದೇಗೌಡರು ಒಟ್ಟು 46,082 ಮತಗಳನ್ನು ಪಡೆದು ಜಯಶೀಲರಾಗಿದ್ದಾರೆ ಎಂದು ಚುನಾವಣಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ಡಾ. ಜಿ.ಸಿ.ಪ್ರಕಾಶ್ ಘೋಷಿಸಿದರು. ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ 33,878 ಮತಗಳನ್ನು ಪಡೆದರೆ, ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು 19,630 ಮತ ಗಳಿಸಿ 3ನೇ ಸ್ಥಾನಕ್ಕೆ ತಳ್ಳಲ್ಪಟ್ಟರು. ಈ ಮೂಲಕ ಜೆಡಿಎಸ್ ತನ್ನ ಸ್ಥಾನ ಕಳೆದುಕೊಂಡದ್ದಲ್ಲದೇ ದಕ್ಷಿಣ ಪದವೀಧರ ▶ 8ನೇ ಪುಟಕ್ಕೆ

> ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಇನ್ನಿತರ ಮುಖಂಡರ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಒಗ್ಗಟ್ಟಿನ ಪ್ರಚಾರ, ಪದವೀಧರರ ನಿಲುವು, ನಮ್ಮ ತಂದೆಯವರ ನೆಲ, ಜಲ, ಕೃಷಿಕರ ಪರವಾದ 5 ದಶಕಗಳ ಹೋರಾಟ, ನಮ್ಮ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು, ಮರಿತಿಬ್ಬೇಗೌಡ, ಶಿಕ್ಷಕರ ಬೆಂಬಲದಿಂದಾಗಿ ನನಗೆ ಜಯ ಸಿಕ್ಕಿದೆ. ನನ್ನ ಮೇಲೆ ಪದವೀಧರರು ಇರಿಸಿರುವ ನಂಬಿಕೆಗೆ ಚ್ಯುತಿ ಬಾರದಂತೆ ಕೆಲಸ ಮಾಡುತ್ತೇನೆ. ನನ್ನ ಈ ಗೆಲುವು ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರ ಗೆಲುವಾಗಿದ್ದು, ಮುಂದಿನ ಚುನಾವಣೆಗೆ ಈ ಫಲಿತಾಂಶ ಬುನಾದಿಯಾಗಲಿದೆ.
> – ಮಧು ಜಿ.ಮಾದೇಗೌಡ

> ಚುನಾವಣಾ ಫಲಿತಾಂಶ ಅಚ್ಚರಿ ಮೂಡಿಸಿದೆ. ಬಿಜೆಪಿ ಸಾಂಪ್ರದಾಯಿಕ ಮತಗಳು ಬಂದೇ ಬರುತ್ತವೆ ಎಂಬ ಭರವಸೆ ಇತ್ತು. ಆದರೂ ಪದವೀಧರರು ನನಗೆ ಮತ ನೀಡಿದ್ದಾರೆ. 2ನೇ ಪ್ರಾಶಸ್ತ್ಯ ಮತ ನಿರೀಕ್ಷಿತ ಪ್ರಮಾಣದಲ್ಲಿ ಬಂದಿಲ್ಲ. ಆದರೆ ನನ್ನ ಪರ ಚುನಾವಣಾ ಪ್ರಚಾರ ಮಾಡಿದ ಮುಖ್ಯಮಂತ್ರಿ, ಸಚಿವರು, ಸಂಸದರು, ಶಾಸಕರು, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಎಲ್ಲಾ ಗೆಳೆಯರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮತದಾರರ ತೀರ್ಪನ್ನು ಗೌರವಿಸುತ್ತಾ, ಮುಂದೆಯೂ ಪಕ್ಷದ ಸಂಘಟನೆಯನ್ನು ಮುಂದುವರೆಸುವೆ. –ಮೈ.ವಿ.ರವಿಶಂಕರ್

ಯಾರೂ ಹಣ ಕೊಟ್ಟಿಲ್ಲ! ಸರ್ಕಾರಿ ಕೆಲಸ ಕೊಡಿ, ಇಲ್ಲ ಅಂದ್ರೆ ಕೊಳವೆ ಬಾವಿ ತೋಡಿಸಿಕೊಡಿ!!: ತಾಲೂಕು ಜೆಡಿಎಸ್ ಅಧ್ಯಕ್ಷರನ್ನು ಬದಲಿಸಿ!!!

ಮೈಸೂರು: ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯ ಮತಪತ್ರದಲ್ಲಿ ತಮಗಿಚ್ಛೆ ಬಂದ ಅಭ್ಯರ್ಥಿಗಳ ಪರ ಮತ ಹಾಕುವ ಬದಲು ಅಭ್ಯರ್ಥಿಗಳು, ಸರ್ಕಾರ ಹಾಗೂ ಪಕ್ಷಗಳ ಮುಖಂಡರಿಗೆ ಕುಚೋದ್ಯ ಸಲಹೆ ಪತ್ರ ಬರೆದು ತಮ್ಮ ಹಕ್ಕು ಹಾಳು ಮಾಡಿರುವುದು ಬೆಳಕಿಗೆ ಬಂದಿದೆ.

ಮತ ಎಣಿಕೆ ವೇಳೆ ಇಂತಹ ಹಲವು ಪತ್ರಗಳು ಸಿಕ್ಕಿದ್ದು, 'ನಾನು ಎಂ.ಎ., ಬಿಎಡ್ ಮಾಡಿದ್ದೇನೆ, ಕೆಲಸವಿಲ್ಲ. ಸರ್ಕಾರಿ ಕೆಲಸ ಕೊಡಿ, ಇಲ್ಲ ಅಂದ್ರೆ ನಮ್ಮ ಜಮೀನಿನಲ್ಲಿ ಕೊಳವೆ ಬಾವಿ ತೋಡಿಸಿಕೊಡಿ. ನಮ್ಮಪ್ಪನ ಜಮೀನಲ್ಲಿ ಬೇಸಾಯವನ್ನಾದರೂ ▶ 8ನೇ ಪುಟಕ್ಕೆ

ಜಿಲ್ಲಾಧಿಕಾರಿ ದಂಪತಿಯ ಪರಿಶ್ರಮ




ಅಶ್ವತಿ–ಡಾ.ಬಗಾದಿ

ಮೈಸೂರು: ಐಎಎಸ್ ಅಧಿಕಾರಿ ದಂಪತಿ ಸೇರಿದಂತೆ ಅಧಿಕಾರಿ ವರ್ಗ ನಿರಂತರ 30 ಗಂಟೆ ಮತ ಎಣಿಕೆ ನಡೆಸಿ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ಫಲಿತಾಂಶ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಚುನಾವಣಾ ವೀಕ್ಷಕ ಪೊನ್ನುರಾಜ್ ನೇತೃತ್ವದಲ್ಲಿ ಚುನಾವಣಾಧಿಕಾರಿಯೂ ಆದ ಪ್ರಾದೇಶಿಕ ಆಯುಕ್ತ ▶ 8ನೇ ಪುಟಕ್ಕೆ

ಪಠ್ಯಪುಸ್ತಕ ಪರಿಷ್ಕರಣೆ

ತಪ್ಪುಗಳನ್ನು ಸರಿಪಡಿಸಲು ಸರ್ಕಾರ ಮುಕ್ತ



ದಾವಣಗೆರೆ, ಜೂ.16– ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ತಪ್ಪುಗಳನ್ನು ಸರಿಪಡಿಸಲು ಸರ್ಕಾರ ಮುಕ್ತವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು

ದಾವಣಗೆರೆಯಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಈಗಾಗಲೇ ಶಿಕ್ಷಣ ಸಚಿವರೊಂದಿಗೆ ಮಾತನಾಡಿ, ಸರಿಪಡಿಸಲಾಗುತ್ತಿದೆ. ಸಲಹೆಗಳಿಗೆ ನಾವು ಮುಕ್ತವಾಗಿದ್ದೇವೆ. ಇಲಾಖೆ ವೆಬ್‌ಸೈಟ್‌ನಲ್ಲಿಯೂ ವಿವರಗಳನ್ನು ನೀಡಲಾಗಿದೆ. ಹಿಂದಿನ ಪಠ್ಯಪುಸ್ತಕಗಳ ಬಗ್ಗೆಯೂ ಆಕ್ಷೇಪವಿದೆ. ಪಠ್ಯಪುಸ್ತಕಗಳನ್ನು ಸರಿಪಡಿಸಲು ಸರ್ಕಾರ ಮುಕ್ತವಾಗಿದೆ ಎಂದರು.

ಜೀವಂತ ಗುಂಡು ಪತ್ತೆ; ಅಮೆರಿಕಾ ಪ್ರಜೆ ಬಂಧನ

ಬೆಂಗಳೂರು: ತಮ್ಮ ಬ್ಯಾಗೇಜ್‌ನೊಂದಿಗೆ ಜೀವಂತ ಗುಂಡು ತಂದಿದ್ದ ಅಮೆರಿಕ ಮೂಲದ ಪ್ರಜೆಯನ್ನು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಅಧಿಕಾರಿಗಳು ಬಂಧಿಸಿದ್ದಾರೆ. ಅಮೆರಿಕದ ಟೆಕ್ಸಾಸ್ ಮೂಲದ ವ್ಯಕ್ತಿಯೊಬ್ಬರು ತಮ್ಮ ಸಾಮಾನು ಸರಂಜಾಮುಗಳೊಂದಿಗೆ ಕೌಬಾಯ್ ಅಸಾಲ್ಟ್ ರೈಫಲ್‌ನ ಜೀವಂತ ಗುಂಡು ಸಾಗಿಸುತ್ತಿದ್ದ ಆರೋಪದ ಮೇರೆಗೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬುಧವಾರ ಅಧಿಕಾರಿಗಳು ಬಂಧಿಸಿದ್ದಾರೆ. ಬೆಂಗಳೂರಿನಿಂದ ಕೋಲ್ಕತ್ತಾಗೆ ಸಂಜೆ 5.55ಕ್ಕೆ ಹೊರಡುವ ಏರ್ ಏಷ್ಯಾ ಇಂಡಿಯಾ ವಿಮಾನವನ್ನು ಹತ್ತಲು ಅಮೆರಿಕ ಪ್ರಜೆ ನಿಲ್ದಾಣಕ್ಕೆ ಬಂದಿದ್ದರು. ಈ ವೇಳೆ ಅವರ ತಪಾಸಣೆ ನಡೆಸಿದಾಗ ಜೀವಂತ ಗುಂಡು ಪತ್ತೆಯಾದ ಹಿನ್ನಲೆಯಲ್ಲಿ ಅವರಿಗೆ ನಿಲ್ದಾಣ ಪ್ರವೇಶಿಸಲು ಅವಕಾಶ ನೀಡಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋನಿಯಾ ಗಾಂಧಿಗೆ ಅನಾರೋಗ್ಯ

ಇಡಿ ವಿಚಾರಣೆ ಮುಂದೂಡುವಂತೆ ರಾಹುಲ್‌ಗಾಂಧಿ ಮನವಿ



ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ನಾಳೆ ಮತ್ತೆ ವಿಚಾರಣೆಗೆ ಹಾಜರಾಗುವಂತೆ ಇಡಿ ಸೂಚಿಸಿದೆ. ಆದರೆ ತಾಯಿ ಸೋನಿಯಾ ಗಾಂಧಿ ಅನಾರೋಗ್ಯವನ್ನು ಮುಂದಿಟ್ಟು ಈ ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡುವಂತೆ ರಾಹುಲ್ ಗಾಂಧಿ ಮನವಿ ಮಾಡಿದ್ದಾರೆ. ಈ ಬೇಡಿಕೆಗೆ ಜಾರಿ ನಿರ್ದೇಶನಾಲಯ ಇದುವರೆಗೂ ಯಾವುದೇ ಉತ್ತರ ನೀಡಿಲ್ಲ.

ಖಾತೆ ತೆರೆದ ಕಾಂಗ್ರೆಸ್

ಮೈಸೂರು,ಜೂ.16(ಆರ್‌ಕೆ)–ಮಧು ಜಿ.ಮಾದೇಗೌಡರು ಗೆಲುವು ಸಾಧಿಸುವ ಮೂಲಕ ಇದೇ ಮೊದಲ ಬಾರಿ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್ ಖಾತೆ ತೆರೆದಿದೆ.

ಮಂಡ್ಯ, ಹಾಸನ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳನ್ನೊಳಗೊಂಡ ಕ್ಷೇತ್ರದಲ್ಲಿ ಈವರೆಗೆ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದು ಪರಿಷತ್ ಸದಸ್ಯರಾಗಿರಲಿಲ್ಲ. ಪದವೀಧರ ▶ 8ನೇ ಪುಟಕ್ಕೆ

7,901 ಮಂದಿ ತಿರಸ್ಕೃತರು

ಮೈಸೂರು: ಜೂನ್ 13ರಂದು ನಡೆದಿದ್ದ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ 7,901 ಮತಗಳು ತಿರಸ್ಕೃತಗೊಂಡಿವೆ. ಬುಧವಾರ ಮತ ಎಣಿಕೆ ಕಾರ್ಯ ಆರಂಭವಾಗಿ ಗುರುವಾರ ಮಧ್ಯಾಹ್ನ ಅಂತ್ಯಗೊಂಡಿದ್ದು, ಒಟ್ಟು 1,41,963 ನೋಂದಾಯಿತ ಪದವೀಧರರ ▶ 8ನೇ ಪುಟಕ್ಕೆ

ಮಧು ಜಿ. ಮಾದೇಗೌಡ (ಕಾಂಗ್ರೆಸ್)	46082
ಮೈ.ವಿ.ರವಿಶಂಕರ್ (ಬಿಜೆಪಿ)	33878
ಹೆಚ್.ಕೆ.ರಾಮು (ಜೆಡಿಎಸ್)	19630
ಪ್ರಸನ್ನ ಎನ್. ಗೌಡ (ರೈತ ಸಂಘ, ದಸಂಸ ಬೆಂಬಲಿತ)	7587
ಎನ್.ಎಸ್.ವಿನಯ್	3864
ಡಾ. ಬಿ.ಹೆಚ್. ಚನ್ನಕೇಶವಮೂರ್ತಿ (ಬಿಎಸ್ಪಿ ಬೆಂಬಲಿತ)	2836
ರಫತ್‌ವುಲ್ಲಾಖಾನ್ (ಎಸ್‌ಡಿಪಿಐ)	788
ಕೆ.ಪಿ.ಪ್ರಸನ್ನಕುಮಾರ್	710
ವಾಟಾಳ್ ನಾಗರಾಜು (ವಾಟಾಳು ಪಕ್ಷ)	516
ಕಂದಲ್ಲಿ ಮಹೇಶ್	323
ಡಾ. ಜೆ.ಸಿ.ರವೀಂದ್ರ	222
ಎಸ್.ರಾಮು	186
ಡಾ.ಪುಟ್ಟಸ್ವಾಮಿ	120
ಸಿ.ಕಾವ್ಯಶ್ರೀ	98
ಎನ್.ವೀರಭದ್ರಸ್ವಾಮಿ (ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ)	97
ಹೆಚ್.ಪಿ.ಸುಜಾತ	78
ಡಾ. ಜೆ.ಅರುಣ್‌ಕುಮಾರ್	44
ಡಾ. ಹೆಚ್.ಎಲ್.ವೆಂಕಟೇಶ್	42
ಎನ್.ರಾಜೇಂದ್ರಸಿಂಗ್ ಬಾಬು	22
ತಿರಸ್ಕೃತ ಮತಗಳು	7901
ಚಲಾವಣೆಯಾದ ಮತಗಳು	99304

ಪ್ರಧಾನಿ ಮೋದಿ ರಾಜ್ಯ ಭೇಟಿ: ಬಿಜೆಪಿ ಹವಾ ಸೃಷ್ಟಿಸಲು ಸಿದ್ಧತೆ



ಬೆಂಗಳೂರು, ಜೂ.16 (ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿ ಅವರ ಎರಡು ದಿನಗಳ ರಾಜ್ಯ ಪ್ರವಾಸವನ್ನೇ ಬಿಜೆಪಿ ಪರವಾದ ಅಲೆ ಸೃಷ್ಟಿಸಲು ರಾಜ್ಯ ಘಟಕ ಮುಂದಾಗಿದೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದ ನಂತರ ಹಗರಣ ಮತ್ತು ಭ್ರಷ್ಟಾಚಾರದ ಆರೋಪಗಳಿಂದ ಪಕ್ಷ ಮತ್ತು ಸರ್ಕಾರಕ್ಕೆ ಹಿನ್ನಡೆಯಾಗಿದೆ. ಪ್ರತಿಪಕ್ಷ ಕಾಂಗ್ರೆಸ್ ಮಾಡುತ್ತಿರುವ ಅಪಪ್ರಚಾರದಿಂದ ಪಕ್ಷ ಮತ್ತು ಸರ್ಕಾರಕ್ಕೆ ಭಾರೀ ಹಿನ್ನಡೆಯಾಗಿದೆ. ವಿಧಾನಸಭೆ ಚುನಾವಣೆಗೆ ಇನ್ನು ಕೇವಲ 9 ತಿಂಗಳು ಮಾತ್ರ ಬಾಕಿ ಉಳಿದಿದ್ದು, ಈ ಅಲ್ಪಾವಧಿಯಲ್ಲಿ ಜನರ ಮನಸ್ಸು ಗೆಲ್ಲಲು ನರೇಂದ್ರ ಮೋದಿ ಅವರನ್ನೇ ಮುಂದಿಟ್ಟುಕೊಂಡು ಚುನಾವಣೆ ಎದುರಿಸುವುದು.

ಚುನಾವಣೆಗೆ ಪೂರ್ವವಾಗಿ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿರುವ ಮೋದಿ ಅವರ ಈ ಭೇಟಿಯಿಂದಲೇ ಪಕ್ಷದ ಹವಾ ಸೃಷ್ಟಿಗೆ ರಾಜ್ಯ ನಾಯಕರು ಕಾರ್ಯಕ್ರಮ ರೂಪಿಸಿದ್ದಾರೆ. ನಿನ್ನೆ ಅರಮನೆ ಆವರಣದಲ್ಲಿ ಮೋದಿ ಅವರ ಕಾರ್ಯಕ್ರಮವನ್ನು ರಾಜಕೀಯವಾಗಿ ಬಳಸಿಕೊಳ್ಳುವ ಸಂಬಂಧ ಆರ್‌ಎಸ್‌ಎಸ್ ಮತ್ತು ಬಿಜೆಪಿ ನಾಯಕರು ಮುಂಚೂಣಿ ಕಾರ್ಯಕರ್ತರಿಗೆ ಪಾಠ ಮಾಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೇರಿದಂತೆ ▶ 8ನೇ ಪುಟಕ್ಕೆ

- ವಿವಿಧ ಹಗರಣ, ಆರೋಪಗಳಿಂದ ಹಿನ್ನಡೆಯಾಗಿರುವ ಬಿಜೆಪಿಗೆ ಮೋದಿಯೇ 'ವರ್ಚಸ್ಸು ವರ್ಧಕ'
- ಮೋದಿ ಭೇಟಿ ವೇಳೆ ಹಲವು ಕಾರ್ಯಕ್ರಮಗಳ ಮೂಲಕ ಕೇಸರಿಮಯವಾಗಿಸಲು ನಿರ್ಧಾರ

> ಪ್ರಧಾನಿ ಮೋದಿ ಭೇಟಿ ವೇಳೆ ಅವರು ಭಾಗವಹಿಸುವ ಕಾರ್ಯಕ್ರಮದಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಾರ್ಯಕರ್ತರು ಸೇರುವುದಲ್ಲದೆ, ಒಂದು ಕಾರ್ಯಕ್ರಮದಿಂದ ಮತ್ತೊಂದು ಕಾರ್ಯಕ್ರಮಕ್ಕೆ ತೆರಳುವ ಮಾರ್ಗದುದ್ದಕ್ಕೂ ಕೇಸರೀಕರಣಗೊಳಿಸುವುದು. ಇನ್ನು ಮುಂದೆ ಪ್ರತಿ ತಿಂಗಳು ಚುನಾವಣೆ ಮುಗಿಯುವವರೆಗೂ ರಾಷ್ಟ್ರೀಯ ನಾಯಕರು ಅನೇಕ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಜ್ಯಕ್ಕೆ ಬರುತ್ತಾರೆ. ಆಗ ಇದೇ ತಂತ್ರ ಅನುಸರಿಸುವಂತೆ ಕಾರ್ಯಕರ್ತರಿಗೆ ಬಿಜೆಪಿ ನಾಯಕರು ತಿಳಿಸಿದ್ದಾರೆ.

ಪ್ರಧಾನಿ ರಾಜ್ಯ ಪ್ರವಾಸದ ತಾತ್ಕಾಲಿಕ ವೇಳಾಪಟ್ಟಿ ಪ್ರಕಟ

ಮೈಸೂರು, ಜೂ.16– ಪ್ರಧಾನಿ ಮೋದಿ ಅವರ ಕರ್ನಾಟಕ ಹಾಗೂ ಕೇರಳ ಪ್ರವಾಸದ ತಾತ್ಕಾಲಿಕ ವೇಳಾಪಟ್ಟಿ ಲಭ್ಯವಾಗಿದ್ದು, ಮೈಸೂರಿನಲ್ಲಿ ಯೋಗ ದಿನಾಚರಣೆ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ. ದೆಹಲಿಯಿಂದ ಜೂ.20ರಂದು ಬೆಳಗ್ಗೆ 11.55ಕ್ಕೆ ಬೆಂಗಳೂರಿಗೆ ಆಗಮಿಸಲಿರುವ ಪ್ರಧಾನಿ ಮೋದಿ, ಮಧ್ಯಾಹ್ನ 12.30ಕ್ಕೆ ಕೊಮ್ಮಘಟ್ಟದಲ್ಲಿ ಬೆಂಗಳೂರು ಉಪನಗರ ರೈಲ್ವೆ ಯೋಜನೆ ಇನ್ನಿತರ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. 2.30ಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಿ, ಬೇಸ್ ಯೂನಿವರ್ಸಿಟಿಯನ್ನು ಉದ್ಘಾಟಿಸಲಿದ್ದಾರೆ.

ಮೈಸೂರಿಗೆ ಅಂದು ಸಂಜೆ 4.55ಕ್ಕೆ ಆಗಮಿಸಲಿರುವ ಪ್ರಧಾನಿ, ಮಹಾರಾಜ ಕಾಲೇಜು ಮೈದಾನದಲ್ಲಿ ಆಯಿಷ್ ಉತ್ಕೃಷ್ಟ ಕೇಂದ್ರ ಉದ್ಘಾಟನೆಯನ್ನು ಸಾಂಕೇತಿಕವಾಗಿ ನೆರವೇರಿಸಿ, ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ಸಂಜೆ 6.30ಕ್ಕೆ ಸುತ್ತೂರು ಮಠಕ್ಕೆ ಭೇಟಿ ನೀಡಿ ವೇದ ಪಾಠಶಾಲೆ ಉದ್ಘಾಟನೆ ಹಾಗೂ ಯೋಗ ಮತ್ತು ಭಕ್ತಿ ವ್ಯಾಖ್ಯಾನಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ರಾತ್ರಿ 7.30ಕ್ಕೆ ಚಾಮುಂಡೇಶ್ವರಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ, ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಮರುದಿನ(ಜೂ.21) ಬೆಳಗ್ಗೆ 6.30ಕ್ಕೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಲಿದ್ದು, ನಂತರವೂ ಸಮಯ ಕಾಯ್ದಿರಿಸಿರುವುದರಿಂದ ಇನ್ನಿತರ ಕಾರ್ಯಕ್ರಮಗಳ ತಳ್ಳಿ ಹಾಕುವಂತಿಲ್ಲ. ಕೊನೆಗೆ 9.25ಕ್ಕೆ ಕೇರಳಕ್ಕೆ ಪ್ರಯಾಣ ಬೆಳೆಸಲಿದ್ದಾರೆ.

ಅಗ್ನಿಪಥ ಯೋಜನೆ

ಅಗ್ನಿವೀರರಿಗೆ ಮೂರು ವರ್ಷದ ಪದವಿ ಕೋರ್ಸ್

ಕೇಂದ್ರ ಶಿಕ್ಷಣ ಸಚಿವಾಲಯ ಪ್ರಕಟ

ನವದೆಹಲಿ, ಜೂ.16– ಕೇಂದ್ರ ಸರ್ಕಾರ ನಿರುದ್ಯೋಗ ಹೋಗಲಾಡಿಸಲು 'ಅಗ್ನಿಪಥ' ಯೋಜನೆಯಡಿ 46 ಸಾವಿರ ಅಗ್ನಿವೀರರನ್ನು 2023ರ ಜುಲೈನಿಂದ ನೇಮಿಸಿಕೊಳ್ಳಲಿದೆ. ಇನ್ನು 3 ತಿಂಗಳಲ್ಲಿ ಈ ಹುದ್ದೆಗೆ ನೇಮಕ ಪ್ರಕ್ರಿಯೆ ಮುಗಿಸುವ ಉದ್ದೇಶ ಹೊಂದಿದೆ ಕೇಂದ್ರ ಸರ್ಕಾರ. ಅತ್ಯಾಕರ್ಷಕ ಸಂಬಳ, ಭತ್ಯೆ, ಸೌಲಭ್ಯಗಳ ಜತೆಗೆ ಪದವಿ ಕೋರ್ಸ್ ನೀಡುವುದಾಗಿ ಘೋಷಣೆ ಮಾಡಿದೆ.



ಕೇಂದ್ರ ಸರ್ಕಾರದ 'ಅಗ್ನಿಪಥ' ಯೋಜನೆ ಅಡಿಯಲ್ಲಿ ಸೇನೆಗೆ ಸೇರುವ ಅಗ್ನಿವೀರರಿಗೆ ಕೌಶಲ ಆಧಾರಿತ 3 ವರ್ಷಗಳ ವಿಶೇಷ ಪದವಿ ಕೋರ್ಸ್ ಅನ್ನು ಕೇಂದ್ರ ಶಿಕ್ಷಣ ಸಚಿವಾಲಯದಡಿ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ ಈ ಪದವಿ ಕೋರ್ಸ್ ಆರಂಭಿಸಲಿದ್ದು, ಇದಕ್ಕೆ ಭಾರತ ಮತ್ತು ವಿದೇಶಗಳಲ್ಲಿ ಮಾನ್ಯತೆ ದೊರೆಯಲಿದೆ. ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಈ ಕಾರ್ಯಕ್ರಮ ಜಾರಿಗೆ ಇಗ್ನೊ (IGNOU) ಜತೆಗೆ ಒಡಂಬಡಿಕೆ ಮಾಡಿಕೊಳ್ಳಲಿವೆ. ಅಗ್ನಿವೀರರು ಪಡೆಯುವ ಸೇವಾ ತರಬೇತಿಯನ್ನು ಪದವಿ ಕೋರ್ಸ್‌ನಲ್ಲಿ ಕ್ರೆಡಿಟ್‌ಗಳಾಗಿ ಗುರುತಿಸಲಾಗುತ್ತದೆ. ಈ ಮೂಲಕ ಅವರು ತಮ್ಮ ಭವಿಷ್ಯದಲ್ಲಿ ತಮಗಿಷ್ಟವಾದ ನಾಗರಿಕ ವೃತ್ತಿಜೀವನ ▶ 6ನೇ ಪುಟಕ್ಕೆ

ಕೇಂದ್ರ ಬಿಜೆಪಿ ಸರ್ಕಾರದ ದ್ವೇಷ ರಾಜಕಾರಣ ಖಂಡಿಸಿ

ಕಾಂಗ್ರೆಸ್ ಭಾರೀ ಪ್ರತಿಭಟನೆ

● ಇಡೀ ದಿನ ಹೈಡ್ರಾಮ, ರಾಜ್ಯಪಾಲರಿಗೆ ಮನವಿ ಸಲ್ಲಿಕೆ ● ವಿಚಾರಣೆ ನೆಪದಲ್ಲಿ ಇಡಿ ಮೂಲಕ ರಾಹುಲ್, ಸೋನಿಯಾಗೆ ಕಿರುಕುಳ ಆರೋಪ

ಬೆಂಗಳೂರು, ಜೂ.16(ಕೆಎಂಶಿ)–ಕೇಂದ್ರ ಸರ್ಕಾರದ ದ್ವೇಷ ರಾಜಕಾರಣದ ಫಲವಾಗಿ ಜಾರಿ ನಿರ್ದೇಶನಾಲಯವು (ಇ.ಡಿ.) ಎಐಸಿಸಿ ಅಧ್ಯಕ್ಷರಾದ ಸೋನಿಯಾ ಗಾಂಧಿ ಹಾಗೂ ಮುಖಂಡ ರಾಹುಲ್ ಗಾಂಧಿ ಅವರಿಗೆ ಅನಗತ್ಯ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ಕೆಪಿಸಿಸಿ ಕಚೇರಿಯಿಂದ ರಾಜಭವನ ಚಲೋ ಹಮ್ಮಿಕೊಂಡಿದ್ದ ಕಾಂಗ್ರೆಸ್ ನಾಯಕರು ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದರು. ಕಾಂಗ್ರೆಸ್ ಪ್ರತಿಭಟನೆಯಿಂದಾಗಿ ಟ್ರಾಫಿಕ್ ಜಾಮ್ ಉಂಟಾಗಿ ಜನರು ಕಿರಿಕಿರಿ ಅನುಭವಿಸುವಂತಾಯಿತು.

ದಿಲ್ಲಿಯಲ್ಲಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಮುಖಂಡರ ಮೇಲೆ ಪೊಲೀಸ್ ದೌರ್ಜನ್ಯ ಖಂಡಿಸಿ ನಡೆಸಿದ ಪ್ರತಿಭಟನೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ ಹರಿಪ್ರಸಾದ್, ಮಾಜಿ ಸಿಎಂ ವೀರಪ್ಪ ಮೊಯ್ಲಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಧ್ರುವ ನಾರಾಯಣ್, ಮಾಜಿ ಡಿಸಿಎಂ ಡಾ.ಜಿ.ಪರಮೇಶ್ವರ, ಮಾಜಿ ಸಚಿವರಾದ ಪಿ.ಟಿ.ಪರಮೇಶ್ವರ ನಾಯಕ್, ಡಾ.ಎಚ್.ಸಿ ಮಹದೇವಪ್ಪ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ರಾಜ್ಯಪಾಲರ ಭೇಟಿಯ ನಂತರ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ದೇಶದಲ್ಲಿ ಆಗುತ್ತಿರುವ ಅನ್ಯಾಯ, ಪ್ರಜಾಪ್ರಭುತ್ವದ ಕಗ್ಗೊಲೆ, ಕೇಂದ್ರ ಸರ್ಕಾರದ ಸಂವಿಧಾನ ವಿರೋಧಿ ನೀತಿ ಖಂಡಿಸಿ ಹೋರಾಟ ಮಾಡುತ್ತಿದ್ದೇವೆ. ನಮ್ಮ ನಾಯಕರಾದ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರಿಗೆ ಕಿರುಕುಳ ನೀಡುವ ಪ್ರಯತ್ನ ನಡೆದಿದೆ. ಅವರ ವಿರುದ್ಧ ಸುಳ್ಳು ಕೇಸು ದಾಖಲಿಸಿ, ಮಾನಸಿಕ ಕಿರುಕುಳ ನೀಡಿ, ಬಂಧಿಸಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ನಮ್ಮ ನಾಯಕರು ದೇಶವನ್ನು ಒಗ್ಗೂಡಿಸಲು ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ಭಾರತ ಜೋಡೋ ಪಾದಯಾತ್ರೆಯನ್ನು ಘೋಷಿಸಿದ ನಂತರ, ಅವರ ಯಾತ್ರೆ ಯಶಸ್ವಿಯಾಗಿ ಅವರ ಖ್ಯಾತಿ ಎಲ್ಲಿ ಹೆಚ್ಚುತ್ತದೆಯೋ, ಎಲ್ಲಿ ನಮ್ಮ ಸರ್ಕಾರ ಅಪಾಯಕ್ಕೆ ಸಿಲುಕುತ್ತದೆಯೋ ಎಂದು ಭಯಭೀತರಾಗಿ ಕೇಂದ್ರ ಸರ್ಕಾರ ಈ ಕೆಲಸಕ್ಕೆ ಕೈ ಹಾಕಿದೆ. ನಮ್ಮ ನಾಯಕರ ತ್ಯಾಗ ಹಾಗೂ ಹೋರಾಟದ ಹೆಸರು ಹಾಳು ಮಾಡಲು ಪ್ರಯತ್ನಿಸುತ್ತಿದೆ ▶ 6ನೇ ಪುಟಕ್ಕೆ




ಪ್ರತಿಭಟನೆಯಲ್ಲಿ ಸಿದ್ದರಾಮಯ್ಯ ಮಾತನಾಡುತ್ತಿರುವುದು.



ಬೆಂಗಳೂರಿನಲ್ಲಿ ಗುರುವಾರ ಕರ್ನಾಟಕ ಪ್ರದೇಶ ಕಾಂಗ್ರೆಸ್ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಕಾಂಗ್ರೆಸ್ ಪ್ರತಿಭಟನೆಗೆ ಗೃಹ ಸಚಿವರ ಖಂಡನೆ



ಬೆಂಗಳೂರು,ಜೂ.16(ಕೆಎಂಶಿ)–ತನಿಖಾ ಸಂಸ್ಥೆಯಾದ ಇಡಿ ವಿರುದ್ಧ ಕಾಂಗ್ರೆಸ್ ನಾಯಕರ ಪ್ರತಿಭಟನೆಯನ್ನು ಖಂಡಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, ಕಾಂಗ್ರೆಸ್ ನಾಯಕರ ವರ್ತನೆ ಗುಲಾಮಿತನದ ಅನಾವರಣ ಎಂದು ಟೀಕಿಸಿದರು. ಕಾಂಗ್ರೆಸ್ ನಾಯಕರ ವರ್ತನೆಯಿಂದ ದೇಶದಲ್ಲಿ ಕಾಂಗ್ರೆಸ್ ನಾಯಕರಿಗೊಂದು ಕಾನೂನು, ಜನಸಾಮಾನ್ಯರಿಗೆ ಇನ್ನೊಂದು ಕಾನೂನು, ಸಂವಿಧಾನ ಇದೆಯೇ ಎಂದು ಜನತೆಯೇ ಪ್ರಶ್ನಿಸುತ್ತಿದ್ದಾರೆ. ಕಾಂಗ್ರೆಸ್‌ನ ನಾಯಕರು ಹಾಗೂ ಅವರ ಹಿಂಬಾಲಕರು ಯಾಕೆ ಪ್ರತಿಭಟನೆ ಮಾಡಬೇಕು. 30 ವರ್ಷಗಳ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಅದರ ನಾಯಕರಿಗೆ ಸಾಂವಿಧಾನಿಕ ಸಂಸ್ಥೆಗಳ ಮೇಲೆ ನಂಬಿಕೆ ಇಲ್ಲದಿದ್ದರೆ ಹೇಗೆ ಎಂದು ಪ್ರಶ್ನಿಸಿದರು. ಕೋವಿಡ್ ವಿರುದ್ಧ ಹೋರಾಟ ಇನ್ನೂ ನಡೆಯುತ್ತಿದೆ, ಬೆಂಗಳೂರಿನ 2 ಶಾಲೆಗಳಲ್ಲಿ ಕೊರೊನಾ ಸ್ಫೋಟಗೊಂಡಿದ್ದು, ಎಲ್ಲಾ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗುತ್ತಿದೆ. ಇಂಥ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರು ಜನ ಸೇರಿಸುವುದು, ಅಪಾಯಕ್ಕೆ ಆಹ್ವಾನ ಕೊಟ್ಟಂತೆ ಎಂದರು.







ಜೂ.19ರಂದು ಪ್ರಗತಿಪರ, ಸಮಾಜವಾದಿ ಚಿಂತಕ ಪ್ರೊ.ಕೆ.ರಾಮದಾಸ್ ನೆನಪು ಕಾರ್ಯಕ್ರಮ

ಮೈಸೂರು,ಜೂ.16(ಪಿಎಂ)–ದೇಸಿರಂಗ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಜೂ.19ರಂದು ವಿಚಾರವಾದಿ, ಪ್ರಗತಿಪರ ಹಾಗೂ ಸಮಾಜವಾದಿ ಚಿಂತಕ ಪ್ರೊ.ಕೆ. ರಾಮದಾಸ್ ನೆನಪಿನಲ್ಲಿ ಸಂವಾದ, ಪುಸ್ತಕ ಬಿಡುಗಡೆ ಹಾಗೂ ಲೇಖನ ಸ್ಪರ್ಧೆ ಬಹುಮಾನ ವಿತರಣಾ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಂಸ್ಥೆ ಕಾರ್ಯದರ್ಶಿ ಕೃಷ್ಣಜನಮನ ತಿಳಿಸಿದರು.


ಪ್ರೊ.ಕೆ.ರಾಮದಾಸ್

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನ್ಯಾಯವಾದಿ ಪ್ರೊ.ರವಿವರ್ಮ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬಳಿಕ ಸಂವಾದ ಮತ್ತು ಮೇಷ್ಟ್ರು ನೆನಪು ಶೀರ್ಷಿಕೆಯಡಿ 'ಪ್ರೇಮ ವಿವಾಹಗಳಿಂದ ಸಾಮಾಜಿಕ ಬದಲಾವಣೆ ಸಾಧ್ಯ: ಸಾಧಕ–ಬಾಧಕಗಳು' ಕುರಿತು ಸಂವಾದ ನಡೆಯಲಿದೆ. ಸಾರ್ವಜನಿಕರು ಸಂವಾದದಲ್ಲಿ ಪಾಲ್ಗೊಳ್ಳಬಹುದು. ಜೊತೆಗೆ ಪ್ರೇಮ ವಿವಾಹವಾಗಿ ಜಾತಿ–ಮತದ ಭೇದವಿಲ್ಲದೆ ಬದುಕುತ್ತಿರುವ 30 ಕಿರಿ–ಹಿರಿ ದಂಪತಿಗಳು ಸಂವಾದದಲ್ಲಿ ಭಾಗವಹಿಸಲಿದ್ದಾರೆ ಎಂದರು.

ನಂತರ 'ಪ್ರಜಾಪ್ರಭುತ್ವ ಮತ್ತು ವಾಸ್ತವತೆ' ಪುಸ್ತಕವನ್ನು ಚಿಂತಕ ಸನತ್‌ಕುಮಾರ ಬೆಳಗಲಿ ಬಿಡುಗಡೆ ಮಾಡಲಿದ್ದಾರೆ. ಈ ಕಾರ್ಯಕ್ರಮದ ಅಂಗವಾಗಿ 'ಪ್ರೇಮ ವಿವಾಹಗಳಿಂದ ಸಾಮಾಜಿಕ ಬದಲಾವಣೆ ಸಾಧ್ಯವೇ? ; ಸಾಧಕ–ಬಾಧಕಗಳು' ಕುರಿತು ಲೇಖನ ಸ್ಪರ್ಧೆ ನಡೆಸಲಾಗಿತ್ತು. ರಾಜ್ಯದ ವಿವಿಧ ಭಾಗಗಳಿಂದ 27 ಮಹಿಳೆಯರೂ ಸೇರಿದಂತೆ 38 ಮಂದಿ ತಮ್ಮ ಲೇಖನಗಳನ್ನು ಬರೆದು ಕಳುಹಿಸಿದ್ದು, ಅವುಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಕ್ರಮವಾಗಿ 3 ಸಾವಿರ ರೂ., 2 ಸಾವಿರ ರೂ. ಮತ್ತು ಸಾವಿರ ರೂ. ನಗದು ಬಹುಮಾನಗಳನ್ನು ಕಾರ್ಯಕ್ರಮದಲ್ಲಿ ನೀಡಲಾಗುವುದು. ಚಿಂತಕಿ ಡಾ.ವಸುಂಧರ ಭೂಪತಿ ಬಹುಮಾನ ವಿತರಿಸಲಿದ್ದಾರೆ ಎಂದರು.

ಮಕ್ಕಳಿಗೆ ಅಸಮಾನತೆ ಪಾಠ: ಇದೇ ವೇಳೆ ಮಾತನಾಡಿದ ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಪ್ರೊ.ಕೆ.ರಾಮದಾಸ್ ಸಾಮಾಜಿಕ ನ್ಯಾಯಪರ ಹೋರಾಟದ ದೊಡ್ಡ ದನಿ. ಇಂದು ದೇಶದಲ್ಲಿ ಸನಾತನಿಗಳು (ಜಾತಿ ಪದ್ಧತಿ ಪರವಾಗಿರುವವರು) ವಿಜೃಂಭಿಸುತ್ತಿದ್ದಾರೆ. ಇದರ ಫಲವಾಗಿಯೇ ಪರಿಷ್ಕರಣೆ ನೆಪದಲ್ಲಿ ಪಠ್ಯ ಪುಸ್ತಕಗಳಲ್ಲಿ ಅಸಮಾನತೆ ಪರವಾದ ಅಂಶಗಳನ್ನು ಅಳವಡಿಸಲಾಗಿದೆ. ಆ ಮೂಲಕ ಮಕ್ಕಳ ಮನಸ್ಸಿನಲ್ಲಿ ಅಸಮಾನತೆ ತುಂಬುವ ಪ್ರಯತ್ನ ನಡೆಸಲಾಗಿದೆ. ಇಂತಹ ವಿಚಾರಗಳ ವಿರುದ್ಧ ದನಿ ಎತ್ತಲು ಪ್ರೊ.ಕೆ.ರಾಮದಾಸ್ ನೆನಪು ಕಾರ್ಯಕ್ರಮ ಶಕ್ತಿ ನೀಡಲಿದೆ ಎಂದು ಹೇಳಿದರು. ಸಂಸ್ಥೆ ಖಜಾಂಚಿ ದಿನಮಣಿ, ಮುಖಂಡ ಈ.ಧನಂಜಯ ಗೋಷ್ಠಿಯಲ್ಲಿದ್ದರು.

ಇಂದಿನಿಂದ ಮೈಸೂರಲ್ಲಿ 2 ದಿನ ಹೈ ಲೈಫ್ ಎಕ್ಸಿಬಿಷನ್

ಮೈಸೂರು,ಜೂ.16(ಪಿಎಂ)– ಹೈ ಲೈಫ್ ಎಕ್ಸಿಬಿಷನ್ಸ್ ಕಂಪನಿ ವತಿಯಿಂದ ಮೈಸೂರಿನ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಜೂ.17 ಮತ್ತು 18ರಂದು ಉಡುಪು, ಆಭರಣ, ಗೃಹಾಲಂಕಾರ ವಸ್ತುಗಳು ಸೇರಿದಂತೆ ನವನವೀನ ಜೀವನಶೈಲಿಯ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಾಗಿದೆ ಎಂದು ಕಂಪನಿ ವ್ಯವಸ್ಥಾಪಕ ನಿರ್ದೇಶಕ ಡೊಮಿನಿಕ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹೈ ಲೈಫ್ ಎಕ್ಸಿಬಿಷನ್ಸ್ ಕಂಪನಿ ಸಂಯೋಜಕಿ ಸೋಮಿಕಾ ಮಾತನಾಡಿದರು. ಕಂಪನಿ ನಿರ್ದೇಶಕ ಡೊಮಿನಿಕ್ ಚಿತ್ರದಲ್ಲಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹೈ ಲೈಫ್ ಎಕ್ಸಿಬಿಷನ್ಸ್' ಸಿಗ್ನೇಚರ್ ಫ್ಯಾಷನ್, ಲೈಫ್‌ಸ್ಟೈಲ್ ಮತ್ತು ಐಷಾರಾಮಿ ಪ್ರದರ್ಶನದ ಭಾರತದ ಅತಿ ದೊಡ್ಡ ಕಂಪನಿಯಾಗಿದೆ. ನಮ್ಮ ಪ್ರದರ್ಶನದಲ್ಲಿ ಒಂದೇ ಸೂರಿನಡಿ ಗ್ರಾಹಕರಿಗೆ ವಿಭಿನ್ನ, ಬ್ರ್ಯಾಂಡೆಡ್ ಉಡುಪುಗಳು, ನವೀನ ಮಾದರಿಯ ಆಕರ್ಷಕ ಆಭರಣಗಳು, ಗೃಹಾಲಂಕಾರ ವಸ್ತುಗಳು, ಗೃಹ ಬಳಕೆ ಸಾಮಗ್ರಿಗಳು ದೊರೆಯಲಿವೆ ಎಂದರು.

ಮೈಸೂರಿನ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ನಡೆಯುವ ಎರಡು ದಿನಗಳ ಪ್ರದರ್ಶನಕ್ಕೆ ಬೆಳಗ್ಗೆ 9.30ರಿಂದ ರಾತ್ರಿ 10.30ರವರೆಗೆ ಗ್ರಾಹಕರು ಭೇಟಿ ನೀಡಬಹುದು. ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ ಎಂದು ತಿಳಿಸಿದರು.

ಕಂಪನಿಯ ಸಂಯೋಜಕಿ ಸೋಮಿಕಾ ಮಾತನಾಡಿ, ದೇಶ–ವಿದೇಶಗಳ 500ಕ್ಕೂ ಹೆಚ್ಚಿನ ವಿವಿಧ ಬಗೆಯ ಉತ್ಪನ್ನಗಳು ಪ್ರದರ್ಶನದಲ್ಲಿ ಇರಲಿವೆ. ಹೊಸ ಟ್ರೆಂಡ್ ಬ್ರ್ಯಾಂಡ್‌ಗಳಿಂದ ಕೂಡಿದ ಉತ್ಪನ್ನಗಳನ್ನು ಶಾಪಿಂಗ್ ಮಾಡಬಹುದು. 100 ರೂ.ನಿಂದ ಲಕ್ಷಾಂತರ ರೂ.ವರೆಗಿನ ಉತ್ಪನ್ನಗಳು ದೊರೆಯಲಿದೆ ಎಂದರು. ಎರಡು ದಿನಗಳ ಪ್ರದರ್ಶನಕ್ಕೆ ಜೂ.17ರಂದು ಬೆಳಗ್ಗೆ 10ಕ್ಕೆ ಚಾಲನೆ ನೀಡಲಾಗುವುದು. ಈ ಸಂದರ್ಭದಲ್ಲಿ ಲಘು ಉದ್ಯೋಗ ಭಾರತಿ ಕರ್ನಾಟಕ ಘಟಕದ ಉಪಾಧ್ಯಕ್ಷೆ ಛಾಯಾ ನಂಜಪ್ಪ, ಡಿಆರ್‌ಸಿ ಸಿನಿಮಾಸ್‌ನ ವ್ಯವಸ್ಥಾಪಕ ಪಾಲುದಾರರಾದ ವೈಶಾಲಿ ಸೇರಿದಂತೆ 20ಕ್ಕೂ ಮಂದಿ ವಿವಿಧ ಕ್ಷೇತ್ರದ ಮಹಿಳಾ ಸಾಧಕರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು.

'ಮೈ ಒಪಿನಿಯನ್'ಗೆ ಟ್ರೋಫಿ


ಬುಧವಾರ ಮೈಸೂರು ರೇಸ್ ಕೋರ್ಸ್‌ನಲ್ಲಿ ನಡೆದ ರೇಸ್‌ನಲ್ಲಿ ವಿಜೇತ ಕುದುರೆ 'ಮೈ ಒಪಿನಿಯನ್' ತರಬೇತುದಾರ ಬಿ.ಸುರೇಶ್‌ಗೆ ಎಂಆರ್‌ಸಿ ಅಧ್ಯಕ್ಷ ವೈ.ಬಿ.ಗಣೇಶ್ 'ದಿ ಕಾವೇರಿ ಮಿಲಿಯನ್' ಟ್ರೋಫಿ ಪ್ರದಾನ ಮಾಡಿದರು. ಚಿತ್ರದಲ್ಲಿ ಕೆ.ಎಂ.ಚಂದ್ರೇಗೌಡ, ಹೆಚ್.ಕೆ.ರಮೇಶ್, ಜಿ.ಕೆ.ಬಾಲಕೃಷ್ಣನ್, ಅಲ್.ರಂ.ನಾಗಪ್ಪನ್, ಟಿ.ಡಿ.ಮಹೇಶ್, ಬಿ.ಯು. ಚೆಂಗಪ್ಪ, ಜಯರಾಜ್ ಅರಸ್, ಬಿ.ಎನ್.ಕಾರಿಯಪ್ಪ, ವೈ.ಪಿ.ಉದಯ ಶಂಕರ್ ಇದ್ದಾರೆ.

ಜು.1ರಿಂದ ಪೌರಕಾರ್ಮಿಕರ ಮುಷ್ಕರ

ನೇರ ಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು, ಕಸ ಸಾಗಾಣಿಕೆ ವಾಹನ ಚಾಲಕರ ಖಾಯಂಗೆ ಆಗ್ರಹ

ಮೈಸೂರು,ಜೂ.16(ಪಿಎಂ)–ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ನೇರಪಾವತಿ ಪೌರ ಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರನ್ನು ಖಾಯಂಗೊಳಿಸಲು ಆಗ್ರಹಿಸಿ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾ ಸಂಘದಿಂದ ಜು.1ರಿಂದ ಬೇಡಿಕೆ ಈಡೇರುವವರೆಗೆ ಮುಷ್ಕರ ನಡೆಸಲಾಗುವುದು ಎಂದು ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮಹಾನಗರ ಪಾಲಿಕೆಯ 2005 ಮಂದಿ ಸೇರಿದಂತೆ ಇಡೀ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಣಿಕೆ ವಾಹನ ಚಾಲಕರು ಸೇರಿದಂತೆ ಒಟ್ಟು 38,400 ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರನ್ನು ಖಾಯಂಗೊಳಿಸಬೇಕು ಎಂಬುದು ನಮ್ಮ ಬೇಡಿಕೆ ಎಂದರು.

ಈಗಾಗಲೇ ಈ ಸಂಬಂಧ ಕಳೆದ ತಿಂಗಳು ಸಹ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಗಡುವು ನೀಡಲಾಗಿತ್ತು. ಆದರೆ ಸರ್ಕಾರ ಸ್ಪಂದಿಸಿಲ್ಲ. ಹೀಗಾಗಿ ರಾಜ್ಯಾದ್ಯಂತ ಮುಷ್ಕರಕ್ಕೆ ಮುಂದಾಗಿದ್ದೇವೆ. ಜು.1ರಿಂದ 3 ದಿನಗಳ ಕಾಲ ಖಾಯಂ ಆಗದ ಸದರಿ ಕಾರ್ಮಿಕರು ಮಾತ್ರ ಕೆಲಸ ಸ್ಥಗಿತಗೊಳಿಸಲಿದ್ದಾರೆ. ಅಷ್ಟರೊಳಗೂ ಸರ್ಕಾರ ಬೇಡಿಕೆ ಈಡೇರಿಸದಿದ್ದರೆ, ಖಾಯಂ ಪೌರಕಾರ್ಮಿಕರು ಬೆಂಬಲ ಸೂಚಿಸಿ ಮುಂದುವರೆಯುವ ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ. ಜೊತೆಗೆ ಸಾಂಕೇತಿಕ ಪ್ರತಿಭಟನೆಯನ್ನೂ ನಡೆಸಲಾಗುವುದು ಎಂದು ತಿಳಿಸಿದರು.

ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಅಧ್ಯಕ್ಷ ಎನ್.ಮೋಹನ್‌ಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಟಿ.ಶ್ರೀನಿವಾಸ, ಸಿ.ಆರ್.ರಾಚಯ್ಯ, ರಾಜ್ಯ ನಗರಪಾಲಿಕೆ, ನಗರಸಭೆ ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಜಿಲ್ಲಾಧ್ಯಕ್ಷ ಚೆಲುವರಾಜು ಮತ್ತಿತರರು ಗೋಷ್ಠಿಯಲ್ಲಿದ್ದರು.

ನೀರಿನ ಸಂಪಿಗೆ ಬಿದ್ದು ಕಾರ್ಮಿಕ ಸಾವು

ಮೈಸೂರು,ಜೂ.16–ನೀರಿನ ಸಂಪಿಗೆ ಬಿದ್ದು ಕಾರ್ಮಿಕ ಸಾವನ್ನಪ್ಪಿದ ಘಟನೆ ಮೈಸೂರಿನ ವಸಂತನಗರದಲ್ಲಿರುವ ತೊಳಸಿ ಎನ್‌ಕ್ಲೇವ್ ನಿವೇಶನದಲ್ಲಿ ನಡೆದಿದೆ. ಮೈಸೂರು ತಾಲೂಕು ಕ್ಯಾತನಹಳ್ಳಿ ಗ್ರಾಮದ ಕಾರ್ಮಿಕ ಅಭಿಷೇಕ್ (23) ಸಾವನ್ನಪ್ಪಿದವರು. ಈತ ಜೂ.14ರಂದು ಬೆಳಗ್ಗೆ ಸದರಿ ನಿವೇಶನದಲ್ಲಿ ಕಟ್ಟಡ ಕೆಲಸ ಮಾಡುತ್ತಿದ್ದಾಗ ನೀರಿನ ಸಂಪಿಗೆ ಬಿದ್ದು ಸಾವನ್ನಪ್ಪಿದ್ದಾನೆ. ಈ ಸಂಬಂಧ ಸುರಕ್ಷತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ತೋರಿದ ಇಂಜಿನಿಯರ್ ಚಂದ್ರಶೇಖರ್, ಕಟ್ಟಡದ ಮಾಲೀಕ ಚಿದಾನಂದ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮೃತನ ತಾಯಿ ಲಕ್ಷ್ಮೀ ಆಲನಹಳ್ಳಿ ಠಾಣೆಗೆ ದೂರು ನೀಡಿದ್ದಾರೆ.

ಐವರು ಕುಖ್ಯಾತ ಸರಗಳ್ಳರ ಸೆರೆ

● ವಿದ್ಯಾರಣ್ಯಪುರಂ ಠಾಣೆ ಪೊಲೀಸರ ಯಶಸ್ವಿ ಕಾರ್ಯಾಚರಣೆ ● 13.5 ಲಕ್ಷ ಮೌಲ್ಯದ 300 ಗ್ರಾಂ ಚಿನ್ನಾಭರಣ, 3 ದ್ವಿಚಕ್ರ ವಾಹನ, 5 ಮೊಬೈಲ್ ವಶಕ್ಕೆ

ಮೈಸೂರು, ಜೂ.16 (ಆರ್‌ಕೆ)– ಐವರು ಕುಖ್ಯಾತ ಸರಗಳ್ಳರನ್ನು ಬಂಧಿಸಿರುವ ಮೈಸೂರಿನ ವಿದ್ಯಾರಣ್ಯಪುರಂ ಠಾಣೆ ಪೊಲೀಸರು, 13,50,000 ರೂ. ಬೆಲೆ ಬಾಳುವ 300 ಗ್ರಾಂ ತೂಕದ 7 ಚಿನ್ನದ ಸರಗಳು, ಕೃತ್ಯಕ್ಕೆ ಬಳಸಿದ್ದ 3 ದ್ವಿಚಕ್ರ ವಾಹನ ಮತ್ತು 5 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.



ಮೈಸೂರಿನ ದಿವಾನ್ಸ್ ರಸ್ತೆ ನಿವಾಸಿ ಕೃಷ್ಣ (25), ಕೆ.ಆರ್. ಪೇಟೆ ತಾಲೂಕು ಹೆಚ್.ಕೋಡಹಳ್ಳಿ ಗ್ರಾಮದ ನಿವಾಸಿ ರಾಜು (32), ಹೆಚ್.ಡಿ. ಕೋಟೆ ತಾಲೂಕಿನ ಅಭಿಷೇಕ್ (26), ಮೈಸೂರಿನ ಜೆ.ಪಿ. ನಗರ ಬಳಿಯ ಮಹದೇವಪುರ ನಿವಾಸಿಗಳಾದ ಯೋಗೇಶ್ (28) ಮತ್ತು ಪ್ರಜ್ವಲ್ (26) ಬಂಧಿತ ಸರ ಅಪಹರಣಕಾರರು.

ಜೂನ್ 5ರಂದು ಶ್ರೀರಾಂಪುರ ಬಳಿ ರಿಂಗ್ ರಸ್ತೆಯಲ್ಲಿ ಸಂಶಯಾಸ್ಪದವಾಗಿ ಬೈಕಿನಲ್ಲಿ ಬರುತ್ತಿದ್ದ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಅವರು ಈ ಹಿಂದೆ ಮೈಸೂರಿನ ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸರಗಳ್ಳತನ ಮಾಡಿದ್ದಾರೆ ಎಂಬುದು ತಿಳಿಯುತ್ತದೆ. ಮತ್ತಿಬ್ಬರು ಸ್ನೇಹಿತರೊಂದಿಗೆ ಸೇರಿಕೊಂಡು ಮೈಸೂರು ನಗರದ ವಿವಿಧೆಡೆ ಪ್ರತ್ಯೇಕ ಸರ ಅಪಹರಣ ಮಾಡಿದ್ದಾರೆಂಬ ವಿಷಯ ತಿಳಿದ ಹಿನ್ನೆಲೆಯಲ್ಲಿ ಸುಳಿವಿನ ಜಾಡು ಹಿಡಿದು ಜೂ.12ರಂದು ಪೊಲೀಸರು ಮತ್ತಿಬ್ಬರನ್ನೂ ಬಂಧಿಸಿದ್ದಾರೆ.

ಮೈಸೂರಲ್ಲಿ ನಡೆದಿದ್ದ 7 ಸರ ಅಪಹರಣ ಪ್ರಕರಣಗಳಿಗೆ ಸಂಬಂಧಿಸಿದಂತೆ 13,50,000 ರೂ. ಮೌಲ್ಯದ 300 ಗ್ರಾಂ ತೂಕದ 7 ಚಿನ್ನದ ಸರಗಳು, ಕೃತ್ಯಕ್ಕೆ ಬಳಸಿದ್ದ 3 ದ್ವಿಚಕ್ರ ವಾಹನಗಳು ಹಾಗೂ 5 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಆರೋಪಿಗಳ ಬಂಧನದಿಂದಾಗಿ ವಿದ್ಯಾರಣ್ಯಪುರಂ 2, ಕುವೆಂಪುನಗರ 2, ಲಕ್ಷ್ಮಿಪುರಂನ 1, ವಿಜಯನಗರದ 1 ಸರಗಳ್ಳತನ ಪ್ರಕರಣಗಳು ಪತ್ತೆಯಾದಂತಾಗಿದೆ.

ಬಂಧಿತ ಆರೋಪಿ ರಾಜು ಈ ಹಿಂದೆ ವಿದ್ಯಾರಣ್ಯಪುರಂ, ಹೆಬ್ಬಾಳು, ಎನ್.ಆರ್., ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳ್ಳತನ ಮತ್ತು ವಂಚನೆ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಿದೆ. ಒಂದು ಬೈಕಿನಲ್ಲಿ ಬಂದು ಒಬ್ಬಂಟಿಯಾಗಿ ನಡೆದುಕೊಂಡು ಹೋಗುವ ಮಹಿಳೆಯರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗುವ ಅವರು, ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ಬೈಕ್ ಅನ್ನು ಬದಲಿಸಿಕೊಂಡು ಪರಾರಿಯಾಗುತ್ತಿದ್ದರು.

ಡಿಸಿಪಿ ಎಂ.ಎಸ್. ಗೀತಾ ಪ್ರಸನ್ನ ಅವರ ಮಾರ್ಗದರ್ಶನದಂತೆ ಕೆ.ಆರ್.ಉಪ ವಿಭಾಗದ ಎಸಿಪಿ ಪೂರ್ಣಚಂದ್ರ ತೇಜಸ್ವಿ ಅವರ ಮೇಲ್ವಿಚಾರಣೆಯಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ವಿದ್ಯಾರಣ್ಯಪುರಂ ಠಾಣೆ ಇನ್ಸ್‌ಪೆಕ್ಟರ್ ಜಿ.ಸಿ.ರಾಜು, ಸಬ್ ಇನ್ಸ್‌ಪೆಕ್ಟರ್‌ಗಳಾದ ಎನ್.ವಿ.ರಂಗಸ್ವಾಮಿ, ಸಿದ್ದಬಾಯಿ, ಮಮದಪುರ, ಎಎಸ್‌ಐ ಮರಿಸ್ವಾಮಿ, ಸಿಬ್ಬಂದಿಗಳಾದ ರಮೇಶ್, ಮಹೇಶ್ವರ, ನಟರಾಜು, ಕೆ.ಶ್ರೀಧರ ಮೂರ್ತಿ, ಎಸ್.ರವಿ, ಸುನಿಲ್‌ಕುಮಾರ್, ರಾಜೇಶ್, ರಂಜಿತ್‌ಕುಮಾರ್, ನವೀನ್, ಧನಂಜಯ, ನಾರಾಯಣ ಶೆಟ್ಟಿ, ಶ್ರೀನಿವಾಸ, ವೆಂಕಟೇಶ್, ಸುರೇಶ್, ಮೇಘನಾಯಕ, ಸೋಮಶೇಖರ ನಾಯಕ ಅವರುಗಳು ಪಾಲ್ಗೊಂಡಿದ್ದರು.

ಸಿಇಟಿ, ಕಾಮೆಡ್–ಕೆ ಎದುರಿಸಲು ತರಬೇತಿ

ಮೈಸೂರು,ಜೂ.16(ಆರ್‌ಕೆಬಿ)– ಸಿಇಟಿ ಮತ್ತು ಕಾಮೆಡ್–ಕೆ ಶ್ರೇಯಾಂಕವನ್ನು ಸುಧಾರಿಸಲು ಸಲಹೆಗಳು ಮತ್ತು ತಂತ್ರಗಳು ಹಾಗೂ ಅಣಕು ಸಿಇಟಿಯನ್ನು ಮೈಸೂರಿನ ಎನ್‌ಐಇ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಸಿಇಟಿ ಪ್ರಶ್ನೆಗಳಿಗೆ ತ್ವರಿತವಾಗಿ ಉತ್ತರಿಸುವುದು ಮತ್ತು ಸಮಯಕ್ಕೆ ಸರಿಯಾಗಿ ಎಲ್ಲಾ ಪ್ರಶ್ನೆಗಳನ್ನು ಪೂರ್ಣಗೊಳಿಸುವ ಕುರಿತು ಸಂಪನ್ಮೂಲ ವ್ಯಕ್ತಿಗಳು ಉಪಯುಕ್ತ ಸಲಹೆಗಳನ್ನು ವಿದ್ಯಾರ್ಥಿಗಳಿಗೆ ನೀಡಿದರು.

ಬೆಂಗಳೂರು, ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ, ಸುಳ್ಯ, ಬಳ್ಳಾರಿ, ಚಿತ್ರದುರ್ಗ, ಕಾಸರಗೋಡು, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳೂ ಈ 3 ದಿನಗಳ ಉಚಿತ ಆನ್‌ಲೈನ್ ತರಬೇತಿಯಲ್ಲಿ ಭಾಗವಹಿಸಿದ್ದರು. ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳ ಮಾದರಿಗಳ ಬಗ್ಗೆ ಚರ್ಚಿಸಿದರು. ಸಿಇಟಿ ಮತ್ತು ಕಾಮೆಡ್–ಕೆ ಪರೀಕ್ಷೆಗಳನ್ನು ಸುಲಭವಾಗಿ ಎದುರಿಸುವ ಕುರಿತು ಮಾಹಿತಿ ನೀಡಿದರು. ಪರೀಕ್ಷೆಗೆ ಕೊನೆಯ ಕ್ಷಣದ ಸಿದ್ಧತೆ, ಒತ್ತಡ ನಿರ್ವಹಣೆ, ಶಾರ್ಟ್‌ಕಟ್‌ಗಳ ಕುರಿತು ಎನ್‌ಐಇ ರಸಾಯನಶಾಸ್ತ್ರ ವಿಭಾಗದ ಡಾ. ನಿತಿನ್ ಉಪನ್ಯಾಸ ನೀಡಿದರು. ಎನ್‌ಐಇ ಪ್ರಾಂಶುಪಾಲೆ ರೋಹಿಣಿ ನಾಗಪದ್ಮ ಮಾಕ್–ಸಿಇಟಿ ವಿಜೇತರನ್ನು ಅಭಿನಂದಿಸಿದರು.

ಮೈಸೂರು ಸ್ಪೋರ್ಟ್ಸ್ ಶೂಟಿಂಗ್‌ಗೆ 18ಕ್ಕೂ ಹೆಚ್ಚು ಪದಕ


ಹುಬ್ಬಳ್ಳಿಯಲ್ಲಿ ನಡೆದ 2ನೇ ಹುಬ್ಬಳ್ಳಿ ಓಪನ್ ನ್ಯಾಷನಲ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರು ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿ ಸ್ಪರ್ಧಿಗಳು ಭಾಗವಹಿಸಿ, 18ಕ್ಕೂ ಹೆಚ್ಚು ಪದಕಗಳನ್ನು ಪಡೆದ ಸ್ಪರ್ಧಿಗಳನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಮೈಸೂರು, ಜೂ.16– ಹುಬ್ಬಳ್ಳಿಯಲ್ಲಿ ನಡೆದ 2ನೇ ಹುಬ್ಬಳ್ಳಿ ಓಪನ್ ನ್ಯಾಷನಲ್ ಚಾಂಪಿಯನ್‌ಶಿಪ್‌ನಲ್ಲಿ ನಗರದ ಮೈಸೂರು ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯ ಸ್ಪರ್ಧಿಗಳು ಭಾಗವಹಿಸಿ ಸುಮಾರು 18ಕ್ಕೂ ಹೆಚ್ಚು ಪದಕಗಳನ್ನು ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಆದರ್ಶ್ ಮಲವಾಡೆ–ಹಿರಿಯರ ವಿಭಾಗದಲ್ಲಿ ಓಪನ್ ಸೈಟ್ ಏರ್ ರೈಫಲ್‌ನಲ್ಲಿ ವೈಯಕ್ತಿಕ ಚಿನ್ನ ಮತ್ತು ಓಪನ್ ಚಾಂಪಿಯನ್ ಆಗಿದ್ದಾರೆ.

ಶಿವಕುಮಾರ್ ಓಪನ್ ಸೈಟ್ ಸೀನಿಯರ್ ವಿಭಾಗದಲ್ಲಿ ಬೆಳ್ಳಿ ಪದಕ. ಎ. ಹಸ್ಮಿತ್–ಓಪನ್ ಸೈಟ್ ಮಹಿಳಾ ವಿಭಾಗದಲ್ಲಿ ಚಿನ್ನ, ಬಿ.ಆರ್.ಪ್ರಜ್ಞಾ–ಬೆಳ್ಳಿ. ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಮೊದಲ 2 ಪದಕಗಳನ್ನು ಎಂಎಸ್‌ಎಸ್‌ಎ ಜಯಗಳಿಸಿದೆ. ರವಿಶಂಕರ್–60 ವರ್ಷ ವಿಭಾಗದಲ್ಲಿ ಕಂಚು. ನಂದಿತ ರವಿಚಂದ್ರ–ಯೂತ್ ವಿಭಾಗದಲ್ಲಿ ಚಿನ್ನ ಗಳಿಸಿದ್ದಾರೆ. ಗುಂಪು ವಿಭಾಗದಲ್ಲಿ–ಆದರ್ಶ ಮಲವಾಡೆ, ಶಿವಕುಮಾರ್, ರಮೇಶ್ ಬಾಬು–ಚಿನ್ನ, ಮಮಿತ್ ಎನ್.ಗೌಡ, ಶಶಾಂಕ್, ಕಿಶೋರ್–ಕಂಚು. ಸಿ.ಅನುಪ್, ಬಿಜು ಬೆಳ್ಳಿಯಪ್ಪ ಮತ್ತು ಮಣಿಕಂಠ–ಚಿನ್ನ, ಎ.ಹರ್ಷಿತಾ, ಬಿ.ಆರ್.ಪ್ರಜ್ಞಾ, ಐಶ್ವರ್ಯ ಚಿನ್ನದ ಪದಕ ವಿಜೇತರನ್ನು ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ವೈ.ವಿ.ರವಿಶಂಕರ್, ಸುಂದ್ರೇಶ್ ಅಭಿನಂದಿಸಿದರು.

ಬ್ರಹ್ಮಾಕುಮಾರೀಸ್‌ನಿಂದ ಇಂಜಿನಿಯರ್‌ಗಳೊಂದಿಗೆ ಸ್ನೇಹ ಸಮ್ಮಿಲನ



ಮೈಸೂರಿನ ಯಾದವಗಿರಿಯಲ್ಲಿರುವ ಪ್ರಜಾಪಿತ ಬ್ರಹ್ಮಾಕುಮಾರೀ ಈಶ್ವರೀಯ ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ಇಂಜಿನಿಯರ್‌ಗಳೊಂದಿಗೆ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಚಿತ್ರದಲ್ಲಿ ಮೈಸೂರು ವಿಭಾಗದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ, ಹಿರಿಯ ಸಹೋದರ ಬಿ.ಕೆ.ರಾಮಚಂದ್ರ ರಾವ್, ಬಿ.ಕೆ.ಮಂಜುಳ, ಬಿ.ಕೆ.ವಾಣಿ, ಕಮಾಂಡರ್ ಪಿ.ಜಿ.ರಮೇಶ್, ಮುಖ್ಯ ಜನರಲ್ ಮ್ಯಾನೇಜರ್, ತ್ರಿವೇಣಿ ಇಂಡಸ್ಟ್ರೀಸ್ ಹಾಗೂ ಸತ್ಯೇಂದ್ರ ಅವರನ್ನು ಕಾಣಬಹುದು.

ಯೋಗ ಛಾಯಾಚಿತ್ರ ಪ್ರದರ್ಶನ ಸ್ಪರ್ಧೆ

ಮೈಸೂರು, ಜೂ. 16– ವಿಶ್ವ ಯೋಗ ದಿನಾಚರಣೆ ಅಂಗವಾಗಿ ಹಿಮಾಲಯ ಪ್ರತಿಷ್ಠಾನದ ವತಿಯಿಂದ ಯೋಗದ ಛಾಯಾಚಿತ್ರ ಸ್ಪರ್ಧೆ ಏರ್ಪಡಿಸಿದೆ. ಆಸಕ್ತ ಯೋಗಪಟುಗಳು ತಮ್ಮ ಆಕರ್ಷಕ ಹಾಗೂ ಕಠಿಣವಾದ 3 ಯೋಗಾಸನ ಭಂಗಿಗಳ ಛಾಯಾಚಿತ್ರಗಳನ್ನು ಎ4 (300 dpi) ಅಳತೆಗೆ ಮೀರದಂತೆ ಈ ಕೆಳಕಂಡ ಇಮೇಲ್: arogyakirana@gmail.com ಕಳುಹಿಸತಕ್ಕದ್ದು. ಆಯ್ಕೆಯಾದ 3 ಛಾಯಾಚಿತ್ರಗಳಿಗೆ ನಗದು ಬಹುಮಾನ ನೀಡಲಾಗುವುದು. ನಿಮ್ಮ ಛಾಯಾಚಿತ್ರಗಳನ್ನು ಕಳುಹಿಸಲು ಜೂ.18 ಕಡೆ ದಿನ. ಆಯ್ಕೆಯ ತೀರ್ಮಾನ ಸಮಿತಿಯದು. ಆಯ್ಕೆಯಾದ ಯೋಗಾಸನಗಳ ಛಾಯಾಚಿತ್ರ ಪ್ರದರ್ಶನವನ್ನು ಜೂ.19ರ ಭಾನುವಾರ ರಂಗಾಯಣದಲ್ಲಿ ಪ್ರದರ್ಶಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ 9743769403 ಸಂಪರ್ಕಿಸಬಹುದು ಎಂದು ಸಂಸ್ಥೆಯ ಸಂಚಾಲಕ ಎಂ.ವಿ.ನಾಗೇಂದ್ರ ಬಾಬು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋವಿಡ್‌ನಿಂದ ಮೃತಪಟ್ಟ 3,510 ಮಂದಿ ವಾರಸುದಾರರಿಗೆ ಪರಿಹಾರ ಮಂಜೂರು

ಮೈಸೂರು,ಜೂ 16(ಜಿಎ)–ಮೈಸೂರು ಜಿಲ್ಲೆಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಗೆ ಪರಿಹಾರ ಧನ ಕೋರಿ ಅರ್ಜಿ ಸಲ್ಲಿಸಿದ 3820 ಮಂದಿಯಲ್ಲಿ ಬಾಕಿ 310 ಮಂದಿ ಪರಿಹಾರ ಬರುವ ನಿರೀಕ್ಷೆಯಲ್ಲಿದ್ದಾರೆ.

ಕೊರೊನಾದಿಂದ ಮೃತಪಟ್ಟವರು ವಾರಸುದಾರರು ಮೈಸೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಒಟ್ಟು 3,820 ಮಂದಿ ಅರ್ಜಿ ಸಲ್ಲಿಸಿದ್ದು ಅದರಲ್ಲಿ 3,510 ಅರ್ಜಿದಾರ ಫಲಾನುಭವಿಗಳಿಗೆ ಹಣ ಮಂಜೂರಾಗಿದ್ದು, 310 ಮಂದಿಯ ಅರ್ಜಿಯ ಕಾರ್ಯ ಪ್ರಕ್ರಿಯೆ ಮುಗಿದಿದ್ದು, ಪರಿಹಾರ ಧನದ ನಿರೀಕ್ಷೆಯಲ್ಲಿದ್ದಾರೆ.

ಕೋವಿಡ್ ಪರಿಹಾರ ನಿಧಿಯ ಆರಂಭದ ದಿನಗಳಲ್ಲಿ ಆರೋಗ್ಯ ಇಲಾಖೆ ವತಿಯಿಂದ ಸೋಂಕಿನಿಂದ ಮೃತಪಟ್ಟವರ ಹಾಗೂ ಅವರ ಕಾನೂನು ಬದ್ಧ ವಾರಸುದಾರರಾದ 2200 ಮಂದಿಯ ಡೇಟಾವನ್ನು ಮೈಸೂರು ಡಿಸಿ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ವಿಭಾಗಕ್ಕೆ ನೀಡಲಾಗಿತ್ತು.

ಸೋಂಕಿನಿಂದ ಮೃತಪಟ್ಟ ವ್ಯಕ್ತಿ ಮತ್ತು ವಾರಸುದಾರ ಇಬ್ಬರು ಒಂದೇ ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿದವರಿಗೆ ರಾಜ್ಯ ಸರ್ಕಾರದಿಂದ 1 ಲಕ್ಷ ಪರಿಹಾರ ತಲುಪಿದೆ. ಮೃತಪಟ್ಟವರು ಮತ್ತು ಅವರ ವಾರಸುದಾರರ ಬೇರೆ ಬೇರೆ ಪಡಿತರ ಹೊಂದಿದವರನ್ನು ದಾಖಲೆಗಳನ್ನು ಆಹಾರ ಇಲಾಖೆ ಮತ್ತು ಇ–ಜನ್ಮದಲ್ಲಿ ಪರಿಶೀಲನೆ ನಡೆಸಿ 851 ಜನ ಮಂದಿಗೆ 1 ಲಕ್ಷ ಪರಿಹಾರ ಧನ ದೊರಕಿತ್ತು. ನಂತರದ ದಿನಗಳಲ್ಲಿ ಮೈಸೂರು ನಗರ ಮತ್ತು ತಾಲೂಕು ಕೇಂದ್ರಗಳಿಂದ ಅನೇಕ ಅರ್ಜಿದಾರರ ದಾಖಲೆಗಳನ್ನು ಪರಿಶೀಲಿಸಿದ್ದಾಗ 'ನೋ ಡಾಟ ಫೌಂಡ್' ಎಂದು ಬರಲು ಆರಂಭವಾಯಿತು. ಈ ಸಮಸ್ಯೆ ಕುರಿತು ಮೈಸೂರು ಡಿಸಿ ಕಚೇರಿಯಿಂದ ಬೆಂಗಳೂರು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರಿಗೆ ತಿಳಿಸಿ ಅನುಮೋದನೆ ನೀಡಲು ಕೋರಿದ ನಂತರ ಅವರ ಡೇಟಾವನ್ನು ದಾಖಲಿಸಲು ತಿಳಿಸಿದರು. ಎಡಿಸಿ ಲಾಗಿನ್ ಮೂಲಕ ಅರ್ಜಿಗಳನ್ನು ಪರಿಶೀಲಿಸಿ ಪರಿಹಾರ ಧನ ಕಲ್ಪಿಸುತ್ತಿದ್ದು, ಈ ಅರ್ಜಿದಾರರಿಗೆ 50 ಸಾವಿರ ರೂ. ನೀಡಬಹುದು ಎಂದು ಸುಪ್ರಿಂಕೋರ್ಟ್ ಆದೇಶಿಸಿತ್ತು. ಯಾವುದೇ ಬಿಪಿಎಲ್ ಪಡಿತರ ಚೀಟಿ ಹೊಂದಿದದವರಿಗೂ 50 ಸಾವಿರ ಪರಿಹಾರ ಧನ ನೀಡಲಾಗುತ್ತಿದೆ. ಜಿಲ್ಲಾದ್ಯಂತ 3,510 ಫಲಾನುಭವಿಗಳಿಗೆ ಹಣ ಮಂಜೂರಾಗಿದ್ದು, 310 ಮಂದಿ ಅರ್ಜಿಯ ಕಾರ್ಯ ಪ್ರಕ್ರಿಯೆ ಮುಗಿದಿದ್ದು, ಪರಿಹಾರ ಧನದ ನಿರೀಕ್ಷೆಯಲ್ಲಿದ್ದಾರೆ. ಕೋವಿಡ್‌ನಿಂದ ದಿನಾಂಕ 20.3.2022ಕ್ಕಿಂತ ಮೊದಲು ಮೃತಪಟ್ಟವರ ಪರವಾಗಿ ಅರ್ಜಿ ಸಲ್ಲಿಸಲು 90 ದಿನಗಳ ಕಾಲಮಿತಿ ನಿಗದಿಗೊಳಿಸಲಾಗಿದ್ದು, ಇತ್ತೀಚೆಗೆ ಯಾವುದೇ ವ್ಯಕ್ತಿ ಕೋವಿಡ್‌ನಿಂದ ಮೃತಪಡದ ಹಿನ್ನೆಲೆಯಲ್ಲಿ ಹೊಸ ಅರ್ಜಿಗಳು ಬಂದಿಲ್ಲ ಎಂದು ಜಿಲ್ಲಾಡಳಿತ ಮೂಲಗಳು ತಿಳಿಸಿವೆ.

> “ರಾಜ್ಯ ಆರೋಗ್ಯ ಇಲಾಖೆಯ ನಿಯಮದ ಪ್ರಕಾರ ಕೋವಿಡ್ ಸೋಂಕಿನಿಂದ 10 ದಿನಗಳ ಒಳಗೆ ಮೃತಪಟ್ಟವರ ದಾಖಲೆಯನ್ನು, ರಾಜ್ಯ ಹೆಲ್ತ್ ಬುಲೆಟಿನ್‌ನಲ್ಲಿ ನಮೂದಿಸಲಾಗಿದೆ. ಅದರಂತೆ ಮೈಸೂರಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 2,559 ಮಾತ್ರ ಸೂಚಿಸುತ್ತಿದೆ. ಆದರೆ ರಾಜ್ಯ ಸರ್ಕಾರ ಎಡಿಸಿ ನೇತೃತ್ವದಲ್ಲಿ ರಚಿಸಿರುವ ಸಮಿತಿ ಪ್ರಕಾರ ಕೋವಿಡ್ ಸೋಂಕಿನಿಂದ 30 ದಿನಗಳಲ್ಲಿ ಅಥವಾ ನಂತರ ಮೃತಪಟ್ಟರೆ, ಸಿಟಿ ಸ್ಕ್ಯಾನ್ ಮೂಲಕ ಕೋವಿಡ್ ದೃಢಪಟ್ಟವರಿಗೂ ಪರಿಹಾರ ಒದಗಿಸುತ್ತಿದ್ದು, ಹೆಲ್ತ್ ಬುಲೆಟಿನ್‌ನಲ್ಲಿ ದಾಖಲಾಗಿರುವ ಅಂಕಿ ಅಂಶಕ್ಕಿಂತ ಹೆಚ್ಚು ಅರ್ಜಿಗಳು ಬಂದಿವೆ. ಅವರಿಗೂ ಸುಪ್ರಿಂಕೋರ್ಟ್ ಆದೇಶದನ್ವಯ 50 ಸಾವಿರ ಪರಿಹಾರ ನೀಡಲಾಗುತ್ತಿದೆ.
>
> –ಬಿ.ಎಸ್.ಮಂಜುನಾಥಸ್ವಾಮಿ, ಎಡಿಸಿ



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.06.2022 ಶುಕ್ರವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ತೃತೀಯ, ನಕ್ಷತ್ರ : ಉಷಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ, ಮೈಸೂರು ಸಿಟಿ ಅಂತರ ಕಾಲೇಜು ಟೂರ್ನಮೆಂಟ್ ಕಮಿಟಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ವಿಟಿಯು ಅಂತರ ಕಾಲೇಜು ಮೈಸೂರು ವಲಯ ಪುರುಷರ ಖೋ ಖೋ ಚಾಂಪಿಯನ್‌ಶಿಪ್ ಮತ್ತು ಮೈಸೂರು ನಗರ ಅಂತರ ಕಾಲೇಜು ತೂಕ ಎತ್ತುವ ಮತ್ತು ದೇಹದಾರ್ಢ್ಯ ಚಾಂಪಿಯನ್‌ಶಿಪ್, ಉದ್ಘಾಟನೆ: ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ಸಹಾಯಕ ನಿರ್ದೇಶಕ ಬಿ.ಡಿ.ಕಾಂತರಾಜ, ಅಧ್ಯಕ್ಷತೆ: ಎನ್‌ಐಇ ಪ್ರಿನ್ಸಿಪಾಲ್ ಡಾ. ರೋಹಿಣಿ ನಾಗಪದ್ಮ, ಸ್ಥಳ: ಎನ್‌ಐಇ ಡೈಮಂಡ್ ಜ್ಯೂಬಿಲಿ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಬೆಳಗ್ಗೆ 9.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಅಭಿವೃದ್ಧಿ ಅಧ್ಯಯನ ಸಂಸ್ಥೆ:** ಭಾರತದಲ್ಲಿ ಕೃಷಿ ಮಾರುಕಟ್ಟೆಗಳನ್ನು ಏಕೀಕರಿಸುವುದು–ಸಮಸ್ಯೆಗಳು ಮತ್ತು ಸವಾಲುಗಳು ಕುರಿತು ವಿಚಾರ ಸಂಕಿರಣ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು:** ಮೈಸೂರು ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಸಹಕಾರ ಸಂಘಗಳ ಜಂಟಿ ನಿಬಂಧಕ ಡಾ.ಜಿ.ಉಮೇಶ, ಮುಖ್ಯ ಅತಿಥಿಗಳು: ಸಹಕಾರ ಸಂಘಗಳ ಉಪನಿಬಂಧಕ ವಿಜಯಕುಮಾರ್, ಸಹಕಾರ ಸಂಘಗಳ ಜಂಟಿ ನಿರ್ದೇಶಕ ರವಿ, ಸಹಾಯಕ ನಿಬಂಧಕ ಹರೀಶ್‌ಕುಮಾರ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 10.30ಕ್ಕೆ.

■ **ಕನ್ನಡ ಜಾನಪದ ಪರಿಷತ್ತು, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು :** ಜಾನಪದ ಗೀತಗಾಯನ ಕಾರ್ಯಕ್ರಮ, ಸಾನ್ನಿಧ್ಯ: ಎಂಡಿಇಎಸ್ ಕಾರ್ಯದರ್ಶಿ ವಿಜಯಕುಮಾರ್, ಆಡಳಿತಾಧಿಕಾರಿ ಗುರು ಅವಿನಾಶ್, ಉದ್ಘಾಟನೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಾಸ್ತಾವಿಕ ನುಡಿ: ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಡಾ. ಕ್ಯಾತನಹಳ್ಳಿ ಪ್ರಕಾಶ್ ಹೆಚ್., ಸ್ಥಳ: ಸಂತ ಜೋಸೆಫರ ಪದವಿ ಕಾಲೇಜು ಸಭಾಂಗಣ, ಜಯಲಕ್ಷ್ಮೀಪುರಂ, ಬೆಳಗ್ಗೆ 10.30ಕ್ಕೆ.

■ **ಪ್ರಾಥಮಿಕ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ, ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ :** ಮಾದಕ ವಸ್ತುಗಳ ಚಟದಿಂದ ಮುಕ್ತಗೊಳಿಸಲು ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಚಿಕಿತ್ಸೆ, ಸ್ಥಳ: ಪ್ರಾಥಮಿಕ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ, ಅಶೋಕಪುರಂ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆಯವರೆಗೆ.

■ **ಕಲಾಸ್ಪರ್ಶ:** ವಾರ್ಷಿಕೋತ್ಸವ ಸಮಾರಂಭ, ಗೌರವ ಅತಿಥಿಗಳು : ಶ್ರೀ ಸರಸ್ವತಿ ನೃತ್ಯ ಕಲಾಮಂದಿರ ನಿರ್ದೇಶಕ ವಿದುಷಿ ಎ. ಚಂದ್ರಮತಿ, ಕಾಮಾಕ್ಷಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಉಮೇಶ್ ಕಾಮತ್, ಮುಖ್ಯ ಅತಿಥಿಗಳು : ಶ್ರೀ ಬೃಹಸ್ಪತಾಚಾರ್ಯ ವಿದ್ಯಾಸಂಸ್ಥೆ ಟ್ರಸ್ಟಿ ಕೆ. ಜಯಂತಿ ಬಾಯಿ, ಅಧ್ಯಕ್ಷತೆ : ರಾಜೇಂದ್ರ ಜಿ. ಶೆಣೈ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ರಂಗಾಯಣ:** ಗ್ರೀಷ್ಮ ರಂಗಾಯಣೋತ್ಸವ, ಸಿಐಟಿಬಿ ಮಾಜಿ ಅಧ್ಯಕ್ಷ ಡಿ.ಮಾದೇಗೌಡರಿಗೆ ಸನ್ಮಾನ, ಸಂವಿಧಾನ ಆಶಯವನ್ನೊಳಗೊಂಡ 'ಸೂತ್ರಧಾರ' ನಾಟಕ ಪ್ರದರ್ಶನ, ಸ್ಥಳ: ರಂಗಚಾವಡಿ, ರಂಗಾಯಣ, ಸಂಜೆ 6.30ಕ್ಕೆ.

■ **ಸಂಗೀತ ಭಾರತಿ ಅಮೆರಿಕ:** ಕರ್ನಾಟಕ ಸಂಗೀತ ಕಾರ್ಯಕ್ರಮ, ಕು. ಜಾನವಿ ಶಿವಕುಮಾರ್ ಅವರಿಂದ ವೇಣುವಾದನ, ವಿದ್ವಾನ್ ವಿಜಯ ಸೂರ್ಯ ಅವರಿಂದ ನಾದಸ್ವರ ವಾದನ, ವಿದ್ವಾನ್ ವಿಕ್ರಂ ಭಾರದ್ವಾಜ್ (ಮೃದಂಗ), ವಿದ್ವಾನ್ ತುಮಕೂರು ಹೆಚ್. ಯಶಸ್ವಿ (ವಯೋಲಿನ್), ಮುಖ್ಯ ಅತಿಥಿಗಳು: ಸಂಸ್ಕಾರ ಭಾರತಿ ಅಧ್ಯಕ್ಷ ರಘುಪತಿ ಭಟ್, ಅಧ್ಯಕ್ಷತೆ : ಶ್ರೀರಾಂಪುರ ಶಿವ ದೇವಸ್ಥಾನದ ಅಧ್ಯಕ್ಷ ಪರಶಿವಮೂರ್ತಿ, ಸ್ಥಳ: ಶಿವ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ 2ನೇ ಹಂತ, ಸಂಜೆ 6.30ಕ್ಕೆ.

■ **ಎನ್‌ಐಇ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ:** ಇಗ್‌ನೀಟ್–2022 ಅಂತರ ಕಾಲೇಜು ಹಬ್ಬ, ಮುಖ್ಯ ಅತಿಥಿಗಳು: ಕಾಮಾಕ್ಷಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಮಹೇಶ್ ಶೆಣೈ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಡಾ. ಅಕೈ ಪದ್ಮಶಾಲಿ, ಅಧ್ಯಕ್ಷತೆ : ಎನ್‌ಐಇ ಗೌರವ ಖಜಾಂಚಿ ಡಾ. ಆರ್. ದತ್ತಕುಮಾರ್, ಸಾಂಸ್ಕೃತಿಕ ಸಂಜೆ, ಸ್ಥಳ: ಎನ್‌ಐಇ ಕಾಲೇಜು ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ–ಡಾ. ಎ.ಎಸ್.ಚಂದ್ರಶೇಖರ್, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ' ಮೈಸೂರು ಸುತ್ತಲಿನ ಪ್ರಾಗೈತಿಹಾಸ ತಾಣಗಳ ಪರಿಚಯ–ಡಾ.ಎಸ್.ಜಿ.ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಹಂಸಿನಿ ಕುಮಾರ್, ಎಂ.ಎ.ಶೋಭಾ, ವ್ಯಾಖ್ಯಾನ– ಡಾ.ಪ್ರದೀಪ್‌ಕುಮಾರ್ ಹೆಬ್ರಿ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಮೈಸೂರು ಎಸ್. ರಾಜಲಕ್ಷ್ಮಿ –ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು–ವಿಶೇಷ ಸರಣಿ **ಮಧ್ಯಾಹ್ನ:** 12.30 ದೇವರನಾಮ–ಪಿ.ಎಸ್.ರಂಜನಿ, 12.45 ಕಾದಂಬರಿ ವಿಹಾರ –ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 4.00 ಮಹಿಳಾರಂಗ–ಜೀವನ್ಮುಖಿ, ಪ್ರಸ್ತುತಿ–ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ–ಔಷಧ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಹನುಮಂತಾಚಾರ್ ಜೋಷಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಸಮಗ್ರ ಕೃಷಿಯಲ್ಲಿ ಸಂತೃಪ್ತ ಬದುಕು–ಕೃಷಿಕ ದಂಪತಿ ಸಿ.ಪಿ.ಕೃಷ್ಣ, ವಿ.ಬಿ.ಮಂಜುಳಾ ಅವರೊಡನೆ ಮಾತುಕತೆ, 7.45 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, ನಿರ್ಮಾಣ– ಎಸ್.ಲಕ್ಷ್ಮೀನಾರಾಯಣ, 9.00 ರಸಮಂಜರಿ, 10.30 ಸವಿನೆನಪು

ದಕ್ಷಿಣ ಪದವೀಧರರು ಪಾವಿತ್ರ್ಯತೆ ಕಾಪಾಡಿದ್ದಾರೆ

● ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಪ್ರತಿಕ್ರಿಯೆ ● ಉತ್ತಮ ವ್ಯಕ್ತಿ ಆಯ್ಕೆ ಮಾಡಿದ ಮತದಾರರಿಗೆ ಕೃತಜ್ಞತೆ ಸಲ್ಲಿಕೆ ● ಜೆಡಿಎಸ್‌ನ ಯಾವ ನಾಯಕರೂ ಪಕ್ಷದ ಪರ ಪ್ರಚಾರ ನಡೆಸುವಂತೆ ಹೇಳಲಿಲ್ಲ ● ಸ್ನೇಹಿತರು, ಹಿತೈಷಿಗಳ ಒತ್ತಾಸೆಯಂತೆ ಮಧು ಬೆಂಬಲಿಸಿದೆವು

ಮೈಸೂರು, ಜೂ.16(ಎಸ್‌ಬಿಡಿ)– ದಕ್ಷಿಣ ಪದವೀಧರ ಮತದಾರರು ಮಧು ಜಿ.ಮಾದೇಗೌಡರನ್ನು ಆಯ್ಕೆ ಮಾಡುವ ಮೂಲಕ ಕ್ಷೇತ್ರದ ಪಾವಿತ್ರ್ಯತೆ ಹಾಗೂ ನೈತಿಕತೆಯನ್ನು ಎತ್ತಿ ಹಿಡಿದಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡರು ಸಂತಸ ವ್ಯಕ್ತಪಡಿಸಿದ್ದಾರೆ.

ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಜಯರಾಮ್ ಕಿಲಾರ ಅವರಿಗೆ ಅವಕಾಶ ಕೈತಪ್ಪಿದ ನಂತರ ಬಹಿರಂಗವಾಗಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಬ್ಯಾಟ್ ಬೀಸುವ ಮೂಲಕ ಜೆಡಿಎಸ್‌ಗೆ ಆಘಾತ ನೀಡಿದ್ದ ಮರಿತಿಬ್ಬೇಗೌಡರು, ಚುನಾವಣೆಯ ಫಲಿತಾಂಶದ ಬೆನ್ನಲ್ಲೇ ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಸಂತಸದ ಜೊತೆಗೆ ಹಲವು ವಿಚಾರಗಳನ್ನು ಹಂಚಿಕೊಂಡರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಉತ್ತಮ ವ್ಯಕ್ತಿಯಾದ ಮಧು ಜಿ. ಮಾದೇಗೌಡರನ್ನು ಭಾರೀ ಬಹುಮತದೊಂದಿಗೆ ಆಯ್ಕೆ ಮಾಡಿದ ಮತದಾರರಿಗೆ ಧನ್ಯವಾದ. ಈ ಫಲಿತಾಂಶದ ಮೂಲಕ ಕ್ಷೇತ್ರದ ಪಾವಿತ್ರ್ಯತೆ ಹಾಗೂ ನೈತಿಕತೆಯನ್ನು ಎತ್ತಿ ಹಿಡಿಯುವುದರ ಜೊತೆಗೆ ತಮ್ಮ ಪ್ರಬುದ್ಧತೆಯನ್ನು ನಾಡಿಗೆ ತಿಳಿಸಿಕೊಟ್ಟಿರುವುದು ಸಂತೋಷ ತಂದಿದೆ. ಶಿಕ್ಷಕ ಬಂಧುಗಳು ಸೇರಿದಂತೆ ಎಲ್ಲಾ ಪದವೀಧರ ಮತದಾರರು ಮಹೋನ್ನತ ಜಾಗೃತಿ ಮೂಡಿಸುವುದರ ಜೊತೆಗೆ ರಾಜಕಾರಣದಲ್ಲಿ ಪರಿವರ್ತನೆ ತರುವ ನಿರ್ಧಾರದೊಂದಿಗೆ ಹೆಜ್ಜೆ ಇಟ್ಟಿದ್ದಾರೆ. ಮುಂದಿನ ಚುನಾವಣೆಗಳಲ್ಲೂ ಸೂಕ್ತ ನಿರ್ಧಾರ ಕೈಗೊಳ್ಳುವರೆಂಬ ವಿಶ್ವಾಸವಿದೆ ಎಂದರು.

ಮಧು ಬೆಂಬಲಿಸಲು ಕಾರಣ: ಈ ಕ್ಷೇತ್ರಕ್ಕೆ ಸಂಬಂಧವಿಲ್ಲದ, ಭಾರೀ ಶ್ರೀಮಂತ ವರ್ಗಕ್ಕೆ ಸೇರಿದ ಹೆಚ್.ಕೆ.ರಾಮು ಅವರನ್ನು ಜೆಡಿಎಸ್ ಅಭ್ಯರ್ಥಿ ಮಾಡಿತು. ಆ ಅಭ್ಯರ್ಥಿಯನ್ನೂ ಮತದಾರರು ತಿರಸ್ಕರಿಸಿರುವುದು ಅತೀವವಾದ ಸಂತೋಷ ತಂದಿದೆ. 35 ವರ್ಷಗಳಿಂದ ಪಕ್ಷಕ್ಕಾಗಿ ದುಡಿಯುತ್ತಾ ಒಂದು ಅವಕಾಶಕ್ಕಾಗಿ ಕಾದಿದ್ದ ಜಯರಾಮ್ ಕಿಲಾರ ಅವರಿಗೆ ಭರವಸೆ ನೀಡಿ, ಕೊನೆಗೆ ನಿಮ್ಮ ಬಳಿ ಹಣ ಇಲ್ಲ ಎಂದು ಟಿಕೆಟ್ ನೀಡದ್ದು ಬಹಳ ಬೇಸರ ತಂದಿತು. ಪಕ್ಷದ ನಿಷ್ಠಾವಂತ ಕಾರ್ಯಕರ್ತನನ್ನು ಪರಿಗಣಿಸದೆ ಪಕ್ಷಕ್ಕೆ ಸಂಬಂಧಪಡದ, ಒಂದೆರಡು ದಿನಗಳೂ ಪಕ್ಷಕ್ಕಾಗಿ ಕೆಲಸ ಮಾಡದ ರಾಮು ಅವರಿಗೆ ಟಿಕೆಟ್ ನೀಡಿದರು. ನಾನು ಪ್ರತಿನಿಧಿಸಿರುವ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೂ 2 ವರ್ಷಗಳ ಮುಂಚಿತವಾಗಿ ಬೇರೆ ಅಭ್ಯರ್ಥಿ ಹೆಸರು ಸೂಚಿಸಿದರು. ಇದೆಲ್ಲದರ ನಡುವೆ ನಾವು ಸ್ನೇಹಿತರು, ಹಿತೈಷಿಗಳೊಂದಿಗೆ ಚರ್ಚೆ ನಡೆಸಿದಾಗ ನಾಡು–ನುಡಿ, ಜಲದ ವಿಚಾರಕ್ಕೆ ಹೋರಾಡಿದ ಜಿ.ಮಾದೇಗೌಡರ ಪುತ್ರ ಮಧು ಮಾದೇಗೌಡರನ್ನು ಈ ಬಾರಿ ಬೆಂಬಲಿಸುವಂತೆ ಸಲಹೆ ವ್ಯಕ್ತವಾಯಿತು. ಮಧು ಮಾದೇಗೌಡರು ಒಮ್ಮೆಯೂ ನಮ್ಮನ್ನು ಭೇಟಿ ಮಾಡಿ ಬೆಂಬಲ ಕೇಳಿಲ್ಲ. ಆದರೆ ಹಿತೈಷಿಗಳು, ಸ್ನೇಹಿತರ ಸಭೆಯಲ್ಲಿ ತೀರ್ಮಾನಿಸಿ ಮಂಡ್ಯದಿಂದಲೇ ಮಧು ಅವರ ಪರ ಸಭೆ ಆರಂಭಿಸಿದೆವು ಎಂದು ತಿಳಿಸಿದರು.

ಜೆಡಿಎಸ್ ಮತ ಕಾಂಗ್ರೆಸ್‌ಗೆ: ಪಕ್ಷದ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರು ಏ.5ರಂದು ಮೈಸೂರಿನ ಹೋಟೆಲ್‌ನಲ್ಲಿ ಜಯರಾಮ್ ಅವರನ್ನು ಕರೆದು ಮುಖಂಡರ ಸಭೆ ಮಾಡಿದ್ದರು. ಅನಾರೋಗ್ಯ ಕಾರಣದಿಂದ ನಾನು ಭಾಗಿಯಾಗಿರಲಿಲ್ಲ. ಅದನ್ನು ಬಿಟ್ಟರೆ ನಮ್ಮಿಬ್ಬರನ್ನು ಸಂಪರ್ಕಿಸಲಿಲ್ಲ. ಪಕ್ಷದ ಯಾವ ಮುಖಂಡರೂ ಪಕ್ಷದ ಅಭ್ಯರ್ಥಿ ರಾಮು ಅವರ ಪರವಾಗಿ ಕೆಲಸ ಮಾಡುವಂತೆ ದೂರವಾಣಿಯಲ್ಲೂ ತಿಳಿಸಿಲ್ಲ. ವ್ಯತ್ಯಾಸವನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಜಯರಾಮ್ ಅವರಿಗೆ ಅವಕಾಶ ಕಲ್ಪಿಸೋಣ ಎಂದು ಸಮಾಧಾನ ಪಡಿಸುವ ಕೆಲಸವನ್ನೂ ಮಾಡಲಿಲ್ಲ. ರಾಮು ಅವರು ಟಿಕೆಟ್ ಪಡೆದುಕೊಂಡ ವಿಧಾನ ಹಾಗೂ ಜೆಡಿಎಸ್ ಪಕ್ಷದ ವರಿಷ್ಠರು ಟಿಕೆಟ್ ನೀಡಿದ ರೀತಿ ಕಾರ್ಯಕರ್ತರು ಹಾಗೂ ಮತದಾರರಿಗೆ ಅತೀವ ಬೇಸರ ತಂದಿದೆ. ಶ್ರೀಕಂಠೇಗೌಡರಿಗೆ ಮತದಾರರು 2 ಬಾರಿ ಆಶೀರ್ವಾದ ಮಾಡಿದ್ದಾರೆ. ಆದರೆ ಅವರು ಕ್ಷೇತ್ರಕ್ಕೆ ಪರಿಚಯವಿಲ್ಲದೆ ಪಕ್ಷದವರಲ್ಲದ ವ್ಯಕ್ತಿಯನ್ನು ಕರೆತಂದು ಟಿಕೆಟ್ ಕೊಡಿಸಿದರು. ಈ ಎಲ್ಲಾ ಕಾರಣದಿಂದ ಜೆಡಿಎಸ್ ಮತಗಳು ಮಧು ಜಿ.ಮಾದೇಗೌಡರ ಪಾಲಾದವು ಎಂದು ಹೇಳಿದರು.

ಆತ್ಮಾವಲೋಕನ ಅನಿವಾರ್ಯ: ಕಳೆದ ಲೋಕಸಭಾ ಚುನಾವಣೆ ನಂತರ ಎಲ್ಲಾ ಚುನಾವಣೆಗಳಲ್ಲೂ ಜೆಡಿಎಸ್‌ಗೆ ಹಿನ್ನಡೆಯಾಗಿದೆ. ಪಕ್ಷದ ಕಾರ್ಯಕ್ರಮಗಳು, ಸಂಘಟನೆ ಕೊರತೆ, ಕಾರ್ಯಕರ್ತರನ್ನು ವಿಶ್ವಾಸದಿಂದ ನಡೆಸಿಕೊಳ್ಳದಿರುವುದು, ವರಿಷ್ಠರು, ಶಾಸಕರು, ಕಾರ್ಯಕರ್ತರ ನಡುವಿನ ಹೊಂದಾಣಿಕೆ ಕೊರತೆ ಇದೆಲ್ಲದರ ಬಗ್ಗೆ ಪಕ್ಷದ ವೇದಿಕೆಯಲ್ಲಿ ಚರ್ಚೆಯಾಗಬೇಕು. ಆತ್ಮಾವಲೋಕನ ಮಾಡಿಕೊಂಡು ತಪ್ಪುಗಳನ್ನು ಸರಿಪಡಿಸಿಕೊಳ್ಳದಿದ್ದರೆ ಪಕ್ಷ ಕಟ್ಟಲು ಸಾಧ್ಯವಿಲ್ಲ ಎಂದರು.

ಜೆಡಿಎಸ್ ಸ್ಪರ್ಧಾಕಾಂಕ್ಷಿಯಾಗಿದ್ದ ವಿಶ್ರಾಂತ ಪ್ರಾಂಶುಪಾಲ ಜಯರಾಮು ಕಿಲಾರ ಸುದ್ದಿಗೋಷ್ಠಿಯಲ್ಲಿದ್ದರು.



ಬಿಜೆಪಿ ಸೋಲಿಗೆ ಕಾರಣ

ಪ್ರಸ್ತುತ ಬಿಜೆಪಿ ಸರ್ಕಾರ ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಯಾವುದೇ ಕಾರ್ಯಕ್ರಮ ರೂಪಿಸಿಲ್ಲ. ಉದ್ಯೋಗ ಸೃಷ್ಟಿಸುವ ಚಿಂತನೆಯನ್ನೂ ಮಾಡಿಲ್ಲ. ಆಡಳಿತದಲ್ಲಿ ಅಪಾರವಾದ ಭ್ರಷ್ಟಾಚಾರ ಬೆಳಕಿಗೆ ಬಂದಿದೆ. ಪಠ್ಯ ಪರಿಷ್ಕರಣೆಯಲ್ಲಿ ಬಸವ, ಅಂಬೇಡ್ಕರ್, ಕುವೆಂಪು, ದಲಿತ ಹಾಗೂ ಅಲ್ಪಸಂಖ್ಯಾತ ಸಾಹಿತಿಗಳ ರಚನೆಗಳನ್ನು ತಿರುಚಿ, ಅದನ್ನು ಸರಿಪಡಿಸುವ ಆಶ್ವಾಸನೆ ನೀಡಿದರಾದರೂ ಹಾಗೆ ಮಾಡದೆ ಪರಿಷ್ಕೃತ ಪಠ್ಯವನ್ನು ಮಕ್ಕಳಿಗೆ ಹಂಚಿಕೆ ಮಾಡಿದರು. ಇದೆಲ್ಲವನ್ನೂ ಮತದಾರರು ಗಂಭೀರವಾಗಿ ಚಿಂತನೆ ಮಾಡಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಿದ್ದಾರೆ ಎಂದು ಅಭಿಪ್ರಾಯಿಸಿದರು.

ನಾನು ಜೆಡಿಎಸ್‌ನಿಂದ ಸ್ಪರ್ಧಿಸುವುದಿಲ್ಲ

ಮೈಸೂರು, ಜೂ.16– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದಲೇ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ. ಆದರೆ ಜೆಡಿಎಸ್ ಪಕ್ಷದಿಂದ ಮಾತ್ರ ನಾನು ಸ್ಪರ್ಧಿಸುವುದಿಲ್ಲ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಸ್ಪಷ್ಟಪಡಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಮ್ಮ ವಿರುದ್ಧ ಪಕ್ಷ ಶಿಸ್ತುಕ್ರಮ ಕೈಗೊಂಡರೆ ನಾನು ಗೌರವಿಸುತ್ತೇನೆ. ನಾನೀಗ ಜೆಡಿಎಸ್ ಪಕ್ಷದಲ್ಲೇ ಇದ್ದೇನೆ. ನನ್ನ ಸದಸ್ಯತ್ವದ ಅವಧಿ ಪೂರ್ಣಗೊಳ್ಳುವವರೆಗೂ ಇಲ್ಲೇ ಇರುತ್ತೇನೆ. ಮುಂದಿನ ಚುನಾವಣೆಯಲ್ಲೂ ನಾನು ಸ್ಪರ್ಧಿಸುತ್ತೇನೆ. ಆದರೆ ಜೆಡಿಎಸ್‌ನಿಂದ ಮಾತ್ರ ಸ್ಪರ್ಧೆ ಮಾಡುವುದಿಲ್ಲ. ಆ ಸಂದರ್ಭದಲ್ಲಿ ನಮ್ಮ ಕ್ಷೇತ್ರದ ಮತದಾರರು, ಸ್ನೇಹಿತರು, ಹಿತೈಷಿಗಳ ಜೊತೆ ಚರ್ಚೆ ಮಾಡಿ, ನನ್ನ ಮುಂದಿನ ರಾಜಕೀಯ ಯಾವ ಪಕ್ಷದೊಂದಿಗೆ ಸಾಗಬೇಕು? ಇಲ್ಲವೇ ಪಕ್ಷೇತರವಾಗಿ ಸ್ಪರ್ಧಿಸಬೇಕಾ? ಎನ್ನುವುದನ್ನು ತೀರ್ಮಾನ ಮಾಡುತ್ತೇನೆ ಎಂದು ತಿಳಿಸಿದರು.

ವರಿಷ್ಠರಾದ ಹೆಚ್.ಡಿ.ದೇವೇಗೌಡರು ನನಗೆ ಅನೇಕ ಬಾರಿ ನ್ಯಾಯ ಒದಗಿಸಿಲ್ಲ, ಕೆಲವು ಬಾರಿ ನ್ಯಾಯ ಒದಗಿಸಿದ್ದಾರೆ. ಜಯರಾಮ್ ಕಿಲಾರ ಅವರಿಗೆ ಯಾವುದಾದರೂ ಅವಕಾಶ ಕಲ್ಪಿಸಿಕೊಡಬೇಕೆಂದು ಹಲವು ಬಾರಿ ಹೇಳಿದ್ದರು. ನಾಡಿಗೆ, ದೇಶಕ್ಕೆ ಸಾಕಷ್ಟು ಕೊಡುಗೆ ನೀಡಿರುವ ದೇವೇಗೌಡರ ಬಗ್ಗೆ ಅಪಾರವಾದ ಗೌರವವಿದೆ. ಅವರೊಂದಿಗೆ ಮಾತನಾಡಲು ನನಗೇನು ಬೇಸರವಿಲ್ಲ. ಅವರು ಯಾವಾಗ ಕರೆದರೂ ನಾನು ಹೋಗುತ್ತೇನೆ. ಆದರೆ ನನ್ನ ಮುಂದಿನ ಹೆಜ್ಜೆ ಬದಲಾಗುವುದಿಲ್ಲ ಎಂದು ಹೇಳುವ ಮೂಲಕ ಜೆಡಿಎಸ್ ಬಿಡುವುದನ್ನು ಖಚಿತಪಡಿಸಿದರು.

ದಕ್ಷಿಣ ಪದವೀಧರ ಕ್ಷೇತ್ರದ ಪರಿಷತ್ ಚುನಾವಣೆ

ಚುನಾವಣೆ ಗೆಲ್ಲುವ ತಂತ್ರಗಾರಿಕೆ ನನಗೆ ಗೊತ್ತಿಲ್ಲದೇ ಸೋತಿರಬಹುದು

ಎರಡನೇ ಬಾರಿಯೂ ಸೋಲಲು ಕಾರಣ ತಿಳಿಸಿದ ಪರಾಜಿತ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್

ಮೈಸೂರು,ಜೂ.16(ಪಿಎಂ)–ಒಳೇಟು ಏನೂ ಇಲ್ಲ. ಮತದಾರರು ನನ್ನನ್ನು ತಿರಸ್ಕರಿಸಿದ್ದಾರೆ ಅಷ್ಟೇ. ಬಹುಶಃ ಚುನಾವಣೆ ಗೆಲ್ಲುವ ತಂತ್ರಗಾರಿಕೆ ನನಗೆ ಗೊತ್ತಿಲ್ಲದೇ ಇರಬಹುದು. ಹಾಗಾಗಿ ಸೋತಿದ್ದೇನೆ ಎಂದು ದಕ್ಷಿಣ ಪದವೀಧರ ಕ್ಷೇತ್ರದ ಪರಿಷತ್ ಚುನಾವಣೆಯಲ್ಲಿ ಪರಾಜಿತಗೊಂಡ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪ್ರತಿಕ್ರಿಯಿಸಿದರು.



ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿರುವ ತಾವು ಎರಡನೇ ಬಾರಿಯೂ ಸೋಲು ಅನುಭವಿಸಲು ಕಾರಣವೇನು? ಎಂಬ ಮಾಧ್ಯಮದವರ ಪ್ರಶ್ನೆಗೆ ಗುರುವಾರ ಪ್ರತಿಕ್ರಿಯಿಸಿದ ಅವರು, ಪಕ್ಷದ ನಿಷ್ಠಾವಂತ ಕಾರ್ಯಕರ್ತ ನಾನು. ಅದರಲ್ಲಿ ಅನುಮಾನವೇ ಬೇಡ. ಪಕ್ಷ ಹೇಳಿದ ಎಲ್ಲಾ ಕೆಲಸವನ್ನು ಮಾಡಿದ್ದೇನೆ. ಬಹುಶಃ ಚುನಾವಣೆ ಗೆಲ್ಲುವ ತಂತ್ರಗಾರಿಕೆ ನನಗೆ ಗೊತ್ತಿಲ್ಲದೇ ಇರಬಹುದು ಎಂದು ಹೇಳಿದರು.

ಆಡಳಿತ ಪಕ್ಷವೂ ನಿಮ್ಮದೇ, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಸೇರಿದಂತೆ ಎಲ್ಲರೂ ಇದ್ದರೂ ಬಿಜೆಪಿ ಸೋಲಲು ಒಳೇಟು ಕಾರಣವೇ? ಎಂಬ ಪ್ರಶ್ನೆಗೆ ಉತ್ತರಿಸಿ, ಒಳೇಟು ಏನೂ ಇಲ್ಲ. ಮತದಾರರು ನನ್ನನ್ನು ತಿರಸ್ಕರಿಸಿದ್ದಾರೆ ಅಷ್ಟೇ ಎಂದರು.

ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಒಕ್ಕಲಿಗ ಸಮುದಾಯ ಬಹುಸಂಖ್ಯಾತರಾಗಿದ್ದು, ಆ ಸಮುದಾಯದ ಮತ ಸೆಳೆಯುವಲ್ಲಿ ಬಿಜೆಪಿ ನಾಯಕರು ವಿಫಲರಾದರೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ನಾನು ಬಿಜೆಪಿಯಲ್ಲಿ ಜಾತಿ ಆಧಾರದಲ್ಲಿ ಬೆಳೆದವನಲ್ಲ. ಜಾತಿ ಆಧಾರದಲ್ಲಿ ಚುನಾವಣೆಗೆ ಸ್ಪರ್ಧೆ ಮಾಡುವುದೇ ತಪ್ಪು. ನನಗೆ ಎಲ್ಲರೂ ಮತ ಕೊಡುತ್ತಾರೆಂಬ ವಿಶ್ವಾಸ ಇತ್ತು. ಏಕೆ ಮತ ಕೊಡಲಿಲ್ಲ ಎಂಬುದು ಗೊತ್ತಿಲ್ಲ ಎಂದು ಹೇಳಿದರು.

ಮೈಸೂರು–ಚಾಮರಾಜನಗರ ಸ್ಥಳೀಯ ಸಂಸ್ಥೆಗಳಿಂದ ಪರಿಷತ್‌ಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಕೌಟಿಲ್ಯ ರಘು ಸೋಲಿಗೆ ಸ್ವಪಕ್ಷೀಯರೇ ಕೈಕೊಟ್ಟ ಬಗ್ಗೆ ಪಕ್ಷದ ಆಂತರಿಕ ವೇದಿಕೆಯಲ್ಲಿ ಪ್ರಸ್ತಾಪವಾಗಿ, ಅವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ಹೊರಟಿದ್ದರು ಎನ್ನಲಾಗಿರುವ ಬಗ್ಗೆ ಉತ್ತರಿಸಿದ ಮೈ.ವಿ.ರವಿಶಂಕರ್, ಈ ಚುನಾವಣೆಯಲ್ಲಿ ಪಕ್ಷದ ಎಲ್ಲರೂ ಶ್ರಮಿಸಿದ್ದಾರೆ. ಹೈಕಮಾಂಡ್ ಭೇಟಿ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಹೇಳಿದರು.

ಇತ್ತೀಚೆಗೆ ಜಾತಿವಾರು ಲೆಕ್ಕಾಚಾರ ರಾಜಕೀಯದಲ್ಲಿ ಬಹಿರಂಗವೇ ಆಗಿದೆ. ಹಾಗಾಗಿ ನಿಮ್ಮಲ್ಲಿರುವ ಒಕ್ಕಲಿಗ ಸಮುದಾಯದ ನಾಯಕರು ತಮ್ಮ ಸಮುದಾಯ ಮತ ಸೆಳೆಯುವಲ್ಲಿ ವಿಫಲರಾದರೇ? ಎಂಬ ಪ್ರಶ್ನೆಗೆ ಉತ್ತರಿಸಿ, ಪದವೀಧರರ ಕ್ಷೇತ್ರವಾದ ಕಾರಣ ಜಾತಿ ಇಲ್ಲಿ ನಡೆಯುವುದಿಲ್ಲವೆಂಬ ನಂಬಿಕೆ ನನ್ನದು. ನಮ್ಮ ನಾಯಕರು ನನಗೆ ಮತ ಕೊಡಿಸುವಲ್ಲಿ ವಿಫಲರಾದರೆಂದು ನಾನು ಹೇಳಲಾರೆ ಎಂದರು.

ಜಾತಿ ಆಧಾರಿತವಾಗಿ ಈ ಚುನಾವಣೆ ನಡೆದಿಲ್ಲವೇ? ಎಂಬುದಕ್ಕೆ ಉತ್ತರಿಸಿ, ಮರಿತಿಬ್ಬೇಗೌಡರಿಗೆ ಚಾಮರಾಜನಗರದಿಂದ ಹಾಸನವರೆಗೆ ಮತ ಕೊಟ್ಟಿದ್ದಾರೆ. ಅವರು ಕೇವಲ ಒಂದು ಜಾತಿ ಮತಗಳಿಂದಲೇ ಗೆಲ್ಲುತ್ತಿದ್ದಾರೆಂದು ನನಗೆ ಅನ್ನಿಸಿಲ್ಲ. ಜಾತಿ ಆಧಾರದಲ್ಲಿ ಈ ಚುನಾವಣೆ ನಡೆಯೋಲ್ಲ ಎಂದು ಪ್ರತಿಪಾದಿಸಿದರು.

ನಿಮ್ಮ ಪಕ್ಷದ ಸಂಸದರು ವಕೀಲರ ಬಗ್ಗೆ ಕೊಟ್ಟ ಹೇಳಿಕೆ ಏನಾದರೂ ಪರಿಣಾಮ ಉಂಟು ಮಾಡಿತೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಸಂಸದರೇ ಅದಕ್ಕೆ ಸ್ಪಷ್ಟೀಕರಣ ನೀಡಿದ್ದಾರೆ. ನನಗೂ ಅದಕ್ಕೂ ಸಂಬಂಧವಿಲ್ಲ. ನಾನು ವಕೀಲರ ಬಳಿ ಮತ ಯಾಚಿಸಿದಾಗ, ಮತ ನೀಡುವ ಆಶ್ವಾಸನೆ ನೀಡಿದ್ದರು. ಹಾಗಾಗಿ ವಕೀಲರ ಬಗೆಗಿನ ಹೇಳಿಕೆಯ ಪರಿಣಾಮ ಎಂಬುದಕ್ಕೇ ಸಂಬಂಧವೇ ಇಲ್ಲ ಎಂದರು.

ಕೊನೆಯದಾಗಿ ನಿಮಗೆ ಮತ ನೀಡಿದವರಿಗೆ ಏನು ಹೇಳುತ್ತೀರಾ? ಎಂಬುದಕ್ಕೆ ಉತ್ತರಿಸಿ, ನನಗೆ ಮತ ನೀಡಿದ ಮತದಾರರಿಗೆ ಧನ್ಯವಾದ ತಿಳಿಸುತ್ತೇನೆ. ಚುನಾವಣಾ ರಾಜಕೀಯದಲ್ಲಿ ಇಲ್ಲದಿದ್ದರೂ ಮತ ನೀಡಿದ ಎಲ್ಲಾ ಮತದಾರರ ಜೊತೆ ನಿರಂತರವಾಗಿ ಇದ್ದು, ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ. ನನ್ನಿಂದ ಸಾಧ್ಯವಾದರೆ ಅವರ ಸಮಸ್ಯೆಗಳನ್ನು ಖಂಡಿತ ಬಗೆಹರಿಸುತ್ತೇನೆ ಎಂದು ಹೇಳಿದರು.

ಭಾರತ ಮೂಲದ ರಕ್ಷಣಾ ತಜ್ಞೆ ರಾಧಾ ಅಯ್ಯಂಗಾರ್‌ಗೆ ಪೆಂಟಗನ್‌ನಲ್ಲಿ ಉನ್ನತ ಹುದ್ದೆ

ವಾಷಿಂಗ್ಟನ್, ಜೂ.16– ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಭಾರತೀಯ ಮೂಲದ ರಾಧಾ ಅಯ್ಯಂಗಾರ್ ಪ್ಲಂಬ್ ಅವರನ್ನು ಪೆಂಟಗನ್ ಉನ್ನತ ಹುದ್ದೆಗೆ ನಾಮನಿರ್ದೇಶನ ಮಾಡಿದ್ದಾರೆ.



ರಾಧಾ ಅಯ್ಯಂಗಾರ್ ಪ್ಲಂಬ್ ಪ್ರಸ್ತುತ ಕಥ್ಲೀನ್ ಎಚ್. ಹಿಕ್ಸ್‌ಗೆ ಚೀಫ್ ಆಫ್ ಸ್ಟಾಫ್ ಆಗಿ ಸೇವೆ ಸಲ್ಲಿಸುತ್ತಿದ್ದು, ಪ್ಲಂಬ್ ಅವರನ್ನು ಸ್ವಾಧೀನ ಮತ್ತು ಸುಸ್ಥಿರತೆಗಾಗಿ ರಕ್ಷಣಾ ಉಪ ಕಾರ್ಯದರ್ಶಿ ಹುದ್ದೆಗೆ ನಾಮನಿರ್ದೇಶನ ಮಾಡಲಾಗಿದೆ. ಚೀಫ್ ಆಫ್ ಸ್ಟಾಫ್ ಆಗಿ ನೇಮಕಗೊಳ್ಳುವ ಮೊದಲು, ಪ್ಲಂಬ್ ಅವರು ಗೂಗಲ್‌ನಲ್ಲಿ ಸಂಶೋಧನಾ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ವ್ಯಾಪಾರ ವಿಶ್ಲೇಷಣೆ, ಡೇಟಾ ವಿಜ್ಞಾನ ಮತ್ತು ತಾಂತ್ರಿಕ ಸಂಶೋಧನೆಯಲ್ಲಿ ತಂಡವನ್ನು ಮುನ್ನಡೆಸಿದರು. ಅಲ್ಲದೆ ಅವರು ಫೇಸ್‌ಬುಕ್‌ನಲ್ಲಿ ಪಾಲಿಸಿ ಅನಾಲಿಸಿಸ್‌ನ ಜಾಗತಿಕ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದ್ದು, ಅಂತಾರಾಷ್ಟ್ರೀಯ ಭದ್ರತಾ ಸಮಸ್ಯೆಗಳಿಗೆ ಸಂಬಂಧಿಸಿದ ಸಮಸ್ಯೆಗಳೊಂದಿಗೆ ವ್ಯವಹರಿಸಿದ್ದಾರೆ ಎನ್ನಲಾಗಿದೆ.

ರಾಧಾ RAND ಕಾರ್ಪೊರೇಷನ್‌ನಲ್ಲಿ ಹಿರಿಯ ಅರ್ಥಶಾಸ್ತ್ರಜ್ಞರಾಗಿದ್ದರು. ಅಲ್ಲಿ ರಕ್ಷಣಾ ಇಲಾಖೆಯಾದ್ಯಂತ ಸಿದ್ಧತೆ ಮತ್ತು ಭದ್ರತಾ ಪ್ರಯತ್ನಗಳ ಮಾಪನ ಮತ್ತು ಮೌಲ್ಯಮಾಪನವನ್ನು ಸುಧಾರಿಸುವತ್ತ ಗಮನಹರಿಸಿದರು. ರಕ್ಷಣಾ ಇಲಾಖೆ, ಇಂಧನ ಇಲಾಖೆ ಮತ್ತು ಶ್ವೇತಭವನದ ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ರಾಷ್ಟ್ರೀಯ ಭದ್ರತಾ ವಿಷಯಗಳ ಕುರಿತು ಹಲವಾರು ಹಿರಿಯ ಸಿಬ್ಬಂದಿ ಸ್ಥಾನಗಳನ್ನು ಹೊಂದಿದ್ದಾರೆ. ರಕ್ಷಣಾ ಸಚಿವಾಲಯ, ಇಂಧನ ಸಚಿವಾಲಯ ಮತ್ತು ಶ್ವೇತಭವನದ ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ರಾಷ್ಟ್ರೀಯ ಭದ್ರತಾ ವಿಷಯಗಳ ಕುರಿತು ಹಲವಾರು ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ ರಾಧಾ ಅವರು ತಮ್ಮ ವೃತ್ತಿಜೀವನದ ಆರಂಭಿಕ ದಿನಗಳಲ್ಲಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದರು. ಅವರು ತಮ್ಮ ಪೋಸ್ಟ್ ಡಾಕ್ಟರೇಟ್ ಅನ್ನು ಹಾರ್ವರ್ಡ್‌ನಲ್ಲಿ ಮಾಡಿದರು. ಅವರು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಪಿಎಚ್‌ಡಿ ಮತ್ತು ಎಂಎಸ್ ಪಡೆದಿದ್ದಾರೆ. ಅಲ್ಲಿದ್ದಾಗ, ಅವರು ಮ್ಯಾಸಚೂಸೆಟ್ಸ್ ವಿಶ್ವವಿದ್ಯಾಲಯದಿಂದ ಬಿಎಸ್ ಪದವಿ ಪಡೆದರು. ಅವರು 2011ರಲ್ಲಿ ಅಮೆರಿಕನ್ ನಾನ್ ಪ್ರಾಫಿಟ್ ಗ್ಲೋಬಲ್ ಪಾಲಿಸಿಗೆ ಸೇರ್ಪಡೆಗೊಂಡರು.

ನಾಳೆ ಬಿ.ಎಸ್.ಸಣ್ಣಯ್ಯ ಬದುಕು, ಸಾಹಿತ್ಯ ವಿಚಾರಗೋಷ್ಠಿ

ಮೈಸೂರು, ಜೂ.16– ಸಂಶೋಧಕರು ಹಾಗೂ ಹಸ್ತಪ್ರತಿ ಶಾಸ್ತ್ರ ಪಂಡಿತರಾಗಿದ್ದ ಬಿ.ಎಸ್.ಸಣ್ಣಯ್ಯ ಅವರ ಬದುಕು ಮತ್ತು ಸಾಹಿತ್ಯ ಕುರಿತ ವಿಚಾರಗೋಷ್ಠಿಯನ್ನು ಜೂ.18ರಂದು ಏರ್ಪಡಿಸಲಾಗಿದೆ.



ಶ್ರವಣಬೆಳಗೊಳ ಬಾಹುಬಲಿ ಪ್ರಾಕೃತ ವಿದ್ಯಾಪೀಠದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಮೈಸೂರಿನ ಶ್ರೀಮತಿ ಜಯಲಕ್ಷ್ಮಮ್ಮ ಬಿ.ಎಸ್.ಸಣ್ಣಯ್ಯ ಟ್ರಸ್ಟ್ ಸಹಯೋಗದಲ್ಲಿ ಕೃಷ್ಣವಿಲಾಸ ರಸ್ತೆಯ ಗ್ರೀನ್ ಹೆರಿಟೇಜ್ ಹೋಟೆಲ್ ಸಭಾಂಗಣದಲ್ಲಿ ಅಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1ರವರೆಗೆ ವಿಚಾರಗೋಷ್ಠಿ ನಡೆಯಲಿದೆ.

ಮೈಸೂರು ವಿವಿ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್ ಉದ್ಘಾಟಿಸಲಿದ್ದು, ನಿವೃತ್ತ ಪ್ರಾಧ್ಯಾಪಕ ಪ್ರೊ.ರಾಮೇಗೌಡರು(ರಾಗೌ) 'ಬಿ.ಎಸ್.ಸಣ್ಣಯ್ಯ: ಪುರುಷ ಸರಸ್ವತಿ' ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅಧ್ಯಕ್ಷತೆ ವಹಿಸಲಿದ್ದು, ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಮಾರ್ಗರೇಟ್ ಮೇರಿಗೆ ಪಿಎಚ್.ಡಿ

ಮೈಸೂರು, ಜೂ. 16– ಡಾ. ಹೆಚ್. ರಾಜಶೇಖರ್ ಅವರ ಮಾರ್ಗದರ್ಶನದಲ್ಲಿ ಮಾರ್ಗರೇಟ್ ಮೇರಿ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಇಡಿ ವಿಚಾರಣೆಗೆ ಹಾಜರಾದ ಕೆಜಿಎಫ್ ಬಾಬು

ನವದೆಹಲಿ, ಜೂ.16– ಕಾಂಗ್ರೆಸ್ ಮುಖಂಡ ಹಾಗೂ ಉದ್ಯಮಿ ಯೂಸುಫ್ ಶರೀಫ್ (ಕೆ.ಜಿ.ಎಫ್ ಬಾಬು) ಜಾರಿ ನಿರ್ದೇಶನಾಲಯದ ವಿಚಾರಣೆಗೆ ಗುರುವಾರ ಹಾಜರಾದರು.

ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ ತನಿಖೆ ನಡೆಸುತ್ತಿರುವ ನಿರ್ದೇಶನಾಲಯವು ವಿಚಾರಣೆಗೆ ಹಾಜರಾಗುವಂತೆ ಕೆಜಿಎಫ್ ಬಾಬುಗೆ ಸಮನ್ಸ್ ನೀಡಿತ್ತು. ಬುಧವಾರ ಹಾಜರಾಗುವಂತೆ ಆರಂಭದಲ್ಲಿ ಸೂಚಿಸಲಾಗಿತ್ತು ಬಳಿಕ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಲಾಗಿತ್ತು. ನಾನು ಕಾನೂನಿಗೆ ಗೌರವ ಕೊಡುವವ. ನಾನು ಯಾವುದೇ ಅಕ್ರಮ ಎಸಗಿಲ್ಲ. ಹೈಕೋರ್ಟ್ ಹಾಗೂ ರಾಜ್ಯ ಸರ್ಕಾರ ಹರಾಜು ಹಾಕಿದ್ದ ಜಮೀನುಗಳನ್ನು ಖರೀದಿ ಮಾಡಿದ್ದೇನೆ. ಎಲ್ಲವೂ ಕಾನೂನುಬದ್ಧವಾಗಿ ನಡೆದಿದೆ. ಕೆಜಿಎಫ್ ಬಾಬು ಹೇಳಿದರು.



'ಮಣ್ಣು ಉಳಿಸಿ' ಜಾಗತಿಕ ಅಭಿಯಾನ ಮೈಸೂರಲ್ಲಿ ಸಮಾಪ್ತಿ

ಜೂ.19, ಬೃಹತ್ ಸಾರ್ವಜನಿಕ ಸಭೆ ಉದ್ದೇಶಿಸಿ ಸದ್ಗುರು ಭಾಷಣ

● ಮೋಟಾರ್ ಬೈಕ್‌ನಲ್ಲಿ ಸದ್ಗುರು ಏಕಾಂಗಿ ರ‍್ಯಾಲಿ ● 24 ದೇಶಗಳಲ್ಲಿ 30 ಸಾವಿರ ಕಿ.ಮೀ. ಯಶಸ್ವಿಯಾಗಿ ಕ್ರಮಿಸಿ ತವರೂರು ಮೈಸೂರಿಗೆ ಆಗಮನ

ಸಾಂದರ್ಭಿಕ ಚಿತ್ರ



ಮೈಸೂರು,ಜೂ.16(ಪಿಎಂ)– ಈಶ ಫೌಂಡೇಷನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಅವರ 'ಮಣ್ಣು ಉಳಿಸಿ' ಜಾಗತಿಕ ಅಭಿಯಾನದ 100 ದಿನಗಳ ಏಕಾಂಗಿ ಮೋಟಾರ್ ಬೈಕ್ ರ‍್ಯಾಲಿಯು ಅವರ ತವರಾದ ಮೈಸೂರಿನಲ್ಲಿ ಜೂ.19ರಂದು ಸಮಾಪ್ತಿಗೊಳ್ಳಲಿದೆ.

ಮಣ್ಣು ಲಕ್ಷಾಂತರ ಕೋಟಿ ಜೀವಿಗಳು ಬಾಳಲು ನೆಲೆಯಾಗಿದ್ದು, ಅದನ್ನು ಪ್ರಜ್ಞಾಪೂರ್ವಕವಾಗಿ ಕಾಪಾಡುವ ನಿಟ್ಟಿನಲ್ಲಿ ನಿರ್ವಹಣೆ ಮಾಡಬೇಕೆಂಬ ಸಂದೇಶದೊಂದಿಗೆ ಮೋಟಾರ್ ಬೈಕ್‌ನಲ್ಲಿ ಏಕಾಂಗಿಯಾಗಿ 24 ದೇಶಗಳಲ್ಲಿ 30 ಸಾವಿರ ಕಿ.ಮೀ. ಕ್ರಮಿಸಿ, ಅಂತಿಮವಾಗಿ ಜಗ್ಗಿ ವಾಸುದೇವ್ ಅವರು ಮೈಸೂರಿಗೆ ಆಗಮಿಸುತ್ತಿದ್ದಾರೆ. ಅಂದು ಸಂಜೆ 7.30ಕ್ಕೆ ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಸದ್ಗುರು ಬೃಹತ್ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಈಶ ಫೌಂಡೇಷನ್ ಸ್ವಯಂಸೇವಕ ಸ್ವಾಮಿ ತವೀಸ, ನವದೆಹಲಿಯಲ್ಲಿ ನಡೆದ ಮಣ್ಣು ಉಳಿಸಿ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸದ್ಗುರುಗಳ ಅಭಿಯಾನದ ಅಗತ್ಯತೆಯನ್ನು ಗುರುತಿಸಿದರು. ಸದ್ಗುರು ಭಾರತಕ್ಕೆ ಆಗಮಿಸಿದಾಗಿನಿಂದ ಗುಜರಾತ್, ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ಸರ್ಕಾರಗಳು ಅಭಿಯಾನಕ್ಕೆ ತಮ್ಮ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿವೆ. ಅಲ್ಲದೆ, ಈ ಸಂಬಂಧ ಒಡಂಬಡಿಕೆಗೆ ಸಹಿ ಹಾಕಿವೆ ಎಂದು ತಿಳಿಸಿದರು.

ಅಭಿಯಾನವು ಈವರೆಗೆ 2.5 ಶತಕೋಟಿ ಜನರನ್ನು ತಲುಪಿದ್ದು, ಜೊತೆಗೆ 74 ದೇಶಗಳು ತಮ್ಮ ರಾಷ್ಟ್ರಗಳ ಮಣ್ಣನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಲು ಸಜ್ಜಾಗಿವೆ. ಭಾರತದ 15 ಲಕ್ಷಕ್ಕೂ ಹೆಚ್ಚು ಮಕ್ಕಳು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು ಮಣ್ಣು ಮತ್ತು ಅವರ ಭವಿಷ್ಯ ಉಳಿಸಲು ಕಾರ್ಯಚಟುವಟಿಕೆ ಆರಂಭಿಸಲು ವಿನಂತಿಸಿದ್ದಾರೆ. ಈ ಪೈಕಿ ಮೈಸೂರು ನಗರದಿಂದಲೇ ಸುಮಾರು 5 ಸಾವಿರ ಶಾಲಾ ಮಕ್ಕಳು ಪ್ರಧಾನಿಯವರಿಗೆ ಮಣ್ಣು ಉಳಿಸುವ ಕುರಿತು ಪತ್ರ ಬರೆದಿದ್ದಾರೆ ಎಂದರು.

ಸಂಸದ ಪ್ರತಾಪ್ ಸಿಂಹ ಅಭಿಯಾನಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿ, ಇದು ಯುಗದ ಅತಿದೊಡ್ಡ ಪರಿಸರ ಅಭಿಯಾನ ಎಂದು ಬಣ್ಣಿಸಿ, ಮೈಸೂರಿನ ಜನತೆ ಭಾಗವಹಿಸಲು ಕೋರಿದ್ದರು. ಮೈಸೂರು ರಾಜವಂಶಸ್ಥರಾದ ಡಾ.ಪ್ರಮೋದಾದೇವಿ ಒಡೆಯರ್ ಅವರು ಅಭಿಯಾನಕ್ಕೆ ಬೆಂಬಲ ನೀಡಿ, ಶ್ಲಾಘಿಸಿದ್ದರು ಎಂದು ಹೇಳಿದರು.

ಮೈಸೂರಿಗೆ ಆಗಮಿಸುತ್ತಿರುವ ಸದ್ಗುರು ಅವರನ್ನು ಸ್ವಾಗತಿಸಲು ಮೈಸೂರಿನ ವಿವಿಧ ಕಾರ್ಪೊರೇಟ್ ಸಂಸ್ಥೆಗಳು, ಸಂಘ–ಸಂಸ್ಥೆಗಳು ಸೇರಿದಂತೆ ನಾಗರಿಕರು ಸಜ್ಜಾಗಿದ್ದಾರೆ. ಸಂಕಲ್ಪ ಮತ್ತು ಸಿದ್ಧಾರ್ಥ ಹೋಟೆಲ್, ರಘುಲಾಲ್ ಫಾರ್ಮಾ, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಘಟಕ ಸೇರಿದಂತೆ ವಿವಿಧ ಸಂಸ್ಥೆಗಳು ಸದ್ಗುರು ಸ್ವಾಗತಿಸಲು ಸಜ್ಜಾಗಿವೆ ಎಂದು ತಿಳಿಸಿದರು. ಈಶ ಫೌಂಡೇಷನ್ ಸ್ವಯಂ ಸೇವಕರಾದ ಋಷಬ್ ಕಶ್ಯಪ್, ಉದಯರವಿ ಗೋಷ್ಠಿಯಲ್ಲಿದ್ದರು.

ನಕ್ಕರೆ ಅದೇ ಸ್ವರ್ಗ

ವಧುವಿನ ತಂದೆ: "ನೋಡಪ್ಪಾ, ನನ್ನ ಮಗಳಿಗೆ ಸಂಗೀತ, ಚಿತ್ರಕಲೆ, ಕವಿತೆ, ಲೇಖನಗಳಲ್ಲಿ ತುಂಬಾ ನೈಪುಣ್ಯವಿದೆ. ಎಂ.ಎ. ಪಾಸು. ಇನ್ನು ನಿನ್ನ...?"

ವರ : "ಇಂತಹ ತರುಣಿ ನನ್ನ ಹೆಂಡತಿಯಾದರೆ ಸಂದರ್ಭಾನುಸಾರ ಉಪಯೋಗಕ್ಕೆ ಬರಲಿ ಅಂತ ಅಡುಗೆ ಮಾಡುವುದು, ಹೊಲಿಗೆ, ಕಸೂತಿ ಕಲಿಯುತ್ತಿದ್ದೇನೆ!"

ಮೈಸೂರು ಮಿತ್ರ

ಶುಕ್ರವಾರ, 17 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಯೌವ್ವನ, ಧನ ಸಂಪತ್ತು, ಅಧಿಕಾರ ಮತ್ತು ಅವಿವೇಕ ಅನರ್ಥಕ್ಕೆ ಇವು ಒಂದೊಂದೇ ಸಾಕು. ನಾಲ್ಕೂ ಸೇರಿದರೆ ಕೇಳಬೇಕೆ? –ಹಿತೋಪದೇಶ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆಸೆಗೆ ಮಿತಿಯಿಲ್ಲ, ಆಕಾಶಕ್ಕೆ ಅಳತೆಯಿಲ್ಲ

ನಿಮ್ಮ ಪತ್ರಗಳು

ಅರಿವಿಲ್ಲದ ಅರಿವಿಗೆ ಪ್ರಶ್ನೆ ಮಾಡಿದ ದೀಪದ ಸಾಲು..!?

ಮಾನ್ಯರೆ,

ಜೂ. 14 ರಂದು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಡಾ. ಗುಬ್ಬಿಗೂಡು ರಮೇಶ್‌ರವರ ದೀಪದ ಸಾಲುಗಳ ಸಂಚಿಕೆಯಲ್ಲಿ ಪ್ರಕಟವಾದ ಅರಿವಿಲ್ಲದ ಐಡೆಂಟಿಟಿ ಮನಸ್ಸಿನ ಅರಿವನ್ನೇ ಪ್ರಶ್ನೆ ಮಾಡಿ ಅರಿವನ್ನು ಎಚ್ಚರಗೊಳಿಸಿದೆ.

ಹೆಂಗಸರ ಗುಂಪಲ್ಲಿ ನಿಂಗಮ್ಮನಂತಹ ಮಹಿಳೆ ಬಸ್ ಡ್ರೈವರ್ ಸ್ಟಿಯರಿಂಗ್ ಹಿಡಿದು ಗಂಡಸರ ಸಮಾನವಾಗಿ ನಾನು ಬಸ್ಸು ಓಡಿಸುತ್ತೇನೆ ನೋಡಿ ಅಂತ ಅಪರೂಪದ ಆಸಕ್ತಿಯನ್ನು ಪ್ರಚುರಪಡಿಸುವುದರ ನಡುವೆ ನಿನಗಿಂತ ನಾನೇನು ಕಮ್ಮಿ ಅಂತ ಮತ್ತೊಬ್ಬ ಹೆಣ್ಣು ಮಗಳು ಪ್ಯಾರಾಸೇಲಿಂಗ್ ಮಾಡಿ ಮಗುವೊಂದನ್ನು ಹೆಗಲ ಮೇಲೆ ಕಟ್ಟಿಕೊಂಡು ಹಕ್ಕಿಯಂತೆ ಹಾರಿ ಯಶಸ್ವಿಯಾಗಿ ಬಾನಿನಿಂದ ಕೆಳಗಿಳಿಯುತ್ತಾಳೆ. ಮಹಿಳೆಯರು ಯಾರಿಗೂ ಕಮ್ಮಿ ಇಲ್ಲ ಎಂಬ ಸಾಧನೆಯನ್ನು ಜಗತ್ತಿನ ಜನಕ್ಕೆ ತೋರಿಸಿದ್ದಾರೆ.

ಶ್ರಮದ ಜೊತೆಗೆ ವಿಶೇಷ ಪಾಂಡಿತ್ಯವನ್ನು, ಸಂಘಟನಾ ಶಕ್ತಿಯನ್ನು, ವ್ಯವಹಾರದ ಚತುರತೆಯನ್ನು ಸಮಾಜಕ್ಕೆ ತೋರಿಸುವ ಮನಸ್ಸಿನ ಅರಿವಿನ ಎಚ್ಚರಿಕೆಯಾಗಿದೆ.

ಉಪನ್ಯಾಸಕರ ಪೈಕಿ ಯಾವನೋ ಒಬ್ಬ ನಾನು ವಿದ್ಯಾರ್ಥಿ ಸ್ನೇಹಿ ಅಂತಲೋ, ಜ್ಞಾನದಾಹಿ ಅಂತಲೋ, ಅದ್ಭುತ ವಾಗ್ಮಿ ಅಂತಲೋ ಈ ನೂರು ಜನರ ಮಧ್ಯೆ ವಿಶೇಷ ಎಂಬ ತನ್ನದೇ ಗುರುತಿಗಾಗಿ ಪರದಾಡುವ ಸ್ಥಿತಿಯನ್ನು ಎಚ್ಚರಗೊಳಿಸಿದೆ. ಯಾರ ಉಸಾಬರಿಯೇ ಬೇಡವೆಂದು ತಮ್ಮಷ್ಟಕ್ಕೆ ತಾವು ದುಡ್ಡು ಮಾಡುತ್ತಾ, ಆಸ್ತಿ ಖರೀದಿಸುತ್ತಾ ಐನೂರು ವರ್ಷಗಳವರೆಗೆ ತಲೆಮಾರುಗಳ ಲೆಕ್ಕದಲ್ಲಿ ದುಡ್ಡು ಮಾಡುವುದು ಒಂದು ದೊಡ್ಡ ಕಲೆ ಎಂಬ ಭ್ರಮೆಯಲ್ಲಿ ಬದುಕಿರುವ ಮತ್ತು ಭ್ರಮಿಸುವ ಮುಖಗಳ ಮನಸ್ಥಿತಿ.

ಹತ್ತು ರೂಪಾಯಿ ಭಿಕ್ಷೆಯನ್ನು ಸಂಪಾದಿಸಲು ಆಗದೆ ಇರುವವ ತನ್ನ ಕೊರತೆಗಳನ್ನು, ಕಷ್ಟಗಳನ್ನು ಡಿಸೈನ್‌ನಾಗಿ ವಿವರಿಸಿಕೊಳ್ಳುವ ಕಲೆ ಗೊತ್ತಿಲ್ಲದ ಅಸಹಾಯಕ ಭಿಕ್ಷುಕನ ಮುಂದೆ, ಮತ್ತೊಬ್ಬ ಭಿಕ್ಷುಕ ಎಂಥಾ ಸೂಪರ್ ಸ್ಪೆಷಾಲಿಟಿ ವೆರೈಟಿಯಲ್ಲಿ ಜನರ ಮನಸ್ಸನ್ನು ಕರಗಿಸುತ್ತೇನೆ ನೋಡು! ಎಂದು ತನ್ನ ಪ್ರತಿಭಾ ಸಂಪನ್ನತೆಯಿಂದ ಅವನೆದುರು ಇಪ್ಪತ್ತು ರೂಪಾಯಿ ಸಂಪಾದಿಸಿ ಬೀಗುತ್ತಾನಲ್ಲ ಇದನ್ನೇ ನೋಡಿ ಬಾಯಿದ್ದವನು ಬರಗಾಲದಲ್ಲಿ ಗೆದ್ದ ಎಂಬ ಮಾತು ಸಾರ್ವಕಾಲಿಕ ಅಲ್ಲವೇ.

ದೊಡ್ಡ ನಾಯಕರ ಮನೆಯ ಮುಂದೆ ಯುವ ನಾಯಕನೊಬ್ಬ ಚಿಕ್ಕ ಅಧಿಕಾರಕ್ಕಾಗಿ ಹೂಗುಚ್ಛವಿಡಿದು ನಿಂತರೂ ಅಧಿಕಾರ ದೊರೆಯುವುದಿಲ್ಲ, ದೊಡ್ಡವರ ಗಮನ ಸೆಳೆಯಲು ವಿಶೇಷವಾದ ತಂತ್ರಗಳಿಂದ ಕಟ್ಟಾ ಬೆಂಬಲಿಗ ಎಂಬಂತೆ ಆಡಳಿತ ಜಾಗವನ್ನು ಗಿಟ್ಟಿಸಿ ಹಣ, ಕೀರ್ತಿ, ಅಂತಸ್ತು ಎಲ್ಲವೂ ಒದಗಿಬರುತ್ತಲ್ಲ ಇದುವೆ ಅಲ್ಲವೇ ಬಾಯಿದ್ದವನು ಬದುಕುತ್ತಾನೆ ಎನ್ನುವುದು. ಐಡೆಂಟಿಟಿ ಧಾವಂತವಿಲ್ಲದವರ ಮನಸ್ಸಿನ ಅಂತರಂಗದೊಳಗೆ ಪ್ರಶ್ನೆಗಳೂ ಉದ್ಭವಿಸುವುದು ಸಾಮಾನ್ಯ. ಈ ಅರಿವಿಲ್ಲದ ಅರಿವನ್ನು ಎಚ್ಚರಗೊಳಿಸಿದ ದೀಪದ ಸಾಲು ಅಂಕಣಕ್ಕೆ ಅಭಿನಂದನೆ.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

ಗಾಂಧಿನಗರದ ಆಟದ ಮೈದಾನ ಅಭಿವೃದ್ಧಿ!



ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆ ವಾರ್ಡ್ ನಂ. 28ರ ಗಾಂಧಿನಗರದ ಸಿದ್ಧಾರ್ಥ ವಸತಿ ಪ್ರೌಢಶಾಲೆ ಎದುರು ಆಟದ ಮೈದಾನವಿದೆ. ಇದು ಯಾವುದೇ ಅಭಿವೃದ್ಧಿ ಕಾಣದೆ ಸೊರಗಿತ್ತು. ಈ ಮೈದಾನದಲ್ಲಿ ಶಾಲಾ ವಿದ್ಯಾರ್ಥಿಗಳು, ಸ್ಥಳೀಯ ಫುಟ್‌ಬಾಲ್ ಆಟಗಾರರು ತಮ್ಮ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಈ ಮೈದಾನದ ಅವ್ಯವಸ್ಥೆಯನ್ನು ಮನಗಂಡ ಸ್ಥಳೀಯ ಪಾಲಿಕೆ ಸದಸ್ಯರಾದ ಅಶ್ವಿನಿ ಶರತ್ ಅವರು ತುಂಬಾ ಕಾಳಜಿ ವಹಿಸಿ ನಗರಪಾಲಿಕೆ ಸಹಕಾರದೊಂದಿಗೆ ಹಾಲಿ ಮೈದಾನದ ಸುತ್ತ ಫೆನ್ಸಿಂಗ್ ಅಳವಡಿಸಿ ಅಭಿವೃದ್ಧಿಪಡಿಸಿರುವುದು ಶ್ಲಾಘನೀಯ. ಸದರಿ ಆಟದ ಮೈದಾನದ ಒಂದು ಭಾಗದಲ್ಲಿ ಪ್ರೇಕ್ಷಕರ ಗ್ಯಾಲರಿ ನಿರ್ಮಿಸಿ, ಒಳ ಆವರಣದಲ್ಲಿ ಹುಲುಸಾಗಿ ಬೆಳೆದು ನಿಂತಿರುವ ಪಾರ್ಥೇನಿಯಂ ಗಿಡಗಳನ್ನು ತೆರವುಗೊಳಿಸಿ ಇಡೀ ಮೈದಾನವನ್ನು ಸಮತಟ್ಟುಗೊಳಿಸಿ ಕ್ರೀಡಾಪಟುಗಳಿಗೆ ಹಾಗೂ ಕ್ರೀಡಾಸಕ್ತರಿಗೆ ಅನುಕೂಲ ಮಾಡಿಕೊಡಲಿ ಎಂಬುದೇ ನಮ್ಮ ಆಶಯ.

–ಎಸ್. ರಾಜಗೋಪಾಲ್, ಗಾಂಧಿನಗರ, ಮೈಸೂರು.

ದೇವೇಗೌಡ ವೃತ್ತಕ್ಕೆ ಸಿಗ್ನಲ್ ಲೈಟ್ ಅಳವಡಿಸಿ

ಮಾನ್ಯರೆ,

ಮೈಸೂರಿನ ದೇವೇಗೌಡ ವೃತ್ತದಲ್ಲಿ ವಾಹನ ಸಂಚಾರ ಮತ್ತು ಜನಸಂಪರ್ಕ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಪ್ರತಿದಿನ ಅಪಘಾತಗಳಾಗುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಈ ವೃತ್ತಕ್ಕೆ ಸಿಗ್ನಲ್ ಲೈಟ್ ಅಳವಡಿಕೆ ಬಗ್ಗೆ ಚಿಂತಿಸದಿರುವುದು ದುರದೃಷ್ಟಕರ. ಮೈಸೂರಿನಿಂದ ಬನ್ನೂರು ರಸ್ತೆಯ ಕಡೆಗೆ ಅನೇಕ ವಿದ್ಯಾಸಂಸ್ಥೆಗಳು ಇರುವುದರಿಂದ ಪ್ರತಿದಿನ ವಿದ್ಯಾರ್ಥಿಗಳು, ನೌಕರರು ಹಾಗೂ ಕಾರ್ಮಿಕರು ಸಂಚರಿಸುವುದು ಅನಿವಾರ್ಯವಾಗಿದೆ. ಅಲ್ಲದೆ, ಸರಿಯಾದ ಟ್ರಾಫಿಕ್ ನಿರ್ವಹಣೆ ಇಲ್ಲದಿರುವುದರಿಂದ ವಾಹನ ಸವಾರರು ಅಡ್ಡಾದಿಡ್ಡಿ ವಾಹನ ಚಲಾಯಿಸುವುದರಿಂದ ಅಪಘಾತಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ವೃತ್ತಕ್ಕೆ ಆದಷ್ಟು ಬೇಗ ಸಿಗ್ನಲ್ ಲೈಟ್ ಅಳವಡಿಸಿದರೆ ಜನರು ತಮ್ಮ ಜವಾಬ್ದಾರಿಯನ್ನು ಅರಿತು ವಾಹನ ಚಲಾಯಿಸಲು ಅನುಕೂಲವಾಗುವುದಲ್ಲದೆ ಪ್ರತಿದಿನ ಅಪಘಾತವನ್ನು ತಪ್ಪಿಸಬಹುದು. ಹಾಗಾಗಿ ಇದನ್ನು ಗಂಭೀರವಾಗಿ ಪರಿಗಣಿಸಿ ಆದಷ್ಟು ಬೇಗ ದೇವೇಗೌಡ ವೃತ್ತಕ್ಕೆ ಸಿಗ್ನಲ್ ಲೈಟ್ ಅಳವಡಿಸಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

–ಡಾ. ಪಿ. ದೀಪು, ಪ್ರಾಂಶುಪಾಲರು, ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು.




ಅಡ್ಡಂಡ ಸಿ. ಕಾರ್ಯಪ್ಪ
ನಿರ್ದೇಶಕರು, ರಂಗಾಯಣ, ಮೈಸೂರು
email : addandacariappa@gmail.com

ಪ್ರಚಲಿತ

ವಸತಿ ಕ್ರಾಂತಿಯ ಹರಿಕಾರ ಮೈಸೂರು ಮನೆ ಮಾದೇಗೌಡರು

'ಯಾರು ಮತ್ತೊಬ್ಬರಿಗಾಗಿ ಜೀವಿಸುತ್ತಾರೆಯೋ ಅವರೇ ನಿಜವಾಗಿ ಬದುಕುವವರು, ಉಳಿದವರು ಬದುಕಿದ್ದರೂ ಸತ್ತಂತೆ. ಎಲ್ಲಿಯವರೆಗೆ ಹೊಟ್ಟೆಗೆ ಹಿಟ್ಟಿಲ್ಲದೆ ಸಾವಿರಾರು ಜನ ಸಾಯುತ್ತಿರುವರೋ ಅಲ್ಲಿಯವರೆಗೆ ಅವರ ಶ್ರಮದಿಂದ ವಿದ್ಯಾಭ್ಯಾಸವನ್ನು ಪಡೆದು ಅವರಿಗಾಗಿ ಮರುಗದ ಪ್ರತಿಯೊಬ್ಬ ವಿದ್ಯಾವಂತರನ್ನು ವಿಶ್ವಾಸಘಾತುಕರೆಂದು ಕರೆಯುತ್ತೇನೆ'. ಇದು ಸ್ವಾಮಿ ವಿವೇಕಾನಂದರು ಹೇಳಿದ ಮಾತು. ಒಬ್ಬ ವಿದ್ಯಾವಂತನಾಗಿ, ಸ್ವಚ್ಛ ಹೃದಯದ ರಾಜಕೀಯ ಸೇವಕನಾಗಿ ಮಾದೇಗೌಡರು ಸಾರ್ಥಕ ಕೆಲಸ ಮಾಡಿದ್ದಾರೆ. ಇಂದು ಸಂಜೆ 4 ಗಂಟೆಗೆ ಬಿ.ವಿ.ಕಾರಂತ್ ರಂಗಚಾವಡಿಯಲ್ಲಿ ರಂಗಾಯಣ ಮಾದೇಗೌಡರನ್ನು ಗೌರವಿಸುತ್ತಿದೆ. 'ಮನೆ ಮನೆ ಮಾದೇಗೌಡ'ರಿಗೆ ಮನದಾಳದ ನಮಸ್ಕಾರ.

ಮೈಸೂರೆಂಬ ಅದ್ಭುತ ಮಾಯಾಲೋಕ ತಾನೇ ತಾನಾಗಿ ನಿರ್ಮಿತವಾದುದ್ದಲ್ಲ. ನಿಸ್ವಾರ್ಥ ಸೇವೆಗೈಯುವ ಹಲವಾರು ಮಹಾನ್ ವ್ಯಕ್ತಿಗಳ ಅವಿರತ ಶ್ರಮದ ಫಲ ಇದು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಎಂಬ ರಾಜರ್ಷಿ ಕೃಷ್ಣರಾಜಸಾಗರ ಅಣೆಕಟ್ಟಿನಿಂದ ಪ್ರಾರಂಭಗೊಂಡು ವಿದ್ಯಾಲಯಗಳು, ಬ್ಯಾಂಕ್‌ಗಳು, ಕನ್ನಡ ಸಾಹಿತ್ಯ ಪರಿಷತ್ತು, ಆಸ್ಪತ್ರೆಗಳು, ಕಾಲೇಜುಗಳು, ಕಾರ್ಖಾನೆಗಳು, ವಿದ್ಯುತ್ ಹೀಗೆ ಪಟ್ಟಿ ಮಾಡುತ್ತಾ ಹೋದರೆ ಅದೆಷ್ಟೋ. ಜೊತೆಗೆ ದೂರದೃಷ್ಟಿಯ ಅಗಲವಾದ ರಸ್ತೆಗಳು, ವೃತ್ತಗಳು, ಒಂದೇ ಎರಡೇ. ಭಾರತ ಕಂಡ ಅದ್ಭುತ ಆಡಳಿತಗಾರ, ಹಲವಾರು ಪ್ರಥಮಗಳ ಸರದಾರ, ಪ್ರಜಾಪ್ರಭುತ್ವ ಸ್ಥಾಪಕ, ಮೀಸಲಾತಿ ತಂದ ಮಹಾನ್ ಮೇಧಾವಿ, ಯೋಗಿ.



ಈ ಪೀಠಿಕೆಗೆ ಕಾರಣ ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೇರಣೆಯಿಂದ ಈ ನಗರವನ್ನು ಸುಂದರಗೊಳಿಸಿದವರು, ಸ್ವಚ್ಛವಾಗಿಡಲು ಶ್ರಮಿಸಿದವರು, ಸೂರಿಲ್ಲದ ಬಡವರಿಗೆ ನಿವೇಶನ, ಸೂರು ಕಲ್ಪಿಸಿದ 'ಮನೆ ಮನೆ ಮಾದೇಗೌಡ' ಎಂಬ ಚೇತನಾ ಶಕ್ತಿಯನ್ನು ನೆನೆಸಿಕೊಳ್ಳಲು. ಒಬ್ಬ ವ್ಯಕ್ತಿ ಸಾಮಾನ್ಯ ರಾಜಕಾರಣಿಯಾಗಿ ತನ್ನ ಊರಿಗೆ ಏನೆಲ್ಲಾ ಮಾಡಬಹುದು, ನಿಸ್ವಾರ್ಥದಿಂದ ಏನನ್ನೂ ಸಾಧಿಸಬಹುದು ಎಂಬುವುದಕ್ಕೆ ಪ್ರಾಮಾಣಿಕ ಸಾಕ್ಷಿ ಡಿ. ಮಾದೇಗೌಡರು. ರಾಜಕೀಯ ಸಣ್ಣ ಆಸಕ್ತಿಯಿದ್ದು ಕಾನೂನು ಪದವಿ ಪಡೆದ ಮಾದೇಗೌಡರು ಮೈಸೂರಿಗೆ ಕೊಟ್ಟ ಕಾಣಿಕೆ ಅಪಾರ. ಸಾರ್ಥಕ ಕೆಲಸವನ್ನು ಮರೆತು ಹೋಗುವ ಮೈಸೂರು ಯುವಪೀಳಿಗೆ ಇವರನ್ನು ನೆನಪು ಮಾಡಿಕೊಳ್ಳಲಿ.

1986 ರಲ್ಲಿ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾಗಿ ಮಾದೇಗೌಡರು ಇಡೀ ಭಾರತ ದೇಶ ಮೆಚ್ಚುವಂತಹ ಕೆಲಸ ಮಾಡಿದ್ದಾರೆ ಎನ್ನುವುದನ್ನು ಅವರ ಶತ್ರುಗಳು ಆಕ್ಷೇಪಿಸಲಾರರು. ಮೈಸೂರೆಂಬ ಅದ್ಭುತ ನಗರದಲ್ಲಿ ಏನೆಲ್ಲಾ ಮಾಡಬಹುದು, ಇಲ್ಲಿ ಬಾಡಿಗೆಗೆ ಅಥವಾ ಅನೇಕ ವರ್ಷಗಳಿಂದ ಮೈಸೂರನ್ನೇ ನಂಬಿ ಬದುಕಿರುವ ಬಡವರ್ಗದ ಸಾಮಾನ್ಯ ಜನರಿಗೆ ನೆಮ್ಮದಿಯ ಜೀವನಕ್ಕೆ ಏನು ಮಾಡಬಹುದು ಎಂಬ ಚಿಂತೆಯಲ್ಲಿ ರಾತ್ರಿಗಳನ್ನು ಕಳೆದವರು ಮಾದೇಗೌಡರು. ಆಧ್ಯಾತ್ಮದ ಒಲವಿದ್ದ ಇವರ ಸಾತ್ವಿಕ ಮನಸ್ಸು ಬಡವರ್ಗದ ಮೇಲೆ ಹರಿದದ್ದು ಆಶ್ಚರ್ಯವಿಲ್ಲ. ಇವರ ಅಧ್ಯಕ್ಷತೆಯ ಅವಧಿಯಲ್ಲಿ 50 ಸಾವಿರ ಸೂರಿಲ್ಲದ ಕುಟುಂಬಗಳಿಗೆ ಸೂರು ಒದಗಿಸಿದ್ದಾರೆ ಎಂದರೆ ಹೇಳಿ, ಇದೆಂತಹ ಪುಣ್ಯದ ಕೆಲಸ.

ಇವರ ತಂದೆ ದೊಡ್ಡ ತಮ್ಮಯ್ಯನವರ ಸೇವಾ ಕಾರ್ಯ ಇವರಿಗೆ ಸ್ಫೂರ್ತಿ. ಸರಕಾರದ ಗೆಜೆಟ್ ಅಧಿಕಾರಿಯಾಗಿ ವೃತ್ತಿ ಆರಂಭಿಸಿದ ಇವರು ಜನಸೇವೆಯ ತುಡಿತದಿಂದ ವೃತ್ತಿಗೆ ರಾಜೀನಾಮೆ ಕೊಡುವಂತಾಯಿತು. ಇವರ ಚಿಂತನೆ, ಜನಸೇವೆಯ ತುಡಿತಕ್ಕೆ ನೆರವಾದದ್ದು ಅಂದು ಕರ್ನಾಟಕದಲ್ಲಿದ್ದ ರಾಮಕೃಷ್ಣ ಹೆಗಡೆ ನೇತೃತ್ವದ ಸರಕಾರ.

ಶ್ರೀ ರಾಮಕೃಷ್ಣ ಪರಮಹಂಸರ ಸೇವಕನಾಗಿ, ಅದರ ದೀಕ್ಷೆ ಪಡೆದು ಈ ಆಧ್ಯಾತ್ಮಿಕ ದೃಷ್ಟಿಯಿಂದ ಬಡವರ್ಗದ ಸೇವೆಯ ಸಂಕಲ್ಪ ತೊಟ್ಟು 'ಸೂರಿಲ್ಲದವರಿಗೆ ಸೂರು' ಇದಕ್ಕೆ ಆದ್ಯತೆ ನೀಡಿದರು. ಇದನ್ನು 'ಆಶಾಮಂದಿರ' ಎಂದು ಕರೆದರು. ಪತ್ರಿಕಾ ಹೇಳಿಕೆ ಕೊಟ್ಟಾಗ ಬಂದ ಮನವಿಗಳು ಸಾವಿರಾರು. ಸೂರು ಒದಗಿಸಲು ನಿವೇಶನ ಬೇಕು. ಇದಕ್ಕಾಗಿ ನೀಲಿನಕ್ಷೆ ತಯಾರಿಸಿ, ಜಮೀನ್ದಾರರ ಮನೆಮನೆಗೆ ತೆರಳಿ ಅವರ ಮನವೊಲಿಸಿ ನಿವೇಶನಕ್ಕೆ ಜಾಗ ಪಡೆದಿದ್ದು ದೊಡ್ಡ ಸಾಧನೆ. ಇದು ಸರಕಾರದ ಕೆಲಸವಲ್ಲ, ಜನರ ಸಹಭಾಗಿತ್ವ ಬೇಕು ಎಂಬ ಅರಿವಿದ್ದ ಮಾದೇಗೌಡರು ತನ್ನ ಬಂಧುಗಳಾಗಿದ್ದ ರೈತರ ಮನವೊಲಿಸಿದರು. ಕಾಲಿಗೆ ಚಕ್ರ ಕಟ್ಟಿಕೊಂಡು ತಿರುಗಾಡಿದರು. ಸರಕಾರದ ಹುಡ್ಕೋ ಯೋಜನೆಯ ಅಧಿಕಾರಿಗಳ ಮೇಲೆ ತನ್ನ ಪ್ರಭಾವ ಬೀರಿ 6500 ಮನೆ ನಿರ್ಮಾಣಕ್ಕೆ ಆ ಕಾಲದಲ್ಲಿ ರೂ.15.00ಕೋಟಿ ತಂದದ್ದು ಸಣ್ಣ ಸಾಧನೆಯಲ್ಲ.

ಆಧ್ಯಾತ್ಮ ಮತ್ತು ರಾಜಕಾರಣವನ್ನು ಜೊತೆಯಾಗಿಸಿ ಇವರು ಮಾಡುವ ಸೇವೆ ಕಂಡು ನಿವೃತ್ತ ನೌಕರರು ಸಮಯ ಸಿಕ್ಕಾಗಲೆಲ್ಲಾ ಪುಕ್ಕಟೆಯಾಗಿ ಸೇವೆ ಸಲ್ಲಿಸಲೂ ಮುಂದೆ ಬಂದದ್ದು ಮೈಸೂರಿನಲ್ಲಿ ಇತಿಹಾಸ. ಒಂದೇ ಒಂದು ಕಪ್ಪು ಚುಕ್ಕಿ ಇಲ್ಲದೇ, ಲಂಚರುಷುವತ್ತಿನ ವಾಸನೆ ಇಲ್ಲದೆ 50 ಸಾವಿರಕ್ಕೂ ಹೆಚ್ಚು ಜನ, ಸೂರಿಲ್ಲದವರಿಗೆ ಸೂರು ಕಲ್ಪಿಸುವುದು ಇಂದಿನ ಈ ಜನಮಾನಸದಲ್ಲಿ ಕಲ್ಪಿಸಿಕೊಳ್ಳುವುದು ಅಸಾಧ್ಯ.

ಭೂಮಿ ಪಡೆಯುವುದು, ಬಡಾವಣೆ ನಕ್ಷೆ ಅಂದಾಜು ವೆಚ್ಚ, ಕಾನೂನಾತ್ಮಕ ಅನುಮತಿ ಪಡೆಯುವುದು, ಮೂಲಭೂತ ಸೌಕರ್ಯಗಳಾದ ನೀರು, ದೀಪ, ರಸ್ತೆ ನಿರ್ಮಾಣ, ಒಂದು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ 10–20 ವರ್ಷಗಳಾದರೂ ದೊರಕದ ಇಂದಿನ ಪರಿಸ್ಥಿತಿಯಲ್ಲಿ ಸುಂದರವಾದ ಬಡಾವಣೆ, ವೃತ್ತಗಳು, ರಸ್ತೆಗಳು, ವಿದ್ಯುತ್, ನೀರು ಸೌಕರ್ಯ ಎಲ್ಲವನ್ನೂ ಒದಗಿಸಿಕೊಡುವುದು ಒಂದು ಆಧ್ಯಾತ್ಮದ ಕೆಲಸವೇ ಆಗಿದೆ. ಮಾದೇಗೌಡರು ಬಂದ ಅರ್ಜಿಯನ್ನೇ ಆಶ್ರಯಿಸಲಿಲ್ಲ, ಬಡವರ ಬಾಗಿಲಿನತ್ತ ನಡೆದರು. ಸೊಪ್ಪು ತರಕಾರಿ ಮಾರುವವರು, ಕಡ್ಲೆಕಾಯಿ, ಕಡ್ಲೆಪುರಿ ಮಾರುವವರು, ತಳ್ಳುಗಾಡಿಯವರು, ಪಾದಚಾರಿ ವ್ಯಾಪಾರಸ್ಥರು, ಅಂಗಡಿ ಮುಂಗಟ್ಟುಗಳಲ್ಲಿ ನೌಕರಿ ಮಾಡುವವರು, ಮನೆಗೆಲಸದವರು, ಆಟೋ ಚಾಲಕರು ಇವರನ್ನೆಲ್ಲಾ ಗುರುತಿಸಿ ನಿವೇಶನ ಕಲ್ಪಿಸಿ, ನಗರದಲ್ಲಿ ಸಂಚಲನ ಉಂಟು ಮಾಡಿದರು.

ಒಬ್ಬ ಸುಸಂಸ್ಕೃತ ವ್ಯಕ್ತಿ ತಾನು ನಿರ್ಮಿಸಿದ ಬಡಾವಣೆಗಳಿಗೆ ಸಂಸ್ಕೃತಿ ಸಂಪನ್ನವಾದ ಹೆಸರುಗಳನ್ನೇ ಇಡುತ್ತಾರೆ ಎಂಬುದಕ್ಕೆ ಸಾಕ್ಷಿ ಇಲ್ಲಿದೆ ನೋಡಿ. ರಾಮಕೃಷ್ಣನಗರ, ಶಾರದಾದೇವಿನಗರ, ವಿವೇಕಾನಂದ ನಗರ, ಅರವಿಂದನಗರ, ಲಕ್ಷ್ಮೀಕಾಂತನಗರ, ಸುಬ್ರಹ್ಮಣ್ಯನಗರ, ದಕ್ಷಿಣೇಶ್ವರ ರಸ್ತೆ, ವಿಶ್ವಮೈತ್ರಿ ರಸ್ತೆ, ಶಿವರಾತ್ರೀಶ್ವರನಗರ, ಕುವೆಂಪುನಗರ, ವಿಶ್ವಮಾನವ ಜೋಡಿ ರಸ್ತೆ, ಪಂಚಮಂತ್ರ ರಸ್ತೆ, ಅನಿಕೇತನ ರಸ್ತೆ, ಸಿದ್ಧಾರ್ಥನಗರ, ಬುದ್ಧಮಾರ್ಗ, ಸತ್ಯಮಾರ್ಗ, ತ್ಯಾಗಮಾರ್ಗ, ಮೋಕ್ಷಮಾರ್ಗ, ಅಹಿಂಸಾಮಾರ್ಗ, ರಾಮಕೃಷ್ಣ, ವಿವೇಕಾನಂದರ ವೃತ್ತಗಳು, ಪ್ರತಿಮೆಗಳು, ಅಂಬೇಡ್ಕರ್ ಪ್ರತಿಮೆ ವೃತ್ತ ಹೀಗೆ ಮುಂದುವರಿಯುತ್ತದೆ. ಇದೆಲ್ಲಾ ಮುಂದಿನ ಪೀಳಿಗೆ ಅರಿತುಕೊಳ್ಳುವಂತೆ ಮಾಡಿದೆ.

ಕರ್ನಾಟಕ ರಾಜ್ಯ ಗೃಹ ಮಂಡಳಿ ಎಂಬ ಸರ್ಕಾರಿ ಸಂಸ್ಥೆ ಇದ್ದರೂ, 1987ರಲ್ಲಿ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಗೆ ಭಾರತ ದೇಶದಲ್ಲಿ ಮನ್ನಣೆ ದೊರಕಿದ್ದು ಇತಿಹಾಸ. ಈ ಸಂದರ್ಭದಲ್ಲಿ ಪ್ರಕಟಿಸಲಾದ ಪುಸ್ತಕಕ್ಕೆ 'ಮನೆ ಮನೆ' ಎಂದೇ ಹೆಸರಿಸಲಾಗಿತ್ತು. ರಾಷ್ಟ್ರಕವಿ ಕುವೆಂಪುರವರ ಗೀತೆಯ ಸಾಲಿದೆ. 'ಮನೆಯನೆಂದು ಕಟ್ಟದಿರು' ಇದು ಆಧ್ಯಾತ್ಮ ಸಂಬಂಧದ ಸಂದೇಶ. ಆದರೆ ಲೌಕಿಕದ ವಿಚಾರದಲ್ಲಿ ಪ್ರತಿಯೊಬ್ಬರೂ, ಪ್ರತಿಯೊಂದು ಕುಟುಂಬಕ್ಕೂ ತಲೆಯ ಮೇಲೊಂದು ಸೂರು ಅಗತ್ಯ. ಮಾದೇಗೌಡರು ಸಿ.ಪಿ.ಕೆ ಅಂದಂತೆ 'ವಸತಿ ಮಹಾಯಜ್ಞದ ಅಧ್ವರ್ಯ' ಮನೆ ಎಂಬುವುದು ಮಾದೇಗೌಡರ ಮಂತ್ರಮಾಣಿಕ್ಯ. ಜನಮನ ಮಂದಿರದಲ್ಲಿ ಇವರನ್ನು 'ಮನೆ ಮಾದೇಗೌಡ'ರೆಂದೇ ಕರೆಯುವಂತಾದದ್ದು ಇವರ ಸಾಧನೆಗೆ ಸಂದ ಗೌರವ. ಇವರ ಅದ್ಭುತವಾದ ಕನಸಿನ ಯೋಜನೆಯ ಹೆಸರೇ 'ಆಶಾಮಂದಿರ'. ಒಬ್ಬ ರಾಜಕಾರಣಿ ಹೇಗೆ ಪಾರದರ್ಶಕನಾಗಿ ಇರಬಲ್ಲ ಎಂಬುವುದಕ್ಕೆ ಮಾದೇಗೌಡರು ಸಾಕ್ಷಿ. ತಮ್ಮ 'ಆಶಾಮಂದಿರ' ಯೋಜನೆಯ ಮೂಲಕ ಇಡೀ ದೇಶದ ಲಕ್ಷ್ಯವನ್ನು ತನ್ನತ್ತ ಸೆಳೆದು ಕಾರ್ಯಗತಗೊಳಿಸಿದರು. ಮೈಸೂರು ನಗರವನ್ನು ಯಾಂತ್ರಿಕ ನೀರಸವಾದ ಊರನ್ನಾಗಿಸದೆ ಅದಕ್ಕೆ ಆಧ್ಯಾತ್ಮ ರಕ್ಷೆಯನ್ನು ಕಟ್ಟಿ 'ದಿವ್ಯತ್ರಯರ' ಪಾವನ ಜೀವನದ ಮತ್ತು ಕುವೆಂಪು ಅವರ 'ದೀಪ್ತ' ಕಾವ್ಯಶ್ರೇಣಿಯ ಸ್ಮೃತಿತೀರ್ಥದಿಂದ ಪವಿತ್ರೀಕರಿಸಿದ್ದಾರೆ. ಹೆಬ್ಬಾಳದಲ್ಲಿ ಶ್ರೀ ಲಕ್ಷ್ಮೀಕಾಂತ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಈ ಮಧ್ಯೆ 2002ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಸ್ವಚ್ಛ ನಗರಿಗಳಲ್ಲಿ ಅದ್ವಿತೀಯ ಸೇವೆ ಸಲ್ಲಿಸಿದ ಸಂಘ ಸಂಸ್ಥೆಗಳ ಪೈಕಿ, ಇಡೀ ಭಾರತದಲ್ಲಿ ಗುರುತಿಸಿದ 3 ಸೇವಾ ಸಂಸ್ಥೆಗಳಲ್ಲಿ ಮೈಸೂರಿನ ಕುಂಬಾರಕೊಪ್ಪಲು ವಾರ್ಡ್ (ವಾರ್ಡ್ ನಂ.35) 'ಫೆಡರೇಷನ್ ಆಫ್ ಮೈಸೂರು ಸಿಟಿ ಕಾರ್ಪೊರೇಶನ್ ವಾರ್ಡ್ ಪಾರ್ಲಿಮೆಂಟ್' 'ಸ್ವಚ್ಛತಾ–ಇ–ಸೇವಾ' ಪ್ರಶಸ್ತಿಗೆ 2017ರಲ್ಲಿ ಭಾಜನವಾಗಿದೆ. ಅಂದಿನ ಈ ಸಂಸ್ಥೆಯ ಅಧ್ಯಕ್ಷರು ಡಿ.ಮಾದೇಗೌಡರು. ಕಸ ವಿಲೇವಾರಿ ಘಟಕ ಸ್ಥಾಪಿಸಿ ಕಸಮುಕ್ತ ಮೈಸೂರು ಮಾಡುವುದು ಇವರ ಗುರಿ. ಅದಕ್ಕಾಗಿ ನಿರಂತರ ಪ್ರಯತ್ನ.

ಕೇವಲ ವರ್ಷಕ್ಕೆ ನೂರು ರೂಪಾಯಿ ಗುತ್ತಿಗೆ ದರದಲ್ಲಿ ಹತ್ತಾರು ಎಕರೆ ಜಾಗ ಪಡೆದು ಗೋಕುಲಂನಲ್ಲಿ 10 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಯೂತ್ ಹಾಸ್ಟೆಲ್ ಇಂದು ದೊಡ್ಡ ಸಂಖ್ಯೆಯ ಕ್ರೀಡಾ ಪ್ರೇಮಿಗಳಿಗೆ, ಪ್ರವಾಸಿಗರಿಗೆ ಆಶ್ರಯ ಒದಗಿಸಿದೆ. ಇದರ ನೇರ ಕಾರಣಕರ್ತರು ಮಾದೇಗೌಡರು.

ಇಂದು ಮೈಸೂರು ಮಲೆಮಹದೇಶ್ವರ ಬೆಟ್ಟ ಮತ್ತು ಸನ್ನಿಧಾನದ ಸಮಗ್ರ ಅಭಿವೃದ್ಧಿ ಮತ್ತು ಅಲ್ಲಿ ಜನಪದ ಸಂಸ್ಕೃತಿ ಅರಳಬೇಕು ಎಂದು ನಿತ್ಯ ಚಿಂತಿಸುತ್ತಿರುವ ಮಾದೇಗೌಡರು ಪ್ರಸ್ತುತ ಇಂದಿನ ರಾಜಕಾರಣಿಗಳಿಗೆ, ಸಂಸ್ಕೃತಿ ಪ್ರೀತಿಸುವ ಸಂಸ್ಕಾರವಂತರಿಗೆ, ಕಲಾವಿದರಿಗೆ ಸ್ಫೂರ್ತಿಯಾಗಬಲ್ಲರು. ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದರು ಮಾದೇಗೌಡರ ಬಗ್ಗೆ ಬರೆಯುತ್ತಾ ಕುವೆಂಪುರವರ ಕರ್ಮಯೋಗಿ ಎಂಬ ಕವನದ ಸಾಲುಗಳನ್ನು ಉದಾಹರಿಸುತ್ತಾರೆ.

ಸೂತ್ರಧಾರಿಣಿ ನೀನು, ಪಾತ್ರಧಾರಿಯು ನಾನು
ಯಾವ ಪಾತ್ರವನಿತ್ತರೇನು ನೀನೆನಗೆ
ನಿನ್ನ ಅಧ್ಯಕ್ಷತೆಯು ಈ ನಿನ್ನ ಲೀಲೆಯಲಿ
ಪರಮ ಪುರುಷಾರ್ಥ ರೂಪಿಣಿ ನೀನೇ ಕೊನೆಗೆ!
ಚವರವಿಡಿದರೆ ಮೇಲೇ? ಪೊರಕೆವಿಡಿದರೆ ಕೀಳೇ?
ಮಾಳ್ಪ ಕೆಲಸಗಳೆಲ್ಲಾ ನೈವೇದ್ಯವಾಗೆ!

ಸಂಸದ ಪ್ರತಾಪ್ ಸಿಂಹ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಮೈಸೂರು, ಜೂ.16(ಎಂಟಿವೈ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ವಿರುದ್ಧ ಸಂಸದ ಪ್ರತಾಪಸಿಂಹ ಅಗೌರವದಿಂದ ಮಾತಾಡಿ, ತಮ್ಮ ಸಂಸ್ಕೃತಿ ತೋರಿಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು. ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಡಾ.ಅಂಬೇಡ್ಕರ್ ವೃತ್ತದಲ್ಲಿ ಎನ್.ಆರ್.ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಪ್ರತಾಪಸಿಂಹ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಅಭಿವೃದ್ಧಿ ವಿಚಾರವಾಗಿ ಚರ್ಚೆಗೆ ಆಹ್ವಾನಿಸಿರುವ ಪ್ರತಾಪ ಸಿಂಹ ಸಿದ್ದರಾಮಯ್ಯ ಅವರ ವಿರುದ್ಧ ಅಹಂಕಾರದಿಂದ ಹೇಳಿಕೆ ನೀಡಿದ್ದಾರೆ. ಗ್ರಾಮ ಪಂಚಾಯಿತಿಯಲ್ಲೂ ಗೆಲ್ಲದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಎಂದು ಟೀಕಿಸಿದ್ದಾರೆ. ಮಹಾರಾಜರಿಗೆ ಹೋಲಿಕೆ ಮಾಡಿಕೊಂಡು ಅಭಿವೃದ್ಧಿ ಕೆಲಸ ಮಾಡಿದ್ದೇ ನಾನು ಎಂದು ಹೇಳಿಕೊಳ್ಳುತ್ತಿದ್ದಾರೆ. ಸಂಸದ ಸ್ಥಾನಕ್ಕೆ ಗೌರವ ಕೊಟ್ಟು ವರ್ತನೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಲಕ್ಷ್ಮಣ್ ಕಂಡರೆ ನಿಮಗ್ಯಾಕೇ ಭಯ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಎನ್.ಆರ್.ಕ್ಷೇತ್ರದ ವಕ್ತಾರ ಎಸ್.ರಾಜೇಶ್, ಮುಖಂಡರಾದ ರಾಕೇಶ್ ಕುಮಾರ್, ಕುಮಾರಸ್ವಾಮಿ, ನಾರಾಯಣ, ಸಿದ್ದಲಿಂಗ, ಎಸ್.ಎ.ರಹೀಂ ಇನ್ನಿತರರು ಪಾಲ್ಗೊಂಡಿದ್ದರು.



ಗುರುವಾರ ಹುಟ್ಟುಹಬ್ಬ ಆಚರಿಸಿಕೊಂಡ ಹುಣಸೂರು ಶಾಸಕ ಹೆಚ್.ಪಿ. ಮಂಜುನಾಥ್ ಅವರನ್ನು ಮೈಸೂರು ತಾಲೂಕು ಒಕ್ಕಲಿಗ ಸಂಘದ ಅಧ್ಯಕ್ಷರೂ ಆದ ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ, ಮುಖಂಡರಾದ ಕೂರ್ಗಳ್ಳಿ ಸುರೇಶ್, ಜೀವನ್ ಮಹದೇವ್ ಇನ್ನಿತರರು ಅಭಿನಂದಿಸಿದರು.

ಜಿ.ಮಾದೇಗೌಡರ ಕುಟುಂಬದ ರಾಜಕೀಯ ಅಜ್ಞಾತವಾಸಕ್ಕೆ ಅಂತೂ ತೆರೆಬಿತ್ತು

ಎಂ.ಕೆ.ಮೋಹನ್‌ರಾಜ್

ಮಂಡ್ಯ, ಜೂ.16– ಮಂಡ್ಯ ಜಿಲ್ಲೆ ಮಟ್ಟಿಗೆ ರಾಜಕೀಯದಲ್ಲಿ ಸೋಲಿಲ್ಲದ ಸರದಾರ ಎಂದೇ ಖ್ಯಾತಿ ಪಡೆದಿದ್ದವರು ಹಿರಿಯ ಮುತ್ಸದ್ದಿ ಜಿ.ಮಾದೇಗೌಡರು. ಕಿರುಗಾವಲು ಕ್ಷೇತ್ರದಿಂದ ಸತತ 6 ಬಾರಿ ಶಾಸಕರಾಗಿ, 2 ಬಾರಿ ಸಂಸದರಾಗಿ, ಸಚಿವರಾಗಿ ಕಾರ್ಯ ನಿರ್ವಹಿಸಿ, ಜನನಾಯಕರಾಗಿ ಗುರುತಿಸಿಕೊಂಡ ಗೌಡರಿಗೆ ರಾಜಕೀಯದಲ್ಲಿ ಸಿಕ್ಕಿದ್ದು ಸೋಲಿನ ವಿದಾಯ. ಬಳಿಕ ಅವರ ಪುತ್ರ ಮಧು ಜಿ.ಮಾದೇಗೌಡ ಸತತ 4 ಬಾರಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದರಾದರೂ ಗೆಲುವು ಸಾಧಿಸಲು ಸಾಧ್ಯವಾಗಿರಲಿಲ್ಲ. ಆದರೆ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಮಧು ಜಿ.ಮಾದೇಗೌಡ ಐತಿಹಾಸಿಕ ಗೆಲುವು ಸಾಧಿಸುವ ಮೂಲಕ ಜಿ.ಮಾದೇಗೌಡರ ಕುಟುಂಬದ ರಾಜಕೀಯ ಅಜ್ಞಾತವಾಸ ಅಂತ್ಯಗೊಂಡಿದೆ.

ಜಿಲ್ಲೆಯಲ್ಲಿ ಸತತ 8 ಬಾರಿ ಚುನಾವಣೆಯಲ್ಲಿ ಗೆದ್ದ ಇತಿಹಾಸ ಯಾವ ರಾಜಕಾರಣಿಗೂ ಇಲ್ಲ. ಆದರೆ ಜಿ.ಮಾದೇಗೌಡ ಈ ದಾಖಲೆ ಬರೆದಿದ್ದರು. ಅವರ ರಾಜಕೀಯ ಸಂಧ್ಯಾಕಾಲದಲ್ಲಿ ಮಾತ್ರ ಅವರಿಗೆ ಸೋಲಾಯಿತು. ಈ ಸೋಲಿನ ನೋವು ಮಾದೇಗೌಡರಿಗೂ ಇತ್ತು. ಅಲ್ಲದೇ ತಮ್ಮ ಪುತ್ರ ಮಧು ಜಿ.ಮಾದೇಗೌಡರನ್ನು ರಾಜಕೀಯವಾಗಿ ಬೆಳೆಸಬೇಕೆಂಬ ಅವರ ಆಸೆಯೂ ಈಡೇರಲಿಲ್ಲ.


ಮಧು ಮಾದೇಗೌಡರು 2004ರಲ್ಲಿ ಕಿರುಗಾವಲು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆಗೆ ಇಳಿದರಾದರೂ ಗೆಲುವು ದೊರೆಯಲಿಲ್ಲ. ಬಳಿಕ ಮದ್ದೂರು ಕ್ಷೇತ್ರದಿಂದ ಸತತ 3 ಚುನಾವಣೆಯಲ್ಲಿ ಸ್ಪರ್ಧಿಸಿ, ಸೋತರು. ಮಧು ಒಮ್ಮೆ ವಿಧಾನಪರಿಷತ್ ಸದಸ್ಯರಾಗಿ ನಾಮ ನಿರ್ದೇಶನವಾಗಿದ್ದು ಬಿಟ್ಟರೆ, ಗೆಲುವು ಮರೀಚಿಕೆಯಾಗಿತ್ತು. ಆದರೆ ಪರಿಷತ್ ಚುನಾವಣೆ ಗೆಲುವು ಗೌಡರ ಕುಟುಂಬಕ್ಕೆ ಸುಮಾರು 20 ವರ್ಷಗಳ ಬಳಿಕ ದೊರಕಿದೆ.

1962ರಲ್ಲಿ ಮೊದಲ ಬಾರಿಗೆ ಮಂಡ್ಯ ಜಿಲ್ಲೆಯ ಕಿರುಗಾವಲು ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗುವ ಜಿ.ಮಾದೇಗೌಡರು 67, 72, 78, 83, 85ರ ಚುನಾವಣೆಯಲ್ಲಿ ಗೆಲ್ಲುವ ಮೂಲಕ 6 ಬಾರಿ ಶಾಸಕರಾಗಿ ಆಯ್ಕೆಯಾಗಿ, ಜಿಲ್ಲೆಯ ಇತಿಹಾಸದಲ್ಲೇ ರಾಜಕೀಯ ನಾಯಕನೊಬ್ಬ 6 ಬಾರಿ ಶಾಸಕರಾಗಿ ಆಯ್ಕೆಯಾದ ದಾಖಲೆಯನ್ನು ಬರೆದರು. ಈ ದಾಖಲೆಯನ್ನು ಇದುವರೆಗೆ ಯಾರ ಕೈಯ್ಯಲ್ಲೂ ಮುರಿಯಲು ಸಾಧ್ಯವಾಗಿಲ್ಲ.

ರಾಜ್ಯ ರಾಜಕಾರಣದಿಂದ ಕೇಂದ್ರ ರಾಜಕಾರಣಕ್ಕೆ ಕಾಲಿಟ್ಟ ಜಿ.ಮಾದೇಗೌಡರು, ಕಾಂಗ್ರೆಸ್‌ನಿಂದ 1989 ಹಾಗೂ 1991ರಲ್ಲಿ ಗೆಲುವು ಸಾಧಿಸುವ ಮೂಲಕ ಸತತ 2 ಬಾರಿ ಸಂಸತ್ ಪ್ರವೇಶಿಸಿದ್ದರು. ಆದರೆ ಆ ಸಂದರ್ಭದಲ್ಲಿ ರಾಜಕೀಯಕ್ಕಿಂತ ಕಾವೇರಿ ಹೋರಾಟದ ಕಡೆಗೆ ಗಮನ ಹರಿಸಿದ ಗೌಡರು, ರಾಜಕೀಯ ಸಂಘಟನೆ ಹಾಗೂ ಚುನಾವಣಾ ರಾಜಕಾರಣಕ್ಕೆ ಹೆಚ್ಚು ಗಮನ ಕೊಡಲಿಲ್ಲ. ಈ ನಿಟ್ಟಿನಲ್ಲಿ 1996ರ ಲೋಕಸಭಾ ಚುನಾವಣೆಯಲ್ಲಿ ಜನತಾದಳದ ಕೆ.ಆರ್.ಪೇಟೆ ಕೃಷ್ಣ ವಿರುದ್ಧ ಸೋಲುವ ಮೂಲಕ 34 ವರ್ಷಗಳ ಮಾದೇಗೌಡರ ಗೆಲುವಿನ ಓಟಕ್ಕೆ ಬ್ರೇಕ್ ಬಿದ್ದಿತ್ತು.

ಬಳಿಕ 1998ರಲ್ಲಿ ಕಾವೇರಿ ಹೋರಾಟದ ಜೊತೆಗೆ ಮತ್ತೊಮ್ಮೆ ಲೋಕಸಭೆಗೆ ಸ್ಪರ್ಧಿಸಿದ್ದ ಮಾದೇಗೌಡರು, ಜನತಾದಳದಿಂದ ಸ್ಪರ್ಧಿಸಿದ್ದ ನಟ ಅಂಬರೀಷ್ ವಿರುದ್ಧ 1,62,459 ಮತಗಳಿಂದ ಸೋಲು ಅನುಭವಿಸಿದರು. ಪ್ರಥಮ ಬಾರಿಗೆ ರಾಮನಗರದಲ್ಲಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ ಸೋಲು ಕಂಡ ಅಂಬರೀಷ್ ಬಗ್ಗೆ ಮಂಡ್ಯದಲ್ಲಿ ವ್ಯಾಪಕ ಅನುಕಂಪವಿದ್ದ ಕಾರಣ ಭಾರೀ ಅಂತರದ ಗೆಲುವು ಸಿಕ್ಕಿತ್ತು. ಸೋಲಿಲ್ಲದ ಸರದಾರ ಎನಿಸಿದ್ದ ಮಾದೇಗೌಡರು ಸತತ ಎರಡು ಸೋಲಿನ ಬಳಿಕ ಚುನಾವಣಾ ರಾಜಕಾರಣಕ್ಕೆ ವಿದಾಯ ಹೇಳಿದ್ದರು.

ಕಡೆಯದಾಗಿ ಸೋಲಿನ ಮೂಲಕ ಚುನಾವಣಾ ರಾಜಕಾರಣಕ್ಕೆ ವಿದಾಯ ಹೇಳಿದ್ದು, ಅವರ ಬೆಂಬಲಿಗರಿಗೆ ಸಾಕಷ್ಟು ನೋವುಂಟು ಮಾಡಿತು. ಬಳಿಕ ಕಿರುಗಾವಲು ಕ್ಷೇತ್ರದಲ್ಲಿ ಅವರ ಬೆಂಬಲಿಗರು ಮತ್ತೆ ಸ್ಪರ್ಧೆ ಮಾಡುವಂತೆ ಒತ್ತಾಯಿಸಿದರಾದರೂ ಸ್ಪರ್ಧಿಸದೇ ತಮ್ಮ ಬೆಂಬಲಿಗರಿಗೆ ಕ್ಷೇತ್ರ ಬಿಟ್ಟು ಕೊಟ್ಟಿದ್ದರು.





ಇನ್ನು ಬೆಂಬಲಿಗರ ಒತ್ತಡಕ್ಕೆ ಮಣಿದು ಮಾದೇಗೌಡರು ತಮ್ಮ ಪುತ್ರ ಮಧು ಜಿ.ಮಾದೇಗೌಡರನ್ನು ರಾಜಕೀಯಕ್ಕೆ ಕರೆತಂದರು. 2004ರಲ್ಲಿ ಕಿರುಗಾವಲು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಧು ಜಿ.ಮಾದೇಗೌಡ ಸ್ಪರ್ಧೆ ಮಾಡಿದರಾದರೂ ಮೊದಲ ಚುನಾವಣೆಯಲ್ಲೇ ಸೋಲಬೇಕಾಗುತ್ತದೆ. ಇನ್ನು ಕ್ಷೇತ್ರ ಪುನರ್ ವಿಂಗಡಣೆಯಿಂದ ಕಿರುಗಾವಲು ಮದ್ದೂರು ಹಾಗೂ ಮಳವಳ್ಳಿ ಕ್ಷೇತ್ರದಲ್ಲಿ ವಿಲೀನವಾದ ಪರಿಣಾಮ ಮಧು 2008ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧೆ ಮಾಡಿ ಎರಡನೇ ಬಾರಿಯೂ ಸೋತರು.

2013ರಲ್ಲಿ ಮತ್ತೆ ಮೂರನೇ ಬಾರಿಗೆ ಕಾಂಗ್ರೆಸ್‌ನಿಂದ ಕಣಕ್ಕಿಳಿದರಾದರೂ ಆಗಲೂ ಸೋಲು ಕಾಣಬೇಕಾಗುತ್ತದೆ. ತದ ನಂತರ 2018ರ ಚುನಾವಣೆಯಲ್ಲೂ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಲ್ಕನೇ ಬಾರಿಯೂ ಸೋಲು ಕಂಡರು. ಈ ನಡುವೆ ಬಿಜೆಪಿ ಅಭ್ಯರ್ಥಿಯಾಗಿ 2008ರಲ್ಲಿ ಜೆಡಿಎಸ್‌ನ ಸಿದ್ದರಾಜು ವಿರುದ್ಧ ಸೋತಿದ್ದ ಮಧು ಮಾದೇಗೌಡಗೆ 2009ರಲ್ಲಿ ಸಿದ್ದರಾಜು ಸೋಲಿನಿಂದ ತೆರವಾದ ಉಪಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಸಿಗಲಿಲ್ಲ. ಬದಲಾಗಿ ಡಿ.ಸಿ.ತಮ್ಮಣ್ಣಗೆ ಟಿಕೆಟ್ ನೀಡಲಾಯಿತು. ಟಿಕೆಟ್ ತ್ಯಾಗ ಮಾಡಿದ್ದಕ್ಕಾಗಿ 2 ವರ್ಷದ ಅವಧಿಗೆ ಮಧು ಅವರನ್ನು ವಿಧಾನಪರಿಷತ್‌ಗೆ ನಾಮನಿರ್ದೇಶನ ಮಾಡಲಾಯಿತು.

ಈ ಬಾರಿಯ ಪರಿಷತ್ ಚುನಾವಣೆಗೆ ವರ್ಷದ ಹಿಂದೆಯೇ ಕಾಂಗ್ರೆಸ್ ಮಧು ಮಾದೇಗೌಡರಿಗೆ ಟಿಕೆಟ್ ನೀಡುವ ಭರವಸೆಯೊಂದಿಗೆ, ಸಂಘಟನೆಗೆ ಸೂಚಿಸಿದ್ದರಿಂದ ಪರಿಷತ್ ಚುನಾವಣೆಯಲ್ಲಿ ಮಧು ಮಾದೇಗೌಡ ಗೆಲುವು ಸಾಧಿಸಿದ್ದಾರೆ. ಈ ಮೂಲಕ ಮಾದೇಗೌಡರ ಕುಟುಂಬಕ್ಕೆ ಅಂಟಿದ್ದ 2 ದಶಕಗಳ ರಾಜಕೀಯ ಅಜ್ಞಾತವಾಸ ಕೊನೆಗೂ ಅಂತ್ಯಗೊಂಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಶುಕ್ರವಾರ
17-6-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ

ನಮ್ಮ ಹುಡುಗರ ಸಾಹಸ



ಹೆಚ್.ಬಿ.ಸಿದ್ದು ನಿರ್ದೇಶನದ 'ಮಂಡ್ಯ ಹುಡುಗರು' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು, ಪ್ರತಿಯೊಂದು ಊರಿನಲ್ಲೂ ಸ್ನೇಹಿತರ ಸರ್ಕಲ್ ಇದ್ದೇ ಇರುತ್ತದೆ, ಸ್ನೇಹಿತರ ನಡುವೆ ಮೋಸ, ದ್ರೋಹ, ವಂಚನೆ ಯಾವತ್ತೂ ನಡೆಯುವುದಿಲ್ಲ. ಅದೇ ಸ್ನೇಹಿತರ ಮಧ್ಯೆ ಒಂದು ಸುಳ್ಳು ಹುಟ್ಟಿಕೊಂಡಾಗ ಆ ಸುಳ್ಳಿನಿಂದ ಏನೇನೆಲ್ಲ ತೊಂದರೆಗಳಾಗುತ್ತವೆ ಮತ್ತು ಅವರು ಅದರಿಂದಾಚೆ ಹೇಗೆ ಹೊರಬರುತ್ತಾರೆ ಎಂಬುದನ್ನು ಹೇಳುವ ಕಥಾನಕ ಈ ಚಿತ್ರದಲ್ಲಿದೆ. ನಿರಂಜನ್ ಸುಧೀಂದ್ರ, ರಾಧ್ಯ ನಾಯಕ ನಾಯಕಿಯಾಗಿ ಅಭಿನಯಿಸಿರುವ ಈ ಚಿತ್ರದಲ್ಲಿ ವಸಿಷ್ಟಸಿಂಹ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕಾರ್ಯಕ್ರಮದಲ್ಲಿ ನಿರ್ದೇಶಕ ಸಿದ್ದು ಮಾತನಾಡಿ ಸ್ನೇಹ ಕುರಿತಾದ ಕಥೆ ಈ ಚಿತ್ರದಲ್ಲಿದ್ದು, ಉಪೇಂದ್ರ ಅವರೂ ಚಿತ್ರ ವೀಕ್ಷಿಸಿ ಸಣ್ಣ ಕರೆಕ್ಷನ್ ಹೇಳಿದರು. ಜುಲೈ 8ಕ್ಕೆ 150ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆಯಾಗುತ್ತಿದೆ. ಬೆಂಗಳೂರು, ಮಂಗಳೂರು, ಮಂಡ್ಯ, ಮೈಸೂರು ಸುತ್ತಮುತ್ತ ಶೂಟಿಂಗ್ ನಡೆಸಿದ್ದೇವೆ. ಅಭಿಮನ್‌ರಾಯ್ ಅವರು ಮಧುರವಾದ ಹಾಡುಗಳನ್ನು ಮಾಡಿಕೊಟ್ಟಿದ್ದಾರೆ. ಸ್ನೇಹಿತರ ನಡುವೆ ಹುಟ್ಟಿಕೊಳ್ಳುವಂತಹ ಒಂದು ಸುಳ್ಳು ಮುಂದೆ ಏನೆಲ್ಲ ಸಮಸ್ಯೆಗಳನ್ನು ಹುಟ್ಟುಹಾಕಿತು ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ ಎಂದು ವಿವರಿಸಿದರು. ಚಿತ್ರದ ನಿರ್ಮಾಪಕ ಕೆ.ಕೆ.ಅಶ್ರಫ್ ಮಾತನಾಡಿ ಸಿನಿಮಾ ಕುಟುಂಬದಿಂದ ಬಂದ ಹುಡುಗನನ್ನು ಒಂದೊಳ್ಳೇ ಚಿತ್ರದ ಮೂಲಕ ಲಾಂಚ್ ಮಾಡಿದ್ದೇವೆ, ನಿರಂಜನ್ ನಿಜಕ್ಕೂ ಅದ್ಭುತವಾಗಿ ಅಭಿನಯಿಸಿದ್ದಾರೆ ಎಂದು ಹೇಳಿದರು.

ನಂತರ ನಾಯಕ ನಿರಂಜನ್ ಮಾತನಾಡುತ್ತ ಅಪ್ಪು ಅವರು ನನ್ನ ಮೊದಲ ಚಿತ್ರದಲ್ಲಿ ಹಾಡಿರುವುದೇ ಸಂತಸದ ವಿಷಯ. ಭರಮು ಎಂಬ ಮಂಡ್ಯ ಹುಡುಗನ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಅಲೋಕ್, ಪ್ರವೀಣ್ ಹಾಗೂ ಮಾರುತಿ ನನ್ನ ಸ್ನೇಹಿತರಾಗಿ ಅಭಿನಯಿಸಿದ್ದಾರೆ. ಪ್ರಥಮಾರ್ಧದಲ್ಲಿ ಸೆಂಟಿಮೆಂಟ್, ಕಾಮಿಡಿಯಾಗಿ ಸಾಗುವ ಕಥೆ, ಸೆಕೆಂಡ್ ಹಾಫ್‌ನಲ್ಲಿ ವಸಿಷ್ಟಸಿಂಹ ಎಂಟ್ರಿಯಾದ ಮೇಲೆ ಹೊಸರೂಪ ಪಡೆಯುತ್ತದೆ. ಶರತ್ ಲೋಹಿತಾಶ್ವ, ಶಂಕರ್ ಅಶ್ವಥ್, ಭವ್ಯ ಅವರಂಥ ಹಿರಿಯ ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ ಎಂದು ಹೇಳಿದರು.

ಓ ಮೈ ಲವ್ ನಿನ್ನ ಡ್ಯಾಡಿ ಹಾಡಿಗೆ ಭರ್ಜರಿ ಪ್ರತಿಕ್ರಿಯೆ



ಸ್ಮೈಲ್‌ಶ್ರೀನು ಅವರ ನಿರ್ದೇಶನದ ಓ ಮೈ ಲವ್ ಚಿತ್ರದ ಕ್ರೇಜ್ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಅಕ್ಷಿತ್‌ಶಶಿಕುಮಾರ್, ಕೀರ್ತಿಕಲ್ಕೆರೆ ನಟಿಸಿರುವ ಈ ಚಿತ್ರ ಆರಂಭವಾದಾಗಿನಿಂದ ಸದ್ದು ಮಾಡುತ್ತಲೇ ಬಂದಿದೆ. ಈಗಾಗಲೇ ಬಿಡುಗಡೆಯಾಗಿರುವ ಗ್ಲಿಂಪ್ಸ್ ಹಾಗೂ ಹಾಡುಗಳು ಸಖತ್ ಹಿಟ್ ಆಗಿರುವುದು ಚಿತ್ರದ ಗೆಲುವಿನ ಮುನ್ಸೂಚನೆಯಾಗಿದೆ.

ಈಚೆಗೆ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್‌ಅವರು ಬಿಡುಗಡೆ ಮಾಡಿದ ನಿನ್ನ ಡ್ಯಾಡಿ ನಂಗೆ...ಎನ್ನುವ ಹಾಡು ಮಿಲಿಯನ್‌ಗೂ ಅಧಿಕ ಹಿಟ್ಸ್ ದಾಖಲಿಸಿ ಟ್ರೆಂಡಿಂಗ್‌ನಲ್ಲಿದೆ. ಎ2 ಮ್ಯೂಸಿಕ್ ಯೂಟ್ಯೂಬ್ ಚಾನಲ್‌ನಲ್ಲಿ ಈ ಹಾಡು ಬಿಡುಗಡೆಯಾಗಿದೆ. ಕೆ.ಜಿ.ಎಫ್ ಹಾಗೂ ಚಾರ್ಲಿ ನಂತರ ಚಿತ್ರಮಂದಿರಕ್ಕೆ ಪ್ರೇಕ್ಷಕರನ್ನು ಕರೆತರುವ ಮತ್ತೊಂದು ಚಿತ್ರವಿದು ಎಂಬ ಭರವಸೆಯನ್ನು ಮೂಡಿಸಿದೆ. ಜಿ.ಸಿ.ಬಿ.ಪ್ರೊಡಕ್ಷನ್ಸ್ ಮೂಲಕ ಜಿ.ರಾಮಾಂಜಿನಿ ಅವರ ನಿರ್ಮಾಣದ ಈ ಚಿತ್ರದ ಹಾಡುಗಳಿಗೆ ವಿ.ನಾಗೇಂದ್ರಪ್ರಸಾದ್ ಅವರು ಸಾಹಿತ್ಯ ರಚಿಸಿದ್ದು, ಚರಣ್ ಅರ್ಜುನ್ ಸಂಗೀತ ನೀಡಿದ್ದಾರೆ.

ಅಣ್ಣ ತಂಗಿ ಸೆಂಟಿಮೆಂಟ್‌ನ ಬೆಂಕಿ



ಅನೀಶ್ ತೇಜೇಶ್ವರ್ ನಾಯಕನಾಗಿ ನಟಿಸಿ, ನಿರ್ಮಿಸಿರುವ 'ಬೆಂಕಿ' ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಶಾನ್ ಅವರ ನಿರ್ದೇಶನವಿರುವ ಈ ಚಿತ್ರದಲ್ಲಿ ಆಕ್ಷನ್ ಜೊತೆಗೆ ಎಮೋಷನ್ ಹಾಗೂ ಸಹೋದರ ಸಂಬಂಧದ ಕಥಾಹಂದರವಿದೆ. ಹಳ್ಳಿ ಬ್ಯಾಕ್‌ಡ್ರಾಪ್‌ನಲ್ಲಿ ತಯಾರಾಗಿರುವ ಪಕ್ಕಾ ಮಾಸ್ ಹಾಗೂ ಕಮರ್ಷಿಯಲ್ ಸಿನಿಮಾ ಇದಾಗಿದ್ದು, ಚಿತ್ರ ಕುರಿತಂತೆ ತಂಡ ಒಂದಷ್ಟು ಮಾಹಿತಿ ಹಂಚಿಕೊಂಡಿದೆ ಬೆಂಕಿ. ನನ್ನ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾದ ಮೂರನೇ ಸಿನಿಮಾ. ನನ್ನ ಸ್ನೇಹಿತರ ಸಹಕಾರ ಇಲ್ಲದೇ ಇದ್ದರೆ ಸಿನಿಮಾ ಮಾಡೋದಿಕ್ಕೆ ಆಗುತ್ತಿರಲಿಲ್ಲ ಬೆಂಕಿ ಚಿತ್ರದಲ್ಲಿ ಆಕ್ಟಿಂಗ್ ಮಾಡೋದಕ್ಕಿಂತ ಪ್ರೊಡಕ್ಷನ್ ಮಾಡೋದು ನನಗೆ ಸವಾಲು ಆಗಿತ್ತು. ಅಣ್ಣ-ತಂಗಿ ಸೆಂಟಿಮೆಂಟ್ ಕಥಾಹಂದರ ಇರುವ ಈ ಚಿತ್ರ ಜುಲೈ 15ಕ್ಕೆ ರಿಲೀಸ್ ಆಗುತ್ತಿದೆ ಈ ಬಾರಿ ತುಂಬಾ ತುಂಬಾ ಕಾನ್ಫಿಡೆನ್ಸ್ ಆಗಿ ಬರ್ತಿದ್ದೇವೆ ಎಂದು ನಾಯಕ, ನಿರ್ಮಾಪಕ ಅನೀಶ್ ತಮ್ಮ ಹೆಬ್ಬಯಕೆ ಹಂಚಿಕೊಂಡರು.


ನಿರ್ದೇಶಕ ಶಾನ್ ಮಾತನಾಡಿ, ಈ ಚಿತ್ರ ದೊಡ್ಡ ಎಮೋಷನಲ್ ಜರ್ನಿ. ಫ್ಯಾಮಿಲಿ ಬ್ಯಾಕ್‌ಡ್ರಾಪ್ ಇರುವ ಸಿನಿಮಾ. ನಾವು ಮನೆಯಲ್ಲಿ ಇದ್ದೇವೆ ಎನ್ನುವಂತಿದೆ. ಇಡೀ ಜರ್ನಿ. ಕಾಮಿಡಿ, ಸೆಂಟಿಮೆಂಟ್ ಎಲ್ಲವೂ ಸಿನಿಮಾದಲ್ಲಿದೆ ಎಂದರು.

ವಿಂಕ್ವಿಷಲ್ ಪ್ರೊಡಕ್ಷನ್ ಬ್ಯಾನರ್ ಮೂಲಕ ಅನೀಶ್ ತೇಜೇಶ್ವರ್ ಬೆಂಕಿ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಗ್ರಾಮೀಣ ಹಿನ್ನೆಲೆಯ ಅಣ್ಣ, ತಂಗಿ ಸೆಂಟಿಮೆಂಟ್ ಹೊಂದಿರುವ ಈ ಚಿತ್ರಕ್ಕೆ ಹಿರಿಯ ನಿರ್ದೇಶಕ ಎ.ಆರ್.ಬಾಬು ಅವರ ಪುತ್ರ ಶಾನ್ ಆಕ್ಷನ್‌ಕಟ್ ಹೇಳಿದ್ದು, ಇದು ಅವರ ಚೊಚ್ಚಲ ನಿರ್ದೇಶನದ ಸಿನಿಮಾವಾಗಿದೆ. ಅನೀಶ್ ಜೊತೆ ನಾಯಕಿಯಾಗಿ ರೈಡರ್ ಖ್ಯಾತಿಯ ಸಂಪದ ಹುಲಿವಾನ ನಟಿಸಿದ್ದು, ಶ್ರುತಿ ಪಾಟೀಲ್, ಅಚ್ಯುತ್‌ಕುಮಾರ್, ಸಂಪತ್, ಉಗ್ರಂಮಂಜು, ಹರಿಣಿ ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಕೌಶಿಕ್‌ಹರ್ಷ ಅವರ ಸಂಗೀತ ಸಂಯೋಜನೆ, ವೀನಸ್ ನಾಗರಾಜ್‌ಮೂರ್ತಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.



ಸಿನಿಪದಬಂಧ-012

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಅಂಬರೀಶ್, ಶಿವಣ್ಣ, ಭಾನುಪ್ರಿಯ ಅಭಿನಯದ ಚಿತ್ರ (5)
4. ಓಂ ಸಾಯಿಪ್ರಕಾಶ್ ನಿರ್ದೇಶನದಲ್ಲಿ ಸುದೀಪ್, ನಿಖಿತಾ ಅಭಿನಯದ ಚಿತ್ರ (4)
7. ಉಪೇಂದ್ರ, ನತನ್ಯ ಸಿಂಗ್ ನಟನೆಯ ಚಿತ್ರ (3)
8. ಅನಂತನಾಗ್, ಭಾರತಿ ನಟನೆಯ ಕವಿತಾ ಲಂಕೇಶ್ ನಿರ್ದೇಶನದ ಚಿತ್ರ (7)
13. 1970ರಲ್ಲಿ ತೆರೆಕಂಡ ಶ್ರೀಧರ್ ಮಾಲಾಶ್ರೀ ಅಭಿನಯದ ಚಿತ್ರ (7)
14. ಬ್ರಹ್ಮಗಂಟು ಚಿತ್ರದ ನಾಯಕಿ ಇಲ್ಲಿ ಹ್ರಸ್ವವಾಗಿದ್ದಾಳೆ. (3)
18. ಪ್ರಜ್ವಲ್ ದೇವರಾಜ್ ಹಾಗೂ ಪನ್ನಗಭರಣ ನಟನೆಯ ಚಿತ್ರ (4)
19. ವಿಷ್ಣುವರ್ಧನ್, ಮಂಜುಳಾಶರ್ಮ(ಇಳವರಸಿ) ಚಿತ್ರ (5)

ಮೇಲಿನಿಂದ ಕೆಳಕ್ಕೆ

1. 1986ರಲ್ಲಿ ತೆರೆಕಂಡ ರಾಮಕೃಷ್ಣ, ಗೀತಾ ಅಭಿನಯದ ಚಿತ್ರ (3)
2. ಶಂಕರನಾಗ್ ಗೀತಾ ಅಭಿನಯದ ಚಿತ್ರ ನಿಗೂಢ – – – (3)
3. ನಿರ್ದೇಶಕ ಫಣಿ ರಾಮಚಂದ್ರರ ಎಲ್ಲಾ ಸಿನಿಮಾಗಳಲ್ಲಿ ಬರುವ ದೇವರು (3)
4. ಈ ಭೂಮಿ ಬಣ್ಣದ ಬುಗುರಿ ... ಹಾಡನ್ನು ಒಳಗೊಂಡ ಸಿನಿಮಾ (5)
5. 2009ರಲ್ಲಿ ಬಿಡುಗಡೆಯಾದ ಬಾಲಾಜಿ, ಕನಿಕಾ, ನಿಖಿತಾ ಅಭಿನಯದ ಚಿತ್ರ (5)
6. ದರ್ಶನ್, ಪ್ರಿಯಾಮಣಿ, ರಚಿತಾ ರಾಮ್ ಅಭಿನಯದ ಚಿತ್ರ (4)
9. ಗುರುಪ್ರಸಾದ್ ನಿರ್ದೇಶನದ ಜಗ್ಗೇಶ್ ರವರ ನೂರನೇ ಚಿತ್ರ (2)
10. ಚೇತನ್, ನಿತ್ಯಾ ಮೆನನ್ ಅಭಿನಯದ ಚಿತ್ರ ಇಲ್ಲಿ ಹ್ರಸ್ವವಾಗಿದೆ (2)
11. ಚಂದ್ರಮುಖಿ – – – – (4)
12. 1990ರಲ್ಲಿ ತೆರೆಕಂಡ ಪ್ರೀತಿಯ ಅಲೆ ಎಂಬರ್ಥದ ಚಿತ್ರ (5)
13. 1992ರಲ್ಲಿ ತೆರೆಕಂಡ ದೇವರಾಜ್, ವಿನಯಾ ಪ್ರಸಾದ್ ಅಭಿನಯದ ಚಿತ್ರ (5)
15. 1980ರಲ್ಲಿ ತೆರೆಕಂಡ ಶ್ರೀನಾಥ್, ಮಂಜುಳಾ ಅಭಿನಯದ ಚಿತ್ರ (3)
16. 2004ರಲ್ಲಿ ತೆರೆ ಕಂಡ ದರ್ಶನ್ ಚಿತ್ರ (3)
17. ದರ್ಶನ್, ಜಗ್ಗೇಶ್ ಅಭಿನಯದ ಚಿತ್ರ (3)

ದೀರ್ಘ ಬಾಳಿಕೆಯ, ಎಲ್ಲಾ ವಿಧದ ವಿಶ್ವಾಸಾರ್ಹ ಬ್ಯಾಗ್‌ಗಳಿಗೆ ಸಂಪರ್ಕಿಸಿ



ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ಸಿನಿ ಪದಬಂಧ 011ರ ಸರಿ ಉತ್ತರ

ಬಂ	ಗಾ	ರ	ದ	ಪಂ	ಜ	ರ		ರ	ಸಿ	ಕ
ಧ			ಶಾ			ಹ		ಜ		ವಿ
ಮು		ಪ	ವ	ರ್		ಸ್ಯ		ನಿ		ರ
ಕ್ತ			ತಾ		ಭ	ರಾ	ಟೆ			ತ್ನ
		ಸೂ	ರ	ಪ್ಪ		ತ್ರಿ				
				ರ		ಶ	ಬ	ರಿ		
ಹು			ದು	ಬಾ	ರಿ		ಭ್ರು			ಅ
ಡು		ದೇ		ಕುಂ		ಸ	ವಾ	ಲ್		ಟ್ಟ
ಗಾ		ವ		ಕ್ತ			ಹ			ಹಾ
ಟ	ಗ	ರು		ಭ	ಕ್ತ	ಕ	ನ	ಕ	ದಾ	ಸ

ವಿಜೇತರು: ಪಿ.ಶಿವಮೂರ್ತಿ
ನಂ.13/1, ಐಶ್ವರ್ಯ ನಿಲಯ, ಎನ್. ಬ್ಲಾಕ್,
ಕುಂಬಾರಕೊಪ್ಪಲು, ಮೈಸೂರು-16

ದಶಕದ ನಂತರ ಮತ್ತೊಂದು ಮಠ !



ಮಠ, ಗುರುಪ್ರಸಾದ್ ನಿರ್ದೇಶನದ ಸೂಪರ್‌ಹಿಟ್ ಚಿತ್ರ. ನವರಸನಾಯಕ ಜಗ್ಗೇಶ್ ಹಾಗೂ ಗುರುಪ್ರಸಾದ್ ಇವರಿಬ್ಬರ ಜುಗಲ್‌ಬಂದಿಯಲ್ಲಿ ಮೂಡಿಬಂದಿದ್ದ ಆ ಚಿತ್ರ ತನ್ನ ವಿಶಿಷ್ಠ ಕಂಟೆಂಟ್, ಪಂಚಿಂಗ್ ಡೈಲಾಗ್‌ಗಳ ಮೂಲಕವೇ ಪ್ರೇಕ್ಷಕರನ್ನು ಸೆಳೆದಿತ್ತು. ದಶಕದ ನಂತರ ಇದೇ ಹೆಸರಿನಲ್ಲಿ ಮತ್ತೊಂದು ಸಿನಿಮಾ ಬರುತ್ತಿದೆ, ಹಾಗಂತ ಈ ಸಿನಿಮಾಗೂ ಆ ಸಿನಿಮಾಗೂ ಯಾವುದೇ ಸಂಬಂಧವಿರಲ್ಲ. ಇದೇ ಬೇರೆ, ಅದೇ ಬೇರೆ.

ರವೀಂದ್ರ ವೆಂಶಿ ಅವರ ನಿರ್ದೇಶನದ ಫಿಲಾಸಫಿಕಲ್, ಕಾಮಿಡಿ ಹಾಗೂ ಸತ್ಯ ಘಟನೆಯಾಧಾರಿತ ಕಥೆ ಇದಾಗಿದ್ದು, ಈ ಸಿನಿಮಾದಲ್ಲಿ ದೊಡ್ಡ ತಾರಾಬಳಗವೇ ಇದೆ. ಬರೋಬ್ಬರಿ 82 ಜನ ಕಲಾವಿದರು ನಟಿಸಿರುವ ಈ ಚಿತ್ರದಲ್ಲಿ ಹಿಂದಿನ ಮಠ ಚಿತ್ರದ ನಿರ್ದೇಶಕ ಗುರುಪ್ರಸಾದ್ ಕೂಡ ನಟಿಸಿದ್ದಾರೆ. ತಬಲನಾಣಿ, ಮಂಡ್ಯ ರಮೇಶ್, ಬಿರಾದಾರ್ ಸೇರಿದಂತೆ ಹಾಸ್ಯ ಕಲಾವಿದರ ದಂಡೇ ಈ ಚಿತ್ರದಲ್ಲಿದೆ.

ಮೂರು ವರ್ಷಗಳವರೆಗೆ ರಾಜ್ಯದ 25ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಸುತ್ತಿ, ಸುಮಾರು ಮುನ್ನೂರು ಮಠಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆಯಂತೆ. ಈ ಕುರಿತಂತೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡ ಮಾಹಿತಿ ಹಂಚಿಕೊಂಡಿತು. ಈ ಸಂದರ್ಭದಲ್ಲಿ ಸಾಧುಕೋಕಿಲಾ ಮಾತನಾಡಿ, ಈ ಮಠದಲ್ಲಿ ಆ ಹೆಸರು ಮಾತ್ರ ತೆಗೆದುಕೊಂಡಿದ್ದು, ಕಥಾವಸ್ತು ಬೇರೆನೇ ಇದೆ. ನಾನು ಈ ಚಿತ್ರದಲ್ಲಿ ಮೇಜರ್ ರೋಲ್ ಮಾಡಿದ್ದು, ನನ್ನ ಪಾತ್ರ ಕಾಮಿಡಿಯಲ್ಲ ಇದು ನಿಜ ಜೀವನದ ಕಥೆ. ಒಂದೊಂದು ಪಾತ್ರವೂ ಕಥೆಯನ್ನು ಹೇಳುತ್ತದೆ ಎಂದರು.

ನಂತರ ಗುರುಪ್ರಸಾದ್ ಮಾತನಾಡಿ, ಮನೆ ಕಟ್ಟುವುದು ಸುಲಭ. ಮಠ ಕಟ್ಟುವುದು ಕಷ್ಟ, 290 ದಿನಗಳ ಪಯಣ ಮಾಡಿ ಮಠಗಳಿಗೆ ಭೇಟಿ ಕೊಟ್ಟು ಕಥೆ ಮಾಡಿ ಸಿನಿಮಾ ಮಾಡೋದು ಕಷ್ಟದ ಕೆಲಸವೇ. ಅಂಥಾ ಸಾಹಸವನ್ನು ಈ ನಿರ್ದೇಶಕರು ಮಾಡಿದ್ದಾರೆ ಎಂದು ನಿರ್ದೇಶಕರ ಸಾಹಸವನ್ನು ಮೆಚ್ಚಿಕೊಂಡರು.

ನಂತರ ನಿರ್ದೇಶಕ ರವೀಂದ್ರ ವೆಂಶಿ ಮಾತನಾಡುತ್ತ, ನಮ್ಮ ಕಥೆಗೆ ಹೊಂದಿಕೆಯಾಗುತ್ತದೆ ಎಂಬ ಕಾರಣಕ್ಕೆ ಈ ಶೀರ್ಷಿಕೆಯನ್ನಿಟ್ಟಿದ್ದೇವೆ. ಗುರುಪ್ರಸಾದ್ ಅವರಿಲ್ಲದೇ ಮಠ ಅಪೂರ್ಣ. ಹೀಗಾಗಿ ಅವರನ್ನು ಪಾತ್ರಮಾಡಲು ಕೇಳಿದೆವು. ಅವರೂ ಅಭಿನಯಿಸಲು ಒಪ್ಪಿದರು. ಈಗಾಗಲೇ ಸಿನಿಮಾ ಬಿಡುಗಡೆಯ ಹಂತದಲ್ಲಿದೆ ಎಂದು ತಿಳಿಸಿದರು. ಜೀವನ್‌ಗೌಡ ಅವರ ಛಾಯಾಗ್ರಹಣ, ವಿ.ಮನೋಹರ್ ಅವರ ಸಂಗೀತ, ಯೋಗರಾಜ್ ಭಟ್, ವಿ.ನಾಗೇಂದ್ರ ಪ್ರಸಾದ್, ಗೌಸ್‌ಪೀರ್ ಅವರ ಸಾಹಿತ್ಯ ಚಿತ್ರಕ್ಕಿದೆ

ಹರಿಕಥೆ ಅಲ್ಲ, ಗಾಂಧಿನಗರದ ನೈಜಕಥೆ..

ನಿರ್ದೇಶಕನಾಗಬೇಕೆಂದು ಗಾಂಧಿನಗರಕ್ಕೆ ಬರುವ ಯುವಕನೊಬ್ಬ ಆ ಹಂತದಲ್ಲಿ ಏನೇನೆಲ್ಲ ಅಡೆತಡೆ, ಅವಮಾನಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಹಾಸ್ಯಮಿಶ್ರಿತ ಕಥೆಯೊಂದಿಗೆ ಹೇಳಿರುವ ಚಿತ್ರವೇ ಹರಿಕಥೆ ಅಲ್ಲ ಗಿರಿಕಥೆ. ಇದೇ ತಿಂಗಳ 23ರಂದು ರಾಜ್ಯಾದ್ಯಂತ 150ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆ ಯಾಗುತ್ತಿರುವ ಈ ಚಿತ್ರಕ್ಕೆ ಕರಣ್ ಅನಂತ್ ಹಾಗೂ ಅನಿರುದ್ಧ ಮಹೇಶ್ ನಿರ್ದೇಶನ ಮಾಡಿದ್ದಾರೆ. ರಿಷಭ್‌ಶೆಟ್ಟಿ, ರಚನಾ ಇಂದರ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರವನ್ನು ಸಂದೇಶ್ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಎನ್.ಸಂದೇಶ್ ನಿರ್ಮಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ನಾಯಕ ರಿಷಭ್ ಶೆಟ್ಟಿ ಮಾತನಾಡುತ ನಿರ್ದೇಶಕನಾಗುವ ಆಸೆ ಹೊತ್ತ ಮಧ್ಯಮ ವರ್ಗದ ಯುವಕನೊಬ್ಬನ ಸುತ್ತ ನಡೆಯುವ ಈ ಕಥೆಯಲ್ಲಿ ಗಿರಿಕೃಷ್ಣ ಎಂಬ ಪಾತ್ರವನ್ನು ನಿಭಾಯಿಸಿದ್ದೇನೆ. ಈ ಚಿತ್ರದ ಬಹುತೇಕ ಚಿತ್ರೀಕರಣವನ್ನು ಮೈಸೂರಿನಲ್ಲೇ ನಡೆಸಿ ದ್ದೇವೆ. 2004ರಲ್ಲಿ ನಾನು ಇಂಡಸ್ಟ್ರಿಗೆ ಬಂದು ಎಎಂಆರ್ ರಮೇಶ್ ಅವರ ಜೊತೆ ಕೆಲಸ ಮಾಡಿದೆ. ಆನಂತರ ಯಾವುದೇ ಸಿನಿಮಾ ಮಾಡಲು ಆಗಲಿಲ್ಲ. ಆ ಸಮಯದಲ್ಲಿ ಅನುಭವಿಸಿದ ಅವಮಾನಗಳು, ಯಾತನೆಗಳನ್ನು ಈ ಚಿತ್ರದಲ್ಲಿ ತೋರಿಸಿ ದ್ದೇವೆ. ಸಿನಿಮಾ ಮಾಡಲು ಹೊರಟಿರುವ ಅನೇಕರು ನಾಯಕನ ಪಾತ್ರದಲ್ಲಿ ತಮ್ಮನ್ನು ತಾವು ಕಂಡುಕೊಳ್ಳುತ್ತಾರೆ. ಎರಡು ಗಂಟೆಗಳ ಕಾಲ ಸಂಪೂರ್ಣ ಮನೋರಂಜನೆ ನೀಡುವ ಸಿನಿಮಾವಿದು ಎಂದರು.



ಚಿತ್ರದ ನಾಯಕಿಯಾದ ರಚನಾ ಇಂದರ್ ಮಾತನಾಡಿ ನಾನು ಗಿರಿಜಾ ಎಂಬ ಪಾತ್ರ ಮಾಡಿದ್ದೇನೆ. ಸಿನಿಮಾ ನಟಿಯಾಗಬೇಕೆಂಬ ಆಸೆಹೊತ್ತ ಹುಡುಗಿ ಯಾದ ನನಗೆ ತಾಯಿ ಇರಲ್ಲ ಎಂದು ತಮ್ಮ ಪಾತ್ರ ಪರಿಚಯ ಮಾಡಿಕೊಟ್ಟರು. ಮತ್ತೊಬ್ಬ ನಟಿ ತಪಸ್ವಿನಿ ಪೂಣಚ್ಚ ಮಂತ್ರಿಯ ಮಗಳಾಗಿ ಕಾಣಿಸಿಕೊಂಡಿದ್ದಾರೆ. ನಿರ್ಮಾಪಕ ಸಂದೇಶ್ ಮಾತನಾಡುತ್ತ ನಾನು ಚಿತ್ರದ ಎಲ್ಲಾ ಜವಾಬ್ದಾರಿಯನ್ನು ರಿಷಭ್‌ಶೆಟ್ಟಿ ಅವರಿಗೇ ನೀಡಿದ್ದೇನೆ. ಅವರ ಸಹಯೋಗ ದೊಂದಿಗೆ ಈ ಚಿತ್ರ ನಿರ್ಮಾಣವಾಗಿದೆ. ಹೆಸರಾಂತ ವಿತರಕರಾದ ಜಯಣ್ಣ ಅವರು ನಮ್ಮ ಚಿತ್ರವನ್ನು ಹಂಚಿಕೆ ಮಾಡುತ್ತಿದ್ದಾರೆ ಎಂದು ಹೇಳಿದರು.

ಒಂದನೇ ಪುಟದಿಂದ

ಮೂರು ವರ್ಷದ ಪದವಿ ಕೋರ್ಸ್

ಆಯ್ಕೆ ಮಾಡಿಕೊಳ್ಳಲು ಅವಕಾಶ ದೊರೆಯುತ್ತದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 4 ವರ್ಷದ ಅವಧಿಗೆ ಸೇನೆಗೆ ಸೇರುವ ಅಗ್ನಿಪಥದ ಅಗ್ನಿವೀರರಿಗೆ ಉದ್ಯೋಗ, ಸಂಬಳದ ಜತೆಗೆ ಮೂರು ವರ್ಷಗಳ ಕೌಶಲ ಆಧರಿತ ವಿಶೇಷ ಪದವಿ ಕೋರ್ಸ್ ಆರಂಭಿಸಲಿದೆ ಶಿಕ್ಷಣ ಸಚಿವಾಲಯ. ಹುದ್ದೆಯ ಕರ್ತವ್ಯ ನಿರ್ವಹಣೆ ಜತೆಗೆಯೇ ಅಗ್ನಿವೀರರಿಗೆ ಡಿಗ್ರಿ ಪದವಿ ಸಿಗುವ ಸೌಲಭ್ಯ ಇದಾಗಿದೆ. ಈ ಮೂಲಕ 12ನೇ ತರಗತಿ ಆಧಾರದಲ್ಲಿ ಅಗ್ನಿವೀರ ಹುದ್ದೆಗೆ ಸೇರುವ ಅಭ್ಯರ್ಥಿಗಳು ಕೌಶಲ ಆಧರಿತ ಪದವಿ ಶಿಕ್ಷಣವನ್ನು ಸೇನಾ ಕರ್ತವ್ಯದ ಜತೆಗೆಯೇ ಪಡೆಯಬಹುದಾಗಿದೆ.

ಇದರಿಂದ ಡಿಗ್ರಿ ಪಡೆಯಲು ಮತ್ತೆ ಮೂರು ವರ್ಷ ಸಮಯ ನೀಡುವ ಅಗತ್ಯವು ಇಲ್ಲ. ಅಗ್ನಿವೀರರು ಪಡೆಯುವ ಸೇವಾ ತರಬೇತಿಯನ್ನು ಪದವಿ ಕೋರ್ಸ್‌ನಲ್ಲಿ ಕ್ರೆಡಿಟ್‌ಗಳಾಗಿ ಗುರುತಿಸಲಾಗುತ್ತದೆ. ಪದವಿ ಕೋರ್ಸ್‌ಗೆ ಅಗತ್ಯವಿರುವ ಶೇಕಡ 50ರಷ್ಟು 'ಕ್ರೆಡಿಟ್' ಅನ್ನು ಅಗ್ನಿವೀರರು ಕೌಶಲ ತರಬೇತಿ ಮೂಲಕ ಪಡೆಯುತ್ತಾರೆ. ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯ (IGNOU) ಈ ಕ್ರೆಡಿಟ್ ಆಧಾರಿತ ಪದವಿ ಕೋರ್ಸ್ ಆರಂಭಿಸಲಿದೆ. ಇದಕ್ಕಾಗಿ ಭೂಸೇನೆ, ವಾಯುಪಡೆ, ನೌಕಾಪಡೆಗಳು ಇಗ್ನೊದ ಜತೆಗೆ ಒಡಂಬಡಿಕೆ ಮಾಡಿಕೊಳ್ಳಲಿವೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.


ಶೇಕಡ 50ರಷ್ಟು ಕ್ರೆಡಿಟ್

ಅಗ್ನಿಪಥದ ಅಗ್ನಿವೀರರಿಗೆ ಶೇ.50ರಷ್ಟು ಕ್ರೆಡಿಟ್‌ಗಳು ಸಾರ್ವಜನಿಕ ಆಡಳಿತ, ಸಮಾಜಶಾಸ್ತ್ರ, ಗಣಿತ, ಶಿಕ್ಷಣ, ವಾಣಿಜ್ಯ, ಪ್ರವಾಸೋದ್ಯಮ, ಭಾಷೆಗಳು, ಅರ್ಥ ಶಾಸ್ತ್ರ, ಇತಿಹಾಸ, ರಾಜಕೀಯ, ವಿಜ್ಞಾನ, ವೃತ್ತಿಪರ ಅಧ್ಯಯನ, ಕೃಷಿ ಮತ್ತು ಜ್ಯೋತಿಷ್ಯ, ಪರಿಸರ ಅಧ್ಯಯನ ಹಾಗೂ ಇಂಗ್ಲಿಷ್ ಸಂವಹನ ಕೌಶಲದಿಂದ ದೊರೆಯ ಲಿದೆ. ಈ ಕೋರ್ಸ್ ಅನ್ನು ನೂತನ ರಾಷ್ಟ್ರೀಯ ಶಿಕ್ಷಣ ನೀತಿ 2020ಕ್ಕೆ ಅನುಗುಣವಾಗಿ ರೂಪಿಸಲಾಗಿದೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗವು ರಾಷ್ಟ್ರೀಯ ಕ್ರೆಡಿಟ್ ಚೌಕಟ್ಟು/ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟಿನ (ಎನ್‌ಎಸ್‌ಕ್ಯೂಎಫ್) ಮಾನದಂಡಗಳೊಂದಿಗೆ ಸಂಯೋಜಿಸಲಾಗಿದೆ. ಎನ್‌ಇಪಿ 2020 ಪ್ರಕಾರ ಈ ಪದವಿ ಕೋರ್ಸ್, ವಿದ್ಯಾರ್ಥಿಗಳಿಗೆ ಬಹು ಆಯ್ಕೆಯನ್ನು ನೀಡುತ್ತದೆ. ಅಂದರೆ ಒಂದು ವರ್ಷವನ್ನು ಯಶಸ್ವಿಯಾಗಿ ಓದಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, 1 ಮತ್ತು 2 ವರ್ಷದ ಕೋರ್ಸ್ ಪೂರ್ಣಗೊಳಿಸಿದವರಿಗೆ ಡಿಪ್ಲೊಮ ಪ್ರಮಾಣ ಪತ್ರ, 3 ವರ್ಷದ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪದವಿ ನೀಡಲಾಗುತ್ತದೆ.

ಕಾಂಗ್ರೆಸ್ ಭಾರೀ ಪ್ರತಿಭಟನೆ

ಎಂದು ದೂರಿದರು. ನೆಹರೂ ಕುಟುಂಬ ದೇಶಕ್ಕಾಗಿ ಅಲಹಾಬಾದ್‌ನಲ್ಲಿ 20 ಸಾವಿರ ಕೋಟಿ ರೂ. ಮೊತ್ತದ ಆಸ್ತಿ ದಾನ ಮಾಡಿದೆ. ಯಂಗ್ ಇಂಡಿಯಾ ಹಾಗೂ ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಸಂಸ್ಥೆ ಅವರ ಸ್ವಂತ ಆಸ್ತಿ ಎಂದು ಘೋಷಿಸಿಲ್ಲ. ಇದು ಕಾಂಗ್ರೆಸ್ ಕಾರ್ಯಕರ್ತರ ಆಸ್ತಿ. ಪಕ್ಷದ ಆಚಾರ, ವಿಚಾರವನ್ನು ಪ್ರಚಾರ ಮಾಡಲು ಈ ಪತ್ರಿಕೆ ನಡೆಸುತ್ತಿದ್ದಾರೆ. ಅವರು ಈ ಸಂಸ್ಥೆಯ ಜವಾಬ್ದಾರಿ ಹೊತ್ತಿದ್ದಾರೆ ಅಷ್ಟೇ. ನೆಹರೂ ಅವರು ಜೈಲಿಗೆ ಹೋಗಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ. ಇಂದಿರಾ ಗಾಂಧಿ, ರಾಜೀವ್ ಗಾಂಧಿ ಅವರು ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದರು. ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ದೇಶಕ್ಕಾಗಿ ಅಧಿಕಾರ ತ್ಯಾಗ ಮಾಡಿದ್ದಾರೆ. ಇಂತಹವರಿಗೆ ಈ ರೀತಿ ಕಿರುಕುಳ ನೀಡುವುದನ್ನು ಜನ ಸಹಿಸುವುದಿಲ್ಲ. ಪಕ್ಷದ ಕಚೇರಿ ನಮ್ಮ ದೇವಾಲಯ. ಇದಕ್ಕೆ ಪ್ರವೇಶ ನೀಡಲು ಅವಕಾಶ ನೀಡದ ಬಿಜೆಪಿಯ ನೀಚ ಸರ್ಕಾರದ ನಡೆ ಖಂಡಿಸಿ ರಾಜಭವನ ಮುತ್ತಿಗೆ ಹಾಕುತ್ತಿದ್ದೇವೆ. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಂವಿಧಾನ ಉಳಿಸಲು ಈ ಹೋರಾಟ. ಕೇಂದ್ರ ತನಿಖಾ ಸಂಸ್ಥೆಗಳು ಬಿಜೆಪಿಯ ಕೈಗೊಂಬೆಯಾಗಬಾರದು ಎಂದು ಆಗ್ರಹಿಸಿ ಈ ಹೋರಾಟ ಮಾಡುತ್ತಿದ್ದೇವೆ. ನಾಳೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪಕ್ಷದ ಪದಾಧಿಕಾರಿಗಳು ಪ್ರತಿಭಟನೆ ಮಾಡಬೇಕು. ಅಲ್ಲಿರುವ ಕೇಂದ್ರ ಸರ್ಕಾರದ ಕಚೇರಿ ಮುಂದೆ ಪ್ರತಿಭಟನೆ ಮಾಡಬೇಕು. ದ್ವೇಷದ ರಾಜಕಾರಣ ಮಾಡುತ್ತಿದ್ದು, ನಿಮ್ಮ ಈ ಬೆದರಿಕೆಗಳಿಗೆ, ಷಡ್ಯಂತ್ರಗಳಿಗೆ ಕಾಂಗ್ರೆಸ್ ಪಕ್ಷ ಹೆದರುವುದಿಲ್ಲ. ನ್ಯಾಷನಲ್ ಹೆರಾಲ್ಡ್ ಪತ್ರಿಕೆ, ಯಂಗ್ ಇಂಡಿಯಾ ಎಲ್ಲವೂ ಕಾಂಗ್ರೆಸ್ ಪಕ್ಷದ ಆಸ್ತಿ. ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಸೇರಿ ದೇಣಿಗೆ ನೀಡಿದ್ದಾರೆ. ಅದನ್ನು ಕೇಳಲು ಅವರು ಯಾರು? ನೀವು ತೊಂದರೆ ನೀಡುತ್ತೀರಾ ನೀಡಿ, ಜೈಲಿಗೆ ಹಾಕುತ್ತೀರಾ ಹಾಕಿ ಎಂದು ಸವಾಲೆಸೆದರು. ಕೋವಿಡ್ ನಿಯಮ ಉಲ್ಲಂಘಿಸಿದ ಬಿಜೆಪಿ ನಾಯಕ ಹಾಗೂ ಆರೋಗ್ಯ ಸಚಿವರ ಮೇಲೆ ಮೊದಲು ಪ್ರಕರಣ ದಾಖಲಿಸಲಿ. ಕೇವಲ ನಮ್ಮ ವಿರುದ್ಧ ಕೇಸು ದಾಖಲಿಸುತ್ತಿದ್ದಾರೆ. ರಾಜ್ಯ ಹಾಗೂ ಕೇಂದ್ರ ಮಂತ್ರಿಗಳು ನಿಯಮ ಉಲ್ಲಂಘಿಸಿದ್ದಕ್ಕೆ ಯಾಕೆ ಕೇಸ್ ಹಾಕಿಲ್ಲ? ವಿಧಾನಸೌಧದಲ್ಲಿ ಪರಿಷತ್ ಸದಸ್ಯರ ಪ್ರಮಾಣವಚನ ಕಾರ್ಯಕ್ರಮ ದಲ್ಲಿ ನಿಯಮ ಉಲ್ಲಂಘನೆಯಾಗಿದ್ದಕ್ಕೆ ಯಾಕೆ ಪ್ರಕರಣ ದಾಖಲಿಸಿಲ್ಲ? ಬಿಜೆಪಿಯ ಅನೇಕ ಪ್ರಕರಣಗಳಲ್ಲಿ ಕೇಸ್ ದಾಖಲಿಸಿಲ್ಲ. ನಮಗೆ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟ ಮಾಡುವ ಹಕ್ಕು ಇದೆ. ಈ ದೇಶಕ್ಕೆ ಸ್ವಾತಂತ್ರ ಬಂದಿದ್ದೇ ಹೋರಾಟದ ಮೂಲಕ ಎಂದರು.

ಪರ್ವತಾಸನ ಭಂಗಿಯಲ್ಲಿ ನಮೋ ಯೋಗ!



ಮೋಹನ್ ಕಾಯಕ

ಮೈಸೂರು, ಜೂ.16– ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ನಮೋ ಯೋಗ... ಪರ್ವತಾಸನ ಭಂಗಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರಿಂದ ಯೋಗಾಸನ..!

ಜೂ.21ರ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಕೆಲ ದಿನಗಳಷ್ಟೇ ಬಾಕಿ ಇದ್ದರೂ ಪ್ರಧಾನಿಗಳು ಈಗಾಗಲೇ ಮೈಸೂರಿಗೆ ಬಂದು ಯೋಗಾಸನದಲ್ಲಿ ತೊಡಗಿದ್ದಾರೆ ಎಂಬುದು ಎಲ್ಲರ ಕಾತುರ ಕೆರಳಿಸುವಂತೆ ಮಾಡಿದೆ. ಹೌದು! ಪ್ರಧಾನಿ ನರೇಂದ್ರ ಮೋದಿಯವರು ಮರಳು ಶಿಲ್ಪ ಕಲೆಯ ಮೂಲಕ ರೂಪುಗೊಂಡಿದ್ದು, ಪರ್ವತಾಸನದ ಮೂಲಕ ಎಲ್ಲರಿಗೂ ಅಚ್ಚರಿ ಮೂಡಿಸಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದ ರಸ್ತೆಯಲ್ಲಿರುವ ಸ್ಯಾಂಡ್ ಮ್ಯೂಸಿಯಂನಲ್ಲಿ ಖ್ಯಾತ ಮರಳು ಶಿಲ್ಪಕಲಾವಿದೆ ಎಂ.ಎನ್.ಗೌರಿ ತಮ್ಮ ಕೈಚಳಕದಿಂದ ಮೂಡಿರುವ ಪ್ರಧಾನಿ ಮೋದಿಯವರ ಪರ್ವತಾಸನ ಭಂಗಿ ಎಲ್ಲರ ಗಮನ ಸೆಳೆದಿದ್ದು, ಮೋದಿಯವರ ಸಮ್ಮುಖದಲ್ಲಿ ವಿಶ್ವಯೋಗ ದಿನವನ್ನು ಎದುರು ನೋಡುವಂತೆ ಮಾಡಿದೆ.

5 ಅಡಿ ಎತ್ತರ, 15 ಅಡಿ ಉದ್ದ ಹಾಗೂ 3 ಅಡಿ ಹಗಲವಿರುವ ಮೋದಿಯವರ ಪರ್ವತಾಸನ ಭಂಗಿ, ಅತ್ಯಂತ ಆಕರ್ಷಣೀಯವಾಗಿದೆ. ಬಿಳಿ ವಸ್ತ್ರ, ಕೇಸರಿ, ಬಿಳಿ ಮತ್ತು ಹಸಿರು ಬಣ್ಣದ ಶಲ್ಯ ಹಾಕಿಕೊಂಡು ಯೋಗ ಮಾಡುತ್ತಿರುವಂತಿರುವ ಮೋದಿಯವರ ಪ್ರತಿರೂಪ ಅಂತರರಾಷ್ಟ್ರಿಯ ಮಟ್ಟದಲ್ಲಿ ಯೋಗಕ್ಕಿರುವ ಮಹತ್ವವನ್ನು ಹಾಗೂ ಆರೋಗ್ಯದ ದೃಷ್ಟಿಯಿಂದ ಯೋಗ ಅಗತ್ಯತೆಯನ್ನು ಮನದಟ್ಟು ಮಾಡಿಕೊಡಲಿದೆ.

ಯೋಗ ಸಹಾಯಕ: ಕೊರೊನಾ ಸೋಂಕಿ ನಿಂದ ಗುಣಮುಖರಾಗಲು ಯೋಗ ಸಹಕಾರಿಯಾಗಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಮನೆಯಲ್ಲಿಯೇ ಉಳಿದಿದ್ದವರು ಪ್ರತಿನಿತ್ಯ ಯೋಗಾಸನ ಮಾಡುವ ಮೂಲಕ ಆರೋಗ್ಯ ವೃದ್ಧಿಸಿಕೊಂಡಿದ್ದಾರೆ. ದೈಹಿಕ ಹಾಗೂ ಮಾನಸಿಕ ಆರೋಗ್ಯ ದೃಷ್ಟಿಯಿಂದ ಅತ್ಯಂತ ಉಪಯುಕ್ತ ಯೋಗವನ್ನು ವಿಶ್ವಕ್ಕೆ ಪರಿಚಯಿಸುವ ಪ್ರಯತ್ನ ಮಾಡಿದ ಮೋದಿಯವರು ಮೈಸೂರಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ಪ್ರತಿಮೆ ರಚಿಸಿದ್ದೇನೆ ಎಂದು 'ಮರಳು ಶಿಲ್ಪ ಕಲಾವಿದೆ ಎಂ.ಎನ್.ಗೌರಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಉಚಿತ ಪ್ರವೇಶ: ಜೂ.21ರ ವಿಶ್ವಯೋಗ ದಿನದಂದು ಸ್ಯಾಂಡ್ ಮ್ಯೂಸಿಯಂಗೆ ಉಚಿತ ಪ್ರವೇಶ ಇರಲಿದೆ. ಮೋದಿಯವರ ಯೋಗಾಸನ ಪ್ರತಿಮೆ ಸೇರಿದಂತೆ ತಾಯಿ ಚಾಮುಂಡೇಶ್ವರಿ, ಗಣೇಶ ಸೇರಿದಂತೆ ಮರಳಿನ ಹಲವು ಪ್ರತಿ ರೂಪಗಳನ್ನು ಪ್ರವಾಸಿಗರು ವೀಕ್ಷಿಸಬಹುದಾಗಿದೆ.

ಅಂತರ ಜಿಲ್ಲಾ ಖದೀಮನ ಬಂಧನ: 7 ಲಕ್ಷ ರೂ. ಮೌಲ್ಯದ ವಸ್ತುಗಳ ವಶ



ಮೈಸೂರು, ಜೂ.16– ಅಂತರ ಜಿಲ್ಲಾ ಖದೀಮನೊಬ್ಬನನ್ನು ಬಂಧಿಸಿರುವ ಮೈಸೂರಿನ ಉದಯಗಿರಿ ಠಾಣೆ ಪೊಲೀಸರು 14 ಬೆಲೆಬಾಳುವ ಮೊಬೈಲ್, 3 ದ್ವಿಚಕ್ರ ವಾಹನ ಸೇರಿದಂತೆ 7 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಗೌಸಿಯಾನಗರ ನಿವಾಸಿ ಮಹಮದ್ ಶೋಹೆಬ್(20) ಬಂಧಿತನಾಗಿದ್ದು, ಈತನಿಂದ 14 ಬೆಲೆಬಾಳುವ ಮೊಬೈಲ್‌ಗಳು, ಟಿವಿಎಸ್ ಅಪಾಚಿ ಆರ್‌ಟಿಎಕ್ಸ್ ಬೈಕ್, ಎರಡು ಬಜಾಜ್ ಪಲ್ಸರ್ ಎನ್‌ಎಸ್–200 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದು, ಈತನ ಬಂಧನದಿಂದಾಗಿ ಉದಯಗಿರಿ, ವಿವಿ ಪುರಂ, ದೇವರಾಜ ಠಾಣೆ, ಮಂಡ್ಯ ಪಶ್ಚಿಮ ಠಾಣೆ, ಬನ್ನೂರು ಹಾಗೂ ಮಳವಳ್ಳಿ ಠಾಣೆಗಳಲ್ಲಿನ ಪ್ರಕರಣಗಳು ಪತ್ತೆಯಾಗಿವೆ. ಅಲ್ಲದೆ ಈ ಹಿಂದೆ ಈತನ ವಿರುದ್ಧ ಉದಯಗಿರಿ ಠಾಣೆಯಲ್ಲಿ 4, ವಿಜಯನಗರದಲ್ಲಿ 2, ಕೆ.ಆರ್.ಠಾಣೆಯಲ್ಲಿ 1, ಮೈಸೂರು ಗ್ರಾಮಾಂತರ ಠಾಣೆ 1, ವಿದ್ಯಾರಣ್ಯಪುರಂ ಠಾಣೆ 1, ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಠಾಣೆಯಲ್ಲಿ 2, ಅರಕೆರೆ ಮತ್ತು ಮಂಡ್ಯ ಪಶ್ಚಿಮ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿತ್ತು ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ನಗರ ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಗೀತಾ ಪ್ರಸನ್ನ ಮಾರ್ಗದರ್ಶನದಲ್ಲಿ ದೇವರಾಜ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಉಸ್ತುವಾರಿಯಲ್ಲಿ ಉದಯಗಿರಿ ಠಾಣೆ ಇನ್‌ಸ್ಪೆಕ್ಟರ್ ಪಿ.ಕೆ.ರಾಜು, ಸಬ್‌ಇನ್‌ಸ್ಪೆಕ್ಟರ್‌ಗಳಾದ ಸುನೀಲ್, ನಾಗರಾಜನಾಯಕ್, ಎಎಸ್‌ಐ ಪಾಪಣ್ಣ, ಸಿಬ್ಬಂದಿ ಶಂಕರ್, ಸಿದ್ದಿಕ್ ಅಹಮದ್, ಸೋಮಶೇಖರ್, ಮೋಹನ್‌ಕುಮಾರ್, ಶಿವರಾಜಪ್ಪ, ಸಮೀರ್ ಪಾಟೀಲ್ ಬಿರಾದರ್ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದು, ಈ ತಂಡವನ್ನು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಪ್ರಶಂಸಿಸಿದ್ದಾರೆ.


ನನ್ನ ಗೆಲುವು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಮೆಟ್ಟಿಲು

ನೂತನ ಎಂಎಲ್‌ಸಿ ಮಧು ಜಿ.ಮಾದೇಗೌಡ ಪ್ರತಿಕ್ರಿಯೆ

ಮೈಸೂರು, ಜೂ.16(ಎಂಕೆ)– ಒಂದು ವರ್ಷದ ಪೂರ್ವ ತಯಾರಿ ಹಾಗೂ ಕಾಂಗ್ರೆಸ್ ಪಕ್ಷದ ಎಲ್ಲರ ಸಹಕಾರದಿಂದ ಗೆಲುವು ಸಾಧ್ಯವಾಗಿದ್ದು, ಪಕ್ಷವನ್ನು ಕಟ್ಟುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ ಎಂದು ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯ ವಿಜೇತ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ತಂದೆಯವರಾದ ಜಿ.ಮಾದೇಗೌಡರ ಸೇವೆ ನನ್ನನ್ನು ಗುರ್ತಿಸುವಂತೆ ಮಾಡಿದೆ ಈ ಗೆಲುವು ಮುಂದಿನ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಜಯಕ್ಕೆ ಮೆಟ್ಟಿಲಾಗಿದೆ ಎಂದರು.

ಹಾಸನ ಜೆಡಿಎಸ್ ಭದ್ರಕೋಟೆ ಎಂದೆಲ್ಲಾ ಹೇಳುತ್ತಾರೆ. ಆದರೆ ಹಾಸನದಿಂದಲೂ ನನಗೆ ಸಾಕಷ್ಟು ಮತಗಳು ಬಂದಿವೆ. ಮುಂದಿನ ದಿನಗಳಲ್ಲಿ ಹಾಸನ ಕಾಂಗ್ರೆಸ್‌ನ ಭದ್ರಕೋಟೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ನನ್ನೊಂದಿಗೆ ನನ್ನ ತಂಡ ಚುನಾವಣಾ ಪ್ರಚಾರ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಕೆಲಸ ಮಾಡಿದೆ. ಅದೇ ರೀತಿ ಪಕ್ಷದ ಹಿರಿಯ ನಾಯಕರ ಬೆಂಬಲ ಜಯಕ್ಕೆ ಕಾರಣವಾಗಿದೆ ಎಂದು ಹೇಳಿದರು.



ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ವಿಜೇತರಾದ ಮಧು ಜಿ.ಮಾದೇಗೌಡ ಅವರನ್ನು ಕಾಂಗ್ರೆಸ್ ಪಕ್ಷದ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರು ಅಭಿನಂದಿಸಿದರು.

ಇದಕ್ಕೂ ಮುನ್ನ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಮಾತನಾಡಿ, ಮಧು ಜಿ.ಮಾದೇಗೌಡರನ್ನು ಅಭ್ಯರ್ಥಿ ಎಂದು ಘೋಷಣೆ ಮಾಡಿದಾಗಿನಿಂದ ಅಚ್ಚುಕಟ್ಟಾದ ವ್ಯವಸ್ಥೆಯೊಂದಿಗೆ ಚುನಾವಣಾ ಪ್ರಚಾರ ಮಾಡಿದ್ದಾರೆ. ತಮ್ಮದೆ ಒಂದು ತಂಡ ರಚಿಸಿ ಬಹುತೇಕ ಮತದಾರರನ್ನು ಖುದ್ದು ಭೇಟಿಯಾಗಿ ಮತಯಾಚನೆ ಮಾಡಿದ್ದಾರೆ ಎಂದು ಶ್ಲಾಘಿಸಿದರು.

> ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ನನ್ನ ಗೆಲುವಿಗೆ ಸಹಕಾರ ನೀಡಿದ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು, ಮುಖಂಡರು, ಕಾರ್ಯಕರ್ತರ ಹಾಗೂ ಮುಖ್ಯವಾಗಿ ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ ಮತ್ತು ಮುಖಂಡ ಕೀಲಾರ ಜಯರಾಮು ಮತ್ತು ಅವರ ತಂಡದವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.
> – ಮಧು ಜಿ.ಮಾದೇಗೌಡ,
> ದಕ್ಷಿಣ ಪದವೀಧರ ಕ್ಷೇತ್ರ ವಿಜೇತ ಅಭ್ಯರ್ಥಿ

ಮಾಜಿ ಸಚಿವರಾದ ಚಲುವರಾಯಸ್ವಾಮಿ, ನರೇಂದ್ರ ಸ್ವಾಮಿ, ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಕಳಲೆ ಕೇಶವಮೂರ್ತಿ, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಕಾಂಗ್ರೆಸ್ ಮುಖಂಡರಾದ ಕೆ.ಮರಿಗೌಡ, ಡಿ.ರವಿಶಂಕರ್, ಹರೀಶ್‌ಗೌಡ, ಬಿ.ಎಂ ರಾಮು, ಎನ್.ಶಿವಣ್ಣ, ಭಾಸ್ಕರ್ ಗೌಡ, ಎಡತಲೆ ಮಂಜುನಾಥ್, ಹುಣಸೂರು ಬಸವಣ್ಣ ಮತ್ತಿತರರು ಉಪಸ್ಥಿತರಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಮಧು ಜಿ.ಮಾದೇಗೌಡ ಗೆಲುವು

ಪಾಂಡವಪುರ, ಭಾರತೀನಗರದಲ್ಲಿ 'ಕೈ' ಕಾರ್ಯಕರ್ತರ ವಿಜಯೋತ್ಸವ

ಮಂಡ್ಯ, ಜೂ.16– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರು ಐತಿಹಾಸಿಕ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಜಿಲ್ಲೆಯ ಪಾಂಡವಪುರ ಹಾಗೂ ಭಾರತೀನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಪಾಂಡವಪುರ: ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಮಧು ಜಿ.ಮಾದೇಗೌಡರು ಗೆಲುವು ಸಾಧಿಸುವ ಮೂಲಕ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನೆಲೆ ಗಟ್ಟಿಗೊಳಿಸಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಹೆಚ್.ತ್ಯಾಗರಾಜು ತಿಳಿಸಿದರು.

ಪಟ್ಟಣದ ಐದು ದೀಪ ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರೊಂದಿಗೆ ಪಟಾಕಿ ಸಿಡಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿ ಬಳಿಕ ಮಾತನಾಡಿದ ಅವರು, ಮಂಡ್ಯ ಜಿಲ್ಲೆ ಜೆಡಿಎಸ್ ಭದ್ರಕೋಟೆ. ಇಲ್ಲಿ ಕಾಂಗ್ರೆಸ್‌ಗೆ ನೆಲೆ ಇಲ್ಲ ಎಂದು ಕೆಲವರು ಅಣಕಿಸುತ್ತಿದ್ದರು. ಆದರೆ ವಿಧಾನ ಪರಿಷತ್ತಿನ ಎರಡೂ ಚುನಾವಣೆಗಳಲ್ಲಿ ಕಾಂಗ್ರೆಸ್ ದಿನೇಶ್ ಗೂಳಿಗೌಡ, ಈಗ ಮಧು ಜಿ.ಮಾದೇಗೌಡರು ಗೆಲ್ಲುವ ಮೂಲಕ ಜಿಲ್ಲೆಯಲ್ಲಿ ಕಾಂಗ್ರೆಸ್ ಶಕ್ತಿ ಏನೆಂಬುದನ್ನು ವಿರೋಧಿಗಳಿಗೆ ತೋರಿಸಿದ್ದಾರೆ ಎಂದರು. ಪದವೀಧರ ಮತದಾರರು ಪ್ರಜ್ಞಾವಂತರಾಗಿದ್ದು, ಉತ್ತಮ ಕೆಲಸ ಮಾಡುವ ಕಾಂಗ್ರೆಸ್ ಅಭ್ಯರ್ಥಿಯನ್ನು ಚುನಾಯಿಸಿದ್ದಾರೆ. ಹಿರಿಯ ಮುತ್ಸದ್ದಿ ದಿ.ಜಿ.ಮಾದೇಗೌಡರ ಹೋರಾಟ ಹಾಗೂ ಮಧು ಮಾದೇಗೌಡರ ಕೆಲಸಕ್ಕೆ ಮತದಾರರು ಸ್ಪಂದಿಸಿದ್ದಾರೆ. ಈ ಚುನಾವಣೆ ಫಲಿತಾಂಶ ಮುಂದಿನ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಿದ್ದು, ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಅಧಿಕೃತ ಅಭ್ಯರ್ಥಿ ಹಾಕದ ಕಾರಣ ಕಾರ್ಯಕರ್ತರು ನಿರುತ್ಸಾಹಿಗಳಾಗಿದ್ದರು. ಮುಂದಿನ ಚುನಾವಣೆಯಲ್ಲಿ ಪಕ್ಷದಿಂದ ಅಭ್ಯರ್ಥಿ ಘೋಷಿಸುವಂತೆ ಪಕ್ಷದ ಮುಖಂಡರಲ್ಲಿ ಮನವಿ ಮಾಡಲಾಗಿದೆ ಎಂದರು.





ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಕೃಷ್ಣೇಗೌಡ ಮಾತನಾಡಿದರು. ಕೆಪಿಸಿಸಿ ಕಿಸಾನ್ ಘಟನದ ಪ್ರಧಾನ ಕಾರ್ಯದರ್ಶಿ ಕೆ.ಕುಬೇರ, ತಾಲೂಕು ಅಧ್ಯಕ್ಷ ಸಿ.ಆರ್.ರಮೇಶ್, ಸಿ.ಎಂ.ಮಹೇಶ್, ಯುವ ಘಟಕದ ಅಧ್ಯಕ್ಷ ರಮೇಶ್, ಮದ್ದೂರು ಯುವ ಘಟಕದ ಅಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಕೋ.ಪು.ಗುಣಶೇಖರ್, ದರ್ಶನ್, ಸಿಆರ್‌ಎಸ್ ಗ್ರೂಪ್ ಎಚ್.ಆರ್.ಪ್ರಸಾದ್, ಭರತ್, ಚಂದ್ರಶೇಖರ್, ಪುರಸಭೆ ಸದಸ್ಯ ಉಮಾಶಂಕರ್, ಸತೀಶ್, ರಾಘವೇಂದ್ರ ಇತರರಿದ್ದರು.

ಭಾರತೀನಗರ: ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಗೆಲುವನ್ನು ಸಂಭ್ರಮಿಸಿ ಭಾರತೀನಗರದ ವಿಶ್ವೇಶ್ವರಯ್ಯ ವೃತ್ತದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ಮಧು ಜಿ.ಮಾದೇಗೌಡರಿಗೆ ಜೈಕಾರ ಹಾಕಿದರು.

ಗ್ರಾಪಂ ಮಾಜಿ ಅಧ್ಯಕ್ಷ ರವಿಚಂದ್ರ ಮಾತನಾಡಿ, ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಮಧು ಜಿ.ಮಾದೇಗೌಡರ ಗೆಲುವು ಎಲ್ಲರಿಗೂ ಸಂತಸ ತಂದಿದೆ. ಜೊತೆಗೆ ಕಾಂಗ್ರೆಸ್ ದಾಖಲೆ ಸೃಷ್ಟಿಸಿದೆ. ಇದು ಮುಂದಿನ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ವಕ್ರತುಂಡ ವೆಂಕಟೇಶ್, ಸದಸ್ಯರಾದ ಕೆ.ವಿ.ಶ್ರೀನಿವಾಸ್, ಕಬ್ಬಾಳಯ್ಯ, ಮಾಜಿ ಪ್ರಧಾನ ಎಚ್.ವಿ.ವೆಂಕಟೇಗೌಡ, ಕೃಷ್ಣ, ನಾಗರಾಜ, ಕೆಂಪರಾಜ, ಸ್ವಾಮಿ, ಮನು, ಪವನ ಸೇರಿದಂತೆ ಹಲವರಿದ್ದರು.

ಸಂಘಟಿತ ಹೋರಾಟ ಮಧು ಗೆಲುವಿಗೆ ಸಹಕಾರಿ

ನಾಗಮಂಗಲ, ಜೂ.16– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಮಧು ಜಿ.ಮಾದೇಗೌಡರ ಗೆಲುವಿಗೆ ಕಾಂಗ್ರೆಸ್ ಪಕ್ಷದ ಸಂಘಟಿತ ಹೋರಾಟವೇ ಕಾರಣ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.



ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಕ್ಷಿಣ ಪದವೀಧರರ ಕ್ಷೇತ್ರದಲ್ಲಿ ಇದುವರೆಗೆ ಕಾಂಗ್ರೆಸ್ ಅಭ್ಯರ್ಥಿ ಗೆದ್ದ ಇತಿಹಾಸವಿಲ್ಲ. ಪ್ರಜ್ಞಾವಂತ ಮತದಾರರು ಈ ಬಾರಿ ಕಾಂಗ್ರೆಸ್ ಬೆಂಬಲಿಸಿರುವುದು ಮುಂದಿನ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಿದೆ ಎಂದರು.

ಮಧು ಜಿ.ಮಾದೇಗೌಡರನ್ನು ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂದು ವರ್ಷದ ಹಿಂದೆಯೇ ಬಿಂಬಿಸಿದ್ದು ಅನುಕೂಲವಾಯಿತು. ಮತದಾರರ ನೋಂದಣಿಯಿಂದ ಹಿಡಿದು ಪ್ರಚಾರ ಸಭೆಗಳನ್ನು ಆಯೋಜಿಸಲು ಸಾಕಷ್ಟು ಸಮಯ ಸಿಕ್ಕಿತ್ತು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕ್ಷೇತ್ರದಲ್ಲಿರುವ ಹಿಡಿತ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಬೆಂಬಲ ಮತ್ತು ಜಿ.ಮಾದೇಗೌಡರ ಜನಪ್ರಿಯತೆ ಮಧು ಮಾದೇಗೌಡರ ಗೆಲುವಿಗೆ ಸಹಕಾರಿಯಾಯಿತು.

ಕಾಂಗ್ರೆಸ್ ಕಾರ್ಯಕರ್ತರ ಸಂಘಟಿತ ಹೋರಾಟ ಮತ್ತು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಕೀಲಾರ ಜಯರಾಂ ನೇರವಾಗಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಕೇಳಿದ್ದು ಸಹ ಮಧು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಯ ಕಾರ್ಯಕರ್ತರು ಈ ಬಾರಿ ಕಾಂಗ್ರೆಸ್ ಪರ ಒಲವು ವ್ಯಕ್ತಪಡಿಸಿದ್ದರಿಂದ ದಕ್ಷಿಣ ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೆಸ್ ದಾಖಲೆ ಜಯ ಗಳಿಸಲು ಸಾಧ್ಯವಾಯಿತು. ಮಧು ಮಾದೇಗೌಡ ಕೂಡ ಎಲ್ಲಾ ರೀತಿಯಿಂದಲೂ ಚುನಾವಣೆ ಎದುರಿಸಿದ್ದು ಮತ್ತು ಬಿಜೆಪಿ ಸರ್ಕಾರದ ದುರಾಡಳಿತ ಮಧು ಗೆಲುವಿಗೆ ಸುಲಭವಾಯಿತು ಎಂದು ವಿವರಿಸಿದರು.

ಚುನಾವಣೆಯಲ್ಲಿ ಜೆಡಿಎಸ್ 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಈ ಗೆಲುವು ಮುಂದಿನ ಚುನಾವಣೆಗೆ ಪಕ್ಷಕ್ಕೆ ಟಾನಿಕ್ ನೀಡಿದಂತಾಗಿದೆ. ಹಾಗಂತ ಜೆಡಿಎಸ್ ಅಭ್ಯರ್ಥಿಯನ್ನು ನಾನು ಟೀಕಿಸುವುದಿಲ್ಲ. ಚುನಾವಣೆಯಲ್ಲಿ ಸೋಲು–ಗೆಲುವು ಸಾಮಾನ್ಯ. ನಾವು ಗೆದ್ದಿದ್ದೇವೆ ಎಂದು ಬೀಗುವುದಿಲ್ಲ. ಪ್ರಜ್ಞಾವಂತ ಪದವೀಧರರು ನೀಡಿರುವ ಜವಾಬ್ದಾರಿ ಅರಿತು ಕೆಲಸ ಮಾಡುತ್ತೇವೆ ಎಂದರು.

ಅಪ್ರಾಪ್ತೆ ಮೇಲೆ ಅತ್ಯಾಚಾರ: ಕಾಮುಕನಿಗೆ 20 ವರ್ಷ ಜೈಲು

ನಾಗಮಂಗಲ,ಜೂ.16– ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಕಾಮುಕನಿಗೆ 20 ವರ್ಷ ಜೈಲು ಮತ್ತು 80 ಸಾವಿರ ರೂ. ವಿಧಿಸಿ ಮಂಡ್ಯ ಅಧಿಕ ಸತ್ರ ಮತ್ತು ತ್ವರಿತಗತಿ 2ನೇ ನ್ಯಾಯಾಲಯದ ವಿಶೇಷ ನ್ಯಾಯಾಧೀಶರು ತೀರ್ಪು ನೀಡಿದ್ದಾರೆ.

ನಾಗಮಂಗಲ ತಾಲೂಕು ಚುಂಚನಹಳ್ಳಿ ಗ್ರಾಮದ ಅಶೋಕ ಅಲಿಯಾಸ್ ಸುಬ್ರಹ್ಮಣಿ ಅಲಿಯಾಸ್ ಪ್ರಕಾಶ್ ಶಿಕ್ಷೆಗೆ ಗುರಿಯಾದವರಾಗಿದ್ದು, ಈತ 2020ರ ಜು.3 ರಂದು ರಾತ್ರಿ 11 ಗಂಟೆ ಸುಮಾರಿನಲ್ಲಿ ಚುಂಚನಹಳ್ಳಿ ಗ್ರಾಮದಲ್ಲಿ ತನ್ನ ಅಜ್ಜಿ ಜೊತೆ ಮಲಗಿದ್ದ ಅಪ್ರಾಪ್ತ ಬಾಲಕಿಯನ್ನು ನಿರ್ಜನ ಪ್ರದೇಶಕ್ಕೆ ಎಳೆದೊಯ್ದು ಅತ್ಯಾಚಾರವೆಸಗಿದ್ದ. ಈ ಸಂಬಂಧ ಬೆಳ್ಳೂರು ಠಾಣೆ ಪೊಲೀಸರು ಪೋಸ್ಕೋ ಕಾಯ್ದೆಯಡಿ ದೂರು ದಾಖಲಿಸಿಕೊಂಡು ಘಟನೆ ನಡೆದ 24 ಗಂಟೆಯೊಳಗೆ ಆರೋಪಿ ಬಂಧಿಸಿದ್ದರು. ನಾಗಮಂಗಲ ಉಪವಿಭಾಗದ ಅಂದಿನ ಡಿವೈಎಸ್‌ಪಿ ಕೆ.ಬಿ.ವಿಶ್ವನಾಥ್ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಕಾಮುಕ ಅಶೋಕನಿಗೆ 20 ವರ್ಷ ಕಠಿಣ ಸಜೆ ಮತ್ತು 80 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಈ ಪ್ರಕರಣದಲ್ಲಿ ಅತ್ಯಾಚಾರ ನಡೆದ 24 ಗಂಟೆಯೊಳಗೆ ಕಾಮುಕನನ್ನು ಬಂಧಿಸುವಲ್ಲಿ ಯಶಸ್ವಿಯಾದ ಅಂದಿನ ಡಿವೈಎಸ್‌ಪಿ ಕೆ.ಬಿ.ವಿಶ್ವನಾಥ್, ಸಿಪಿಐ ಕೆ.ರಾಜೇಂದ್ರ, ಎಸ್‌ಐ ದಯಾನಂದ, ಎಎಸ್‌ಐಗಳಾದ ಶಿವಣ್ಣ, ಮರಿಸ್ವಾಮಿ, ಸಿದ್ದರಾಜು ಹಾಗೂ ಸಿಬ್ಬಂದಿಗಳಾದ ಶಿವಮಲ್ಲು, ವಜ್ರ ಸಿ.ಜೆ., ಮಂಜುನಾಥ್, ಸಂದೇಶ್ ಪಟೇಲ್ ಅವರನ್ನು ಜಿಲ್ಲಾ ಎಸ್ಪಿ ಯತೀಶ್, ಎಎಸ್ಪಿ ವೇಣುಗೋಪಾಲ್, ನಾಗಮಂಗಲ ಉಪವಿಭಾಗದ ಹಾಲಿ ಡಿವೈಎಸ್ಪಿ ಎನ್.ನವೀನ್ ಕುಮಾರ್ ಪ್ರಶಂಶಿಸಿದ್ದಾರೆ.

ಉದರದರ್ಶಕ ಶಸ್ತ್ರಚಿಕಿತ್ಸಾ ಶಿಬಿರ

ಮಂಡ್ಯ, ಜೂ.16– ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಜೂ.22 ರವರೆಗೆ ಉದರ ಶಸ್ತ್ರಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಜೂ.17 ಕೆ.ಎಂ.ದೊಡ್ಡಿ ಸರ್ಕಾರಿ ಆರೋಗ್ಯ ಕೇಂದ್ರ, ಜೂ.18 ಕಿರುಗಾವಲು ಸರ್ಕಾರಿ ಆರೋಗ್ಯ ಕೇಂದ್ರ, ಜೂ.21 ಕ್ಯಾತುಂಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಜೂ.22 ಬಸರಾಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಗೆ ಶಿಬಿರ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



ಕೆ.ಆರ್.ಪೇಟೆ, ಜೂ.16(ಶ್ರೀನಿವಾಸ್)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿ, ತಾಲೂಕಿಗೆ ಕೀರ್ತಿ ತಂದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಾಪಂ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಮತ್ತು ಗ್ಯಾಸ್ ಉದ್ಯಮಿ ಬಿ.ರಾಜಶೇಖರ್ ಅವರು ಸನ್ಮಾನಿಸಿ, ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿನಿಯರಾದ ಬಿ.ಎಸ್.ಮೊನಾಲಿಸಾ(624), ಹರ್ಷಿತ(624) ಮತ್ತು ಯು.ಬಿ.ರೇವತಿ (623) ಅವರಿಗೆ ಶಾಲು ಹೊದಿಸಿ, ನೆನಪಿನ ಕಾಣಿಕೆ ನೀಡಿ ಮುಂದಿನ ಶೈಕ್ಷಣಿಕ ಪ್ರಗತಿಗೆ ಸಹಾಯಕವಾಗುವಂತೆ ನಗದು ಬಹುಮಾನ ನೀಡಲಾಯಿತು.

ತಾಪಂ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ರಾಜಶೇಖರ್ ಮಾತನಾಡಿ, ಗ್ರಾಮೀಣ ಪ್ರತಿಭೆಗಳಾದ ಬಿ.ಎಸ್.ಮೊನಾಲಿಸಾ, ಹರ್ಷಿತಾ ಹಾಗೂ ರೇವತಿ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆಯುವ ಮೂಲಕ ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ನಾವೇನೂ ಕಡಿಮೆ ಇಲ್ಲ ಎಂಬ ಸಂದೇಶ ಸಾರಿದ್ದಾರೆ. ಮುಂದಿನ ದಿನಗಳಲ್ಲಿ ಐಎಎಸ್, ಕೆಎಎಸ್ ಹುದ್ದೆ ಅಲಂಕರಿಸಿ ತಾಲೂಕಿಗೆ ಹಾಗೂ ತಂದೆ–ತಾಯಿಗೆ ಕೀರ್ತಿ ತರಬೇಕು ಎಂದರು.

ಕೃಷ್ಣರಾಜ ಪದವಿಪೂರ್ವ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಎಸ್.ಬಿ.ಲೋಕೇಶ್, ಪುರಸಭಾ ಸದಸ್ಯ ಕೆ.ಆರ್.ನೀಲಕಂಠ, ಸಮಾಜ ಸೇವಕಿ ದಾಕ್ಷಾಯಿಣಿ, ಮೀನಾ, ರಾಜಸ್ಥಾನ್ ಸೇವಾ ಸಮಿತಿ ಸಂಚಾಲಕ ರಮೇಶ್ ಚೌಧರಿ, ರಾಜ್ಯ ಬಿಜೆಪಿ ಎಸ್.ಟಿ. ಮೋರ್ಚಾ ಕಾರ್ಯಕಾರಣಿ ಸದಸ್ಯ ಜಗದೀಶ್, ಮುಖಂಡರಾದ ರಾಮೇಗೌಡ, ನಾಗೇಶ್, ಜಯಮ್ಮ, ಪರಮೇಶ್, ಪೋಷಕರಾದ ಬಸವರಾಜು, ಆರ್.ಶ್ರೀನಿವಾಸ್, ಅಮರಾವತಿ, ಖಲೀಲ್ ಮತ್ತಿತರರಿದ್ದರು.

ಪಡಿತರ ಚೀಟಿದಾರರಿಗೆ ಇ–ಕೆವೈಸಿಗೆ ಅವಕಾಶ

ಮಂಡ್ಯ, ಜೂ.16– ಜಿಲ್ಲೆಯ ಎಲ್ಲಾ ಪಡಿತರ ಚೀಟಿದಾರರಿಂದ (ಇ–ಕೆವೈಸಿ) ಬೆರಳಚ್ಚು ಪಡೆಯುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಬಾಕಿ ಉಳಿದಿರುವ ಪಡಿತರ ಚೀಟಿದಾರರಿಗೆ ಹಾಗೂ ಪೋರ್ಟಬಿಲಿಟಿ ಅಡಿ ಬೇರೆ ಜಿಲ್ಲೆಯಲ್ಲಿ ಪಡಿತರ ಪಡೆಯುತ್ತಿರುವ ಪಡಿತರ ಚೀಟಿದಾರರಿಗೆ ಇ–ಕೆವೈಸಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲೆಯ ಪಡಿತರ ಚೀಟಿದಾರರು ಇತರೆ ಜಿಲ್ಲೆಗಳಲ್ಲಿ ವಾಸವಿದ್ದು, ಸ್ಥಳೀಯ ನ್ಯಾಯಬೆಲೆ ಅಂಗಡಿಗಳಿಂದ ಪಡಿತರ ಪಡೆಯುತ್ತಿದ್ದಲ್ಲಿ ಅಂತಹ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಗಳಲ್ಲಾದರೂ ಇ–ಕೆವೈಸಿ ಮಾಡಿಸಬಹುದು. ಈ ಪ್ರಕ್ರಿಯೆ ಜೂನ್ ಅಂತ್ಯದವರೆಗೂ ಚಾಲ್ತಿಯಲ್ಲಿರುತ್ತದೆ. ಈಗಾಗಲೇ (ಇ–ಕೆವೈಸಿ) ಬೆರಳಚ್ಚು ನೀಡಿರುವ ಪಡಿತರ ಚೀಟಿದಾರರು ಮತ್ತೊಮ್ಮೆ (ಇ–ಕೆವೈಸಿ) ಮಾಡಿಸುವ ಅವಶ್ಯಕತೆ ಇಲ್ಲ. ಇ–ಕೆವೈಸಿ ಉಚಿತವಾಗಿ ಮಾಡಲಾಗುವುದು. ಈ ಅವಕಾಶ ಸದುಪಯೋಗಪಡಿಸಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

ಬೆಸಗರಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಮದ್ದೂರು, ಜೂ.16– ತಾಲೂಕಿನ ಬೆಸಗರಹಳ್ಳಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಸೌಮ್ಯ, ಉಪಾಧ್ಯಕ್ಷೆಯಾಗಿ ಗಿರಿಜಾ ಗುರುವಾರ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷೆ ಅನಿತಾ ಅವರಿಂದ ತೆರವಾದ ಸ್ಥಾನಕ್ಕೆ ಇಲ್ಲಿನ ಗ್ರಾಪಂನಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸೌಮ್ಯ, ಉಪಾಧ್ಯಕ್ಷ ಸ್ಥಾನಕ್ಕೆ ಗಿರಿಜಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಾಪಂ ಇಓ ಸಂದೀಪ್ ಘೋಷಿಸಿದರು.

ನೂತನ ಅಧ್ಯಕ್ಷೆ ಸೌಮ್ಯ ಮಾತನಾಡಿ, ಗ್ರಾಪಂ ಸದಸ್ಯರ ವಿಶ್ವಾಸ ಪಡೆದು ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ. ಮೂಲ ಸೌಕರ್ಯಕ್ಕೆ ಒತ್ತು ನೀಡಿ ತ್ವರಿತಗತಿಯಲ್ಲಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತೇನೆ. ಕುಡಿಯುವ ನೀರು, ನರೇಗಾ ಅನುಷ್ಠಾನ, ಸರ್ಕಾರದ ಅನುದಾನ ಸಮರ್ಪಕ ಬಳಕೆ ಸೇರಿದಂತೆ ಇತರ ಕಾರ್ಯಗಳನ್ನು ಪಾರದರ್ಶಕವಾಗಿ ಮಾಡಲು ಮುಂದಾಗುತ್ತೇನೆ ಎಂದರು. ಈ ವೇಳೆ ಸಹಾಯಕ ಚುನಾವಣಾಧಿಕಾರಿ ಲೋಕೇಶ್, ಪಿಡಿಓ ನವೀನ್, ಗ್ರಾಪಂ ಸದಸ್ಯರು ಇದ್ದರು.

ದೇಶದ ಗೌರವ ಹೆಚ್ಚಿಸಿದ ಪ್ರಧಾನಿ ಮೋದಿ

ಮೋದಿಯನ್ನು ಹಾಡಿ ಹೊಗಳಿದ ಸಚಿವ ಆಚಾರ ಹಾಲಪ್ಪ ಬಸಪ್ಪ

ಚಾಮರಾಜನಗರ, ಜೂ.16– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದು, ಕೇಂದ್ರ ಸಾಧನೆಗಳನ್ನು ಎದೆಯುಬ್ಬಿಸಿ ಹೇಳಬಹುದು ಎಂದು ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವ ಆಚಾರ ಹಾಲಪ್ಪ ಬಸಪ್ಪ ತಿಳಿಸಿದ್ದಾರೆ.

ನಗರದ ನಿಜಗುಣ ರೆಸಿಡೆನ್ಸಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾದ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಮೂರು ದಿನಗಳ ಪ್ರಶಿಕ್ಷಣ ವರ್ಗ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, 2014ರ ಬಳಿಕ ರಾಷ್ಟ್ರ ರಾಜಕಾರಣ ನೀತಿ ಅದ್ಭುತವಾಗಿ ನಡೆಯುತ್ತಿದೆ. ಹಿಂದೆ ಭಾರತವನ್ನು ಹಾವಾಡಿಗರ ದೇಶ ಎಂದು ಕೀಳಾಗಿ ಕರೆಯಲಾಗುತ್ತಿತ್ತು. ಆದರೆ, ನರೇಂದ್ರಮೋದಿ ಅವರು ಚುಕ್ಕಾಣಿ ಹಿಡಿದ ಬಳಿಕ ಹಿಮಾಲಯದ ಎತ್ತರಕ್ಕೆ ದೇಶದ ಗೌರವ ಹೆಚ್ಚಾಗಿದೆ ಎಂದರು.

ಬೇರೆ ಬೇರೆ ದೇಶಗಳಲ್ಲೂ ನರೇಂದ್ರ ಮೋದಿಗೆ ರೆಡ್ ಕಾರ್ಪೆಟ್ ಹಾಸಿ ಗೌರವ ನೀಡಲಾಗುತ್ತಿದೆ. ನರೇಂದ್ರಮೋದಿ ಅವರು ಉಜ್ವಲ ಯೋಜನೆ, ಆಯುಷ್ಮಾನ್ ಭಾರತ್, ಜಲ ಜೀವನ್ ಮಿಷನ್ ಯೋಜನೆ ಸೇರಿದಂತೆ ಇತರೆ ಅನೇಕ ಯೋಜನೆಗಳನ್ನು ಜಾರಿಗೆ ತಂದು ದೇಶದ ಜನರಿಗೆ ಅನುಕೂಲ ಕಲ್ಪಿಸಿದ್ದಾರೆ. ಇದರಿಂದಾಗಿ ಕಾರ್ಯಕರ್ತರು ಬಿಜೆಪಿ ಸರ್ಕಾರದ ಸಾಧನೆಗಳನ್ನು ಎದೆಯುಬ್ಬಿಸಿ ವಿರೋಧ ಪಕ್ಷಗಳ ಕಾರ್ಯಕರ್ತರಿಗೆ ಹೇಳಬಹುದು. ಅಲ್ಲದೇ ರಾಜ್ಯ ಸರ್ಕಾರವು ಕೂಡ ಅನೇಕ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಹೇಳಿದರು.

ರಾಜ್ಯದ 66,362 ಅಂಗನವಾಡಿ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ಮಾಸಿಕ 1 ಸಾವಿರ ಸಂಬಳ ಏರಿಕೆ ಮಾಡಲಾಗಿದೆ. ಅಲ್ಲದೇ ಆಶಾ ಕಾರ್ಯಕರ್ತೆಯರು ಹಾಗೂ ಬಿಸಿಯೂಟ ಕಾರ್ಯಕರ್ತೆಯರಿಗೂ ಅನುಕೂಲ ಕಲ್ಪಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳನ್ನು ಜನರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಶಾಸಕ ಎನ್.ಮಹೇಶ್ ಮಾತನಾಡಿ, ದೇಶದಲ್ಲಿ ಮಾತೃ ಪ್ರಧಾನ ಸಂಸ್ಕೃತಿ ಇದೆ. ಆ ಮೂಲಕ ಹೆಣ್ಣು ಮಕ್ಕಳಿಗೆ ಗೌರವ ಸ್ಥಾನ ನೀಡಲಾಗಿದೆ. ಮಹಿಳೆಯರನ್ನು ಸಶಕ್ತೀಕರಣಗೊಳಿಸಲು ಶಿಬಿರಗಳು ಅನುಕೂಲವಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಹಿಳೆಯರ ಸಬಲೀಕರಣಕ್ಕೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಗೀತಾ ವಿವೇಕಾನಂದ, ಬಿಜೆಪಿ ಜಿಲ್ಲಾಧ್ಯಕ್ಷ ಸುಂದರ್, ಮುಖಂಡ ನಿಜಗುಣ ರಾಜು, ಬಿಜೆಪಿ ಮಹಿಳಾ ಮೋರ್ಚಾದ ಪದಾಧಿಕಾರಿಗಳಾದ ಅಕುಲಾ ವಿಜಯ, ಲಲಿತಾ, ಚಂದ್ರಮ್ಮ, ಅಶ್ವಿನಿ, ಶಿಲ್ಪ, ಶೋಭಾ ಸೇರಿದಂತೆ ಇತರರಿದ್ದರು.


ಬಿಜೆಪಿ ಮಹಿಳಾ ಮೋರ್ಚಾದ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಮೂರು ದಿನಗಳ ಪ್ರಶಿಕ್ಷಣ ವರ್ಗ ಶಿಬಿರವನ್ನು ಉದ್ಘಾಟಿಸುತ್ತಿರುವ ಸಚಿವ ಆಚಾರ ಹಾಲಪ್ಪ ಬಸಪ್ಪ, ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಮತ್ತಿತರರಿದ್ದಾರೆ.

ಗುಂಡ್ಲುಪೇಟೆ ಬಳಿ ಕಾಡಾನೆ ದಾಳಿ: ತಂದೆ ಸಾವು, ಮಗನಿಗೆ ತೀವ್ರ ಗಾಯ

ಜಮೀನಿನಲ್ಲಿ ಫಸಲು ಕಾಯುತ್ತಿದ್ದಾಗ ದುರಂತ


ಬೆಳ್ಳಿಶೆಟ್ಟಿ

ಗುಂಡ್ಲುಪೇಟೆ, ಜೂ.16 (ಸೋಮ್.ಜಿ)– ಜಮೀನಿನಲ್ಲಿ ಬೆಳೆದಿದ್ದ ಬೆಳೆ ಕಾಯಲು ಹೋಗಿದ್ದ ಅಪ್ಪ–ಮಗನ ಮೇಲೆ ಕಾಡಾನೆಯೊಂದು ದಾಳಿ ನಡೆಸಿದ ಪರಿಣಾಮ ಅಪ್ಪ ಸಾವನ್ನಪ್ಪಿ, ಮಗ ಗಾಯಗೊಂಡಿರುವ ಘಟನೆ ತಾಲೂಕಿನ ಶಿವಪುರ ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ವಾಸಿ ರೈತ ಬೆಳ್ಳಿಶೆಟ್ಟಿ(65) ಮೃತ ದುರ್ದೈವಿ. ಇವರ ತಮ್ಮ ಮಗ ಮಹೇಶ್ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಸಮೀಪದ ಕುಂದಕೆರೆ ಅರಣ್ಯ ವಲಯದಲ್ಲಿ ಸೋಲಾರ್ ತಂತಿ ಬೇಲಿಯನ್ನು ಕಿತ್ತು ಹಾಕಿ ಊರಿಗೆ ನುಗ್ಗಿದ್ದ ಕಾಡಾನೆಯೊಂದನ್ನು ಅರಣ್ಯ ಇಲಾಖೆಯ ಕ್ಯಾಂಪ್ ಸಿಬ್ಬಂದಿ ಜತೆಗೂಡಿ ಹುಂಡೀಪುರ ಸಮೀಪದ ರೈತರು ಓಡಿಸಿದ್ದಾರೆ. ಇದರಿಂದ ಕೆರಳಿದ ಆನೆ ಶಿವಪುರದತ್ತ ಓಡಿದೆ. ಈ ಸಂದರ್ಭದಲ್ಲಿ ತಮ್ಮ ನೆಲಗಡಲೆ ಬೆಳೆ ರಕ್ಷಣೆಗೆಂದು ಜಮೀನಿನಲ್ಲಿ ತಾತ್ಕಾಲಿಕ ಗುಡಿಸಲನ್ನು ಹಾಕಿಕೊಂಡು ತಮ್ಮ ಮಗ ಮಹೇಶನೊಂದಿಗೆ ಕಾವಲು ಕಾಯುತ್ತಿದ್ದ ಬೆಳ್ಳಿಶೆಟ್ಟಿ ಮೇಲೆ ಕಾಡಾನೆ ದಾಳಿ ನಡೆಸಿ ಅಲ್ಲಿಂದ ಜಾಗ ಖಾಲಿ ಮಾಡಿತು. ಇದರಿಂದ ಬೆಳ್ಳಿಶೆಟ್ಟಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ದಾಳಿಯಿಂದ ಮಗ ಮಹೇಶನ ಭುಜಕ್ಕೆ ತೀವ್ರವಾದ ಗಾಯಗಳಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಅಕ್ಕಪಕ್ಕದ ಜಮೀನಿನಲ್ಲಿದ್ದ ರೈತರು ಹಾಗೂ ಗ್ರಾಮಸ್ಥರು ಸ್ಥಳಕ್ಕೆ ಆಗಮಿಸಿ ಅರಣ್ಯ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯ ಇಲಾಖೆ ವಿರುದ್ಧ ರೈತರ ಆಕ್ರೋಶ


ಮೃತನ ಕುಟುಂಬಕ್ಕೆ ಪರಿಹಾರದ ಚೆಕ್ ವಿತರಿಸುತ್ತಿರುವ ಡಾ.ರಮೇಶ್ ಕುಮಾರ್.

ಕಳೆದ ಒಂದು ವಾರದಿಂದ ಬಂಡೀಪುರ ಹುಲಿ ಯೋಜನೆಯ ಅರಣ್ಯ ಪ್ರದೇಶದಿಂದ ಕಾಡಾನೆಗಳು ಹೊರಬಂದು ದಾಳಿ ನಡೆಸುತ್ತಿದ್ದರೂ ಕ್ರಮ ಕೈಗೊಳ್ಳದ ಅರಣ್ಯಾಧಿಕಾರಿಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಇತ್ತೀಚೆಗೆ ಹುಂಡೀಪುರ ಸುತ್ತಮುತ್ತ ಕಾಡಾನೆಗಳ ಉಪಟಳ ಹೆಚ್ಚಾಗಿರುವ ಬಗ್ಗೆ ಅರಣ್ಯ ಇಲಾಖೆಗೆ ಗೊತ್ತಿದ್ದೂ ಸಹ ಯಾವುದೇ ಅಗತ್ಯ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಆನೆ ಮತ್ತೆ ಹೊರಬಂದು ರೈತರನ್ನು ಸಾಯಿಸಿದೆ. ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಬರಬೇಕು. ಈ ಘಟನೆಗೆ ಅಧಿಕಾರಿಗಳನ್ನು ಹೊಣೆ ಮಾಡಬೇಕು. ಕೂಡಲೇ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಡಾ. ರಮೇಶ್‌ಕುಮಾರ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ ಗ್ರಾಮಸ್ಥರನ್ನು ಸಮಾಧಾನ ಪಡಿಸಿದರು. ನಂತರ ಮೃತರ ಕುಟುಂಬದವರಿಗೆ 2 ಲಕ್ಷ ಪರಿಹಾರದ ಚೆಕ್ ನೀಡಿ ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಉಳಿದ 5.5 ಲಕ್ಷ ನೀಡುವ ಭರವಸೆ ನೀಡಿದರು.

ನಿಧನ

ಎಸ್. ಪುಟ್ಟನಂಜಮ್ಮ



ಯಳಂದೂರು, ಜೂ.16– ತಾಲೂಕಿನ ಮಾಂಬಳ್ಳಿ ಗ್ರಾಮದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಲಾವಿದ ಎಚ್. ಫಾಲ್ಗುಣ ಅವರ ತಾಯಿ ಪುಟ್ಟನಂಜಮ್ಮ(84) ಗುರುವಾರ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಇವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿ ಆಗದೆ ನಿಧನರಾದರು. ಮೃತರು ಐವರು ಪುತ್ರರು ಹಾಗೂ ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಾಂಬಳ್ಳಿ ಸಮೀಪವಿರುವ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಎಂ.ಸದಾನಂದ



ಚಾಮರಾಜನಗರ, ಜೂ.16– ತಾಲೂಕಿನ ಹರವೆ ಗ್ರಾಮದ ನಿವಾಸಿ, ಗ್ರಾಪಂ ಮಾಜಿ ಸದಸ್ಯ ಎಂ.ಸದಾನಂದ (53) ಬುಧವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರಿ ಸಹೋದರ ಸೇರಿದಂತೆ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ತೋಟದ ಜಮೀನಿನಲ್ಲಿ ಗುರುವಾರ ಮಧ್ಯಾಹ್ನ ನೆರವೇರಿತು.

ಚಾ.ನಗರದಲ್ಲಿ ಕಾಂಗ್ರೆಸ್ ವಿಜಯೋತ್ಸವ



ಚಾಮರಾಜನಗರ, ಜೂ.16(ಎಸ್‌ಎಸ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರು ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ನಗರದಲ್ಲಿ ಗುರುವಾರ ವಿಜಯೋತ್ಸವ ಆಚರಿಸಿದರು.

ನಗರದ ಕಾಂಗ್ರೆಸ್ ಜಿಲ್ಲಾ ಕಚೇರಿ ಮುಂದೆ ಜಮಾಯಿಸಿದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು, ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಿಸಿದರು. ಪಕ್ಷದ ಪರ, ಪಕ್ಷದ ಮುಖಂಡರ ಪರ ಘೋಷಣೆಗಳನ್ನು ಕೂಗಿ ಸಂಭ್ರಮ ಪಟ್ಟರು.

ಪಕ್ಷದ ಜಿಲ್ಲಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ವಕ್ತಾರ ಕೆರಹಳ್ಳಿ ನವೀನ್, ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವು, ಆರ್. ಮಹದೇವು, ಗ್ರಾಮಾಂತರ ಅಧ್ಯಕ್ಷ ಮಹಮದ್ ಅಸ್ಗರ್, ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷ ಲೋಹಿತ್, ಮುಖಂಡರಾದ ಕಾಗಲವಾಡಿ ಶಿವಸ್ವಾಮಿ, ಪೃಥ್ವಿ, ಗಾಳಿಪುರ ಪುಟ್ಟಸ್ವಾಮಿ, ನಲ್ಲೂರು ಮಹದೇವಸ್ವಾಮಿ, ಸೋಷಿಯಲ್ ಮೀಡಿಯಾ ಅಧ್ಯಕ್ಷ ಮುಜಾಯಿದ್, ದೊರೆ, ಕುಮಾರ್ ಶೇಷಣ್ಣ, ಸ್ವಾಮಿ ಉಪಸ್ಥಿತರಿದ್ದರು.

ನಾಳೆ ವಿದ್ಯುತ್ ಅದಾಲತ್

ಗುಂಡ್ಲುಪೇಟೆ, ಜೂ.16(ಸೋಮ್.ಜಿ)– ತಾಲೂಕಿನ ಹಂಗಳ ಹೋಬಳಿಯ ಚಿಕ್ಕಯಲಚೆಟ್ಟಿ ಗ್ರಾಮದಲ್ಲಿ ಜೂ.18ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ ಎಂದು ಸೆಸ್ಕ್‌ನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಿದ್ದಲಿಂಗಪ್ಪ ತಿಳಿಸಿದ್ದಾರೆ.

ಕಾಂಗ್ರೆಸ್‌ಗೆ ಕಾನೂನಿನ ಮೇಲೆ ನಂಬಿಕೆ ಇಲ್ಲ, ವಿಪಕ್ಷದಲ್ಲಿರಲು ನಾಲಾಯಕ್

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಾಗ್ದಾಳಿ

ಚಾಮರಾಜನಗರ, ಜೂ.16(ಎಸ್‌ಎಸ್)– ಕಾಂಗ್ರೆಸ್‌ಗೆ ಸಂವಿಧಾನ ಹಾಗೂ ಕಾನೂನಿನ ಮೇಲೆ ನಂಬಿಕೆ ಇಲ್ಲ. ಆದುದರಿಂದಲೇ ಇಡಿ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡುತ್ತಿದೆ. ತುರ್ತು ಪರಿಸ್ಥಿತಿ ಹೇರಿ ದೇಶದಲ್ಲಿ ಪ್ರಜಾಪ್ರಭುತ್ವ ಕಗ್ಗೊಲೆ ಮಾಡಿದ್ದ ಕಾಂಗ್ರೆಸ್ ವಿಪಕ್ಷ ಆಗಲೂ ನಾಲಾಯಕ್ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ಹಮ್ಮಿಕೊಂಡಿದ್ದ ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಮಟ್ಟದ ಪ್ರಶಿಕ್ಷಣ ವರ್ಗ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಕಾನೂನಿನಡಿ ಇಡಿ ವಿಚಾರಣೆ ಮಾಡುತ್ತಿದೆ. ಈ ಹಿಂದೆ ನರೇಂದ್ರ ಮೋದಿ, ಅಮಿತ್ ಷಾ ವಿರುದ್ಧವೂ ಇಡಿ ತನಿಖೆ ನಡೆಸಿತ್ತು. ಆವತ್ತು ಯಾರೂ ಸಹ ಹೋರಾಟ ಮಾಡಿರಲಿಲ್ಲ. ವಿಚಾರಣೆ ಮಾಡುವುದು ಕಾನೂನಿನ ಧರ್ಮ. ಅದರಂತೆ ಇಡಿ ವಿಚಾರಣೆ ನಡೆಸುತ್ತಿದೆ. ಆದರೆ ಕಾಂಗ್ರೆಸ್ ಬೇರೆ ಬೇರೆ ಕಾರಣಗಳಿಂದ ಹೋರಾಟ ಮಾಡುತ್ತಿದೆ ಎಂದರು.

ದೇಶದಲ್ಲಿ ಜನತೆ ಕಾಂಗ್ರೆಸ್‌ನ್ನು ತಿರಸ್ಕರಿಸುತ್ತಿದ್ದಾರೆ. ಕಾಂಗ್ರೆಸ್‌ಗೆ ಕೇಡುಗಾಲ ಬಂದಿದೆ ಎಂದು ವಾಗ್ದಾಳಿ ನಡೆಸಿದ ಕಟೀಲ್ ಅವರು, ತುರ್ತು ಪರಿಸ್ಥಿತಿ ಹೇರಿದ್ದು, ತಮ್ಮದೇ ಪಾರ್ಟಿ ಎಂಬುದನ್ನು ಸಿದ್ದರಾಮಯ್ಯ ಯೋಚನೆ ಮಾಡಬೇಕು ಎಂದರು.

ನಾಯಕತ್ವ ಬದಲಾವಣೆ ಇಲ್ಲ: ರಾಜ್ಯ ಬಿಜೆಪಿ ಸರ್ಕಾರದಲ್ಲಿ ನಾಯಕತ್ವ ಬದಲಾವಣೆ ಇಲ್ಲ. ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲೇ ಮುಂದಿನ ಚುನಾವಣೆಯನ್ನು ಎದುರಿಸುತ್ತೇವೆ. ಸಚಿವ ಸಂಪುಟವನ್ನು ವಿಸ್ತರಣೆ ಮಾಡುವುದು ಅಥವಾ ಪುನರ್‌ರಚನೆ ಮಾಡುವುದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟ ವಿಚಾರ ಎಂದು ಅವರು ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದರು.

ದಿಕ್ಸೂಚಿ ಅಲ್ಲ: ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿ ಹಿಂದೆ ಇದ್ದಂತೆ ಎರಡು ಸ್ಥಾನಗಳನ್ನು ಉಳಿಸಿಕೊಂಡಿದೆ. ಬಿಜೆಪಿ ಮತಗಳು ಸ್ಥಿರವಾಗಿವೆ. ಜೆಡಿಎಸ್ ಮತಗಳು ಬಿಜೆಪಿಗೆ ಬಂದಿವೆ. ಈ ಚುನಾವಣೆಯ ಫಲಿತಾಂಶ ಮುಂದಿನ ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಅಲ್ಲ ಎಂದರು.

ವಾಯುವಿಹಾರಕ್ಕೆ ತೆರಳಿದ್ದ ವೃದ್ಧೆಯ ಸರ ಕಸಿದು ಪರಾರಿ

ಕೊಳ್ಳೇಗಾಲ, ಜೂ.16(ನಾಗೇಂದ್ರಸ್ವಾಮಿ)– ವೃದ್ಧೆಯೊಬ್ಬರು ವಾಯುವಿಹಾರಕ್ಕೆ ತೆರಳಿದ್ದ ವೇಳೆ ಸರಗಳ್ಳರು 60 ಗ್ರಾಂ ಚಿನ್ನದ ಸರ ಕಸಿದುಕೊಂಡು ಪರಾರಿಯಾಗಿರುವ ಘಟನೆ ಗುರುವಾರ ಮುಂಜಾನೆ ಮಹದೇಶ್ವರ ಕಾಲೇಜು ಸಮೀಪ ನಡೆದಿದೆ.

ಇಲ್ಲಿನ ರಾಜೀವ್ ನಗರ(ಬಸವೇಶ್ವರನಗರ) ನಿವಾಸಿ ಮಹಾದೇವಸ್ವಾಮಿ ಪತ್ನಿ ಸುಶೀಲಮ್ಮ ಮಾಂಗಲ್ಯ ಸರ ಕಳೆದುಕೊಂಡವರು. ಸುಶೀಲಮ್ಮ ಅವರು ಗುರುವಾರ ಮುಂಜಾನೆ ವಾಕಿಂಗ್‌ಗೆ ತೆರಳಿದ್ದ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಸರಗಳ್ಳರು ಸರೋಜಮ್ಮನವರ ಕುತ್ತಿಗೆಗೆ ಕೈ ಹಾಕಿ ಸರ ಎಗರಿಸಿ ಪರಾರಿಯಾಗಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪಟ್ಟಣದಲ್ಲಿ ಸರಗಳ್ಳರ ಹಾವಳಿ ಹೆಚ್ಚಾಗಿದ್ದು ಈ ಸಂಬಂಧ ಪೊಲೀಸ್ ಇಲಾಖೆ ಆರೋಪಿಗಳ ಪತ್ತೆಗೆ ಕ್ರಮವಹಿಸಬೇಕು, ಪೊಲೀಸರ ಗಸ್ತು ಪಟ್ಟಣದಲ್ಲಿ ಹೆಚ್ಚಿನ ರೀತಿ ನಿಯೋಜಿಸಬೇಕು. ಆ ಮೂಲಕ ಸರಗಳ್ಳರ ಪತ್ತೆಗೂ ಕ್ರಮವಹಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಹಳ್ಳಕ್ಕೆ ಲಾರಿ ಬಿದ್ದು, ಚಾಲಕನಿಗೆ ಗಾಯ



ವಿರಾಜಪೇಟೆ, ಜೂ.16– ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ಸುಮಾರು 50 ಅಡಿ ಆಳಕ್ಕೆ ಉರುಳಿರುವ ಕಾರಣ ಲಾರಿ ಚಾಲಕ ಗಂಭೀರ ಸ್ವರೂಪದಲ್ಲಿ ಗಾಯಗೊಂಡಿದ್ದು, ಕ್ಲೀನರ್ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ವರದಿಯಾಗಿದೆ.

ಅಮ್ಮತ್ತಿ ಕಡೆಯಿಂದ ವೇಗವಾಗಿ ಬಂದ ಲಾರಿ(ಕೆಎ52, 8179)ಯೊಂದು ಸುಂಕದಕಟ್ಟೆ ಬಳಿ ಹೆಚ್‌ಪಿ ಗ್ಯಾಸ್ ಕಚೇರಿ ಎದುರು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗದಲ್ಲಿ ವಿದ್ಯುತ್ ಕಂಬಕ್ಕೆ ಗುದ್ದಿ ನಂತರ ಆಳವಾದ ಹೊಂಡಕ್ಕೆ ಸುಮಾರು ನಾಲ್ಕು ಪಲ್ಟಿಹೊಡೆದು ಮಗುಚಿ ಬಿದ್ದಿದೆ.

ಲಾರಿ ಚಾಲಕನಿಗೆ ಬಲವಾದ ಪೆಟ್ಟಾಗಿದ್ದು ಗಾಯಗೊಂಡ ಚಾಲಕನನ್ನು ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಜಿಲ್ಲೆ ಅರಕಲಗೂಡು ಆಸ್ಪತ್ರೆಗೆ ಸಾಗಿಸಲಾಗಿದೆ. ನಗರ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಈ ಘಟನೆ ಸಂಬಂಧ ಸಂಜೆವರೆಗೂ ಯಾರು ಪೊಲೀಸರಿಗೆ ದೂರು ನೀಡಿಲ್ಲ ಎಂದು ನಗರ ಠಾಣಾಧಿಕಾರಿ ಶ್ರೀಧರ್ ತಿಳಿಸಿದ್ದಾರೆ.

ನಾಳೆ ವಿಶೇಷಚೇತನ ಯುವಕ–ಯುವತಿ ವಿವಾಹ

ರಾಜ್ಯ ಅಂಗವಿಕಲರ ಪರಿಷತ್ತಿನಿಂದ ಧನಸಹಾಯ

ಕುಶಾಲನಗರ, ಜೂ.16– ವಿಶೇಷಚೇತನ ಯುವಕ ಮತ್ತು ಯುವತಿ ಪರಸ್ಪರ ಒಪ್ಪಿ ವಿವಾಹವಾಗುತ್ತಿದ್ದಾರೆ. ಹುಟ್ಟಿನಿಂದಲೇ ಕಿವುಡ ಮತ್ತು ಮೂಕನಾದ ಧನಂಜಯ ಮತ್ತು ಅಂಜಲಿ (ಈಕೆಯೂ ಹುಟ್ಟಿನಿಂದಲೇ ಕಿವುಡಿ ಮತ್ತು ಮೂಕಿ)ಯನ್ನು ವಿವಾಹವಾಗಲು ತೀರ್ಮಾನಿಸಿದ್ದಾರೆ.

ಇವರಿಬ್ಬರ ತೀರ್ಮಾನವನ್ನು ಮೆಚ್ಚಿ ರಾಜ್ಯ ಅಂಗವಿಲಕರ ಪರಿಷತ್ತು ಅಧ್ಯಕ್ಷ ಡಿ.ಕೆ.ಸುರೇಶ್ ಕುಮಾರ್ ಹತ್ತು ಸಾವಿರ ರೂ. ಧನ ಸಹಾಯ ಮಾಡಿದ್ದಾರೆ.

ಈಚೆಗೆ ಕೂಡಿಗೆಯಲ್ಲಿ ನಡೆದ ವಿಕಲಚೇತನರ ಕಾರ್ಯಕ್ರಮದಲ್ಲಿ ರಾಜ್ಯ ಅಂಗವಿಲಕರ ಪರಿಷತ್ತು ಅಧ್ಯಕ್ಷ ಸುರೇಶ್ ಕುಮಾರ್ ಅವರ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ವಿಕಲಚೇತನರ ಕ್ಷೇಮಾಭಿವೃದ್ಧಿ ಕ್ಲಬ್ ಆವರಣದಲ್ಲಿ ಧನಂಜಯ ಹಾಗೂ ಅಂಜಲಿ ತಾಯಿ ಅವರಿಗೆ ಹತ್ತು ಸಾವಿರವನ್ನು ನೀಡಿ ಶುಭ ಹಾರೈಸಿದರು. ಇದೇ ಸಂದರ್ಭ ಜವಳಿ ವರ್ತಕ ರಮೇಶ್ ವಧು ವರರಿಗೆ ನೂತನ ವಸ್ತ್ರಕ್ಕಾಗಿ ಧನ ಸಹಾಯ ಮಾಡಿದರು. ಇವರ ಮದುವೆ ಜೂ.18 ರಂದು ಭಾನುವಾರ ಬೈಲುಕುಪ್ಪೆಯ ಶ್ರೀ ಚೌಡೇಶ್ವರಿ ದೇವಾಲಯದಲ್ಲಿ ನೆರವೇರಲಿದೆ. ಈ ಸಂದರ್ಭ ವಿಕಲಚೇತನರ ಕ್ಷೇಮಾಭಿವೃದ್ಧಿ ಕಾರ್ಯದರ್ಶಿ ಲತೇಶ್ ಕುಮಾರ್, ಪತ್ರಕರ್ತ ಎಸಳೂರು ಉದಯಕುಮಾರ್ ಹಾಗೂ ಪದಾಧಿಕಾರಿಗಳು ಇದ್ದರು.

ಭಾರತ್ ಟೈಮ್ ಲೈಮ್ ಸುಣ್ಣ ರೈತರಿಗೆ ಮಾರದಂತೆ ಕೃಷಿ ಇಲಾಖೆ ಸೂಚನೆ



ವಿರಾಜಪೇಟೆ, ಜೂ.16– ಭಾರತ್ ಟೈಮ್ ಲೈಮ್ ಸುಣ್ಣ (ಸ್ಲೇಕ್ಡ್ ಲೈಮ್) ಅನ್ನು ರೈತರಿಗೆ ಮಾರಾಟ ಮಾಡಬಾರದು ಎಂದು ಸಹಕಾರ ಸಂಘಗಳಿಗೆ ಮತ್ತು ರಸಗೊಬ್ಬರ ಮಾರಾಟಗಾರರಿಗೆ ಕೃಷಿ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

ಈ ಸುಣ್ಣವನ್ನು ಸಿಂಪಡಿಸಿದರೆ ಅಡಿಕೆ ಗಿಡಗಳು ಸುಟ್ಟು ಹೋಗುತ್ತದೆ ಅಲ್ಲದೆ, ಫಸಲು ಉದುರುತ್ತಿರುವುದಾಗಿ ರೈತರಿಂದ ದೂರುಗಳು ಬಂದಿವೆ ಎಂದು ತಿಳಿಸಿರುವ ವಿರಾಜಪೇಟೆ ತಾಲೂಕು ಸಹಾಯಕ ಕೃಷಿ ನಿರ್ದೇಶಕರು, ಒಂದು ವೇಳೆ ಈ ಸುಣ್ಣವನ್ನು ದಾಸ್ತಾನು ಮಾಡಿಟ್ಟುಕೊಂಡಿದ್ದಲ್ಲಿ ಅದನ್ನು ರೈತರಿಗೆ ಮಾರಾಟ ಮಾಡಬಾರದು. ಒಂದು ವೇಳೆ ಈ ಆದೇಶ ಉಲ್ಲಂಘಿಸಿ ಸದರಿ ಸುಣ್ಣವನ್ನು ರೈತರಿಗೆ ಮಾರಾಟ ಮಾಡಿದರೆ, ಪರವಾನಗಿಯನ್ನು ರದ್ದು ಪಡಿಸುವುದರ ಜೊತೆಗೆ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಮಾಲ್ದಾರೆಯಲ್ಲಿ ಕೊಳವೆ ಬಾವಿಗೆ ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಿ

ಪಶ್ಚಿಮಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಭೆಯಲ್ಲಿ ಶಾಸಕ ಕೆ.ಜಿ.ಬೋಪಯ್ಯ ಆಗ್ರಹ

ಮಡಿಕೇರಿ, ಜೂ.16– ಕೊಡಗು ಜಿಲ್ಲೆಯ ಮಾಲ್ದಾರೆ ವ್ಯಾಪ್ತಿಯ ಹಲವು ಕುಟುಂಬಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕಳೆದ ಏಳೆಂಟು ವರ್ಷದಿಂದ ಬಾಕಿ ಇದ್ದು, ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುಮತಿ ನೀಡುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಕೆ.ಜಿ.ಬೋಪಯ್ಯ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಾಜ್ಯ ಪಶ್ಚಿಮಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷರಾದ ಶಾಂತೆಯಂಡ ರವಿಕುಶಾಲಪ್ಪ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು. ಮಾಲ್ದಾರೆ ವ್ಯಾಪ್ತಿಯಲ್ಲಿ ಅನಾದಿ ಕಾಲದಿಂದಲೂ ವಾಸ ಮಾಡಿಕೊಂಡು ಬರುತ್ತಿರುವ ಕುಟುಂಬಗಳ ಕೊಳವೆ ಬಾವಿಗೆ ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಅನುಮತಿ ನೀಡಿರುವಾಗ ವಿದ್ಯುತ್ ಮಾರ್ಗಕ್ಕೆ ತೊಂದರೆ ನೀಡುತ್ತಿರುವುದು ಏಕೆ ಎಂದು ಅವರು ಪ್ರಶ್ನಿಸಿದರು.

ಅರಣ್ಯ ಹಕ್ಕು ಕಾಯ್ದೆಯಡಿ ಅರಣ್ಯ ಹಕ್ಕುಪತ್ರ ನೀಡಲಾಗಿದೆ. ಆದರೂ ಜಿಲ್ಲೆಯ ತಿತಿಮತಿ, ಬಾಳೆಲೆ ಮತ್ತಿತರ ಕಡೆಗಳಲ್ಲಿ ಕುಡಿಯುವ ನೀರು, ರಸ್ತೆ, ವಿದ್ಯುತ್ ಸಂಪರ್ಕಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಅವಕಾಶ ಮಾಡುತ್ತಿಲ್ಲ ಎಂಬ ಬಗ್ಗೆ ದೂರುಗಳು ಬರುತ್ತಿವೆ. ಆದ್ದರಿಂದ ಅರಣ್ಯವೂ ಉಳಿಯಬೇಕು. ಜೊತೆಗೆ ಅಲ್ಲಿ ಬದುಕುತ್ತಿರುವ ಮೂಲ ನಿವಾಸಿಗಳಿಗೆ ಮೂಲ ಸೌಲಭ್ಯವನ್ನು ಕಲ್ಪಿಸಬೇಕು. ಆ ನಿಟ್ಟಿನಲ್ಲಿ ಕಾನೂನಿನ ಇತಿಮಿತಿಯಲ್ಲಿ ಅಗತ್ಯ ಮೂಲ ಸೌಲಭ್ಯ ಕಲ್ಪಿಸಲು ಅವಕಾಶ ಮಾಡುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕೆ.ಜಿ.ಬೋಪಯ್ಯ ಅವರು ನಿರ್ದೇಶನ ನೀಡಿದರು.



ಸೆಸ್ಕ್ ಇಇ ಅಶೋಕ್ ಅವರು ಮಾಹಿತಿ ನೀಡಿ ಜಿಲ್ಲೆಯಲ್ಲಿ ಬೆಳಕು ಯೋಜನೆಯಡಿ 1354 ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇರುವ 124 ಕುಟುಂಬಗಳಲ್ಲಿ 35 ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯ ಪ್ರಗತಿಯಲ್ಲಿದೆ. 67 ಕುಟುಂಬಗಳು ಅರಣ್ಯ ಪ್ರದೇಶದಲ್ಲಿದ್ದು, ಅರಣ್ಯ ಹಕ್ಕುಪತ್ರ ಇಲ್ಲದಿರುವುದರಿಂದ ಈ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇದೆ. ಹಾಗೆಯೇ ಮಾಲ್ದಾರೆ ವ್ಯಾಪ್ತಿಯಲ್ಲಿ 22 ಕುಟುಂಬಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇದೆ ಎಂದು ಮಾಹಿತಿ ನೀಡಿದರು.

ರಾಜ್ಯ ಪಶ್ಚಿಮಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷರಾದ ಶಾಂತೆಯಂಡ ರವಿಕುಶಾಲಪ್ಪ ಅವರು ಸಭೆಯ ಆರಂಭದಲ್ಲಿ ಮಾತನಾಡಿ, ಕಾವೇರಿ ನದಿ ಪಾತ್ರವನ್ನು ಸಂರಕ್ಷಣೆ ಮಾಡುವಲ್ಲಿ ಜಿಲ್ಲಾಡಳಿತ ಅಗತ್ಯ ಕ್ರಮವಹಿಸಬೇಕಿದೆ ಎಂದು ತಿಳಿಸಿದರು.

ತಲಕಾವೇರಿಯಿಂದ ಕುಶಾಲನಗರದವರೆಗೆ ಕಾವೇರಿ ನದಿ ಪಾತ್ರದಲ್ಲಿ ಭೂ ಒತ್ತುವರಿ ಮಾಡಿಕೊಂಡಿರುವ ಸಂಬಂಧ ಸರ್ವೆ ಕಾರ್ಯ ಕೈಗೆತ್ತಿಕೊಳ್ಳಬೇಕು. ಜೊತೆಗೆ ನದಿ ಪಾತ್ರದಲ್ಲಿ ಗಿಡ–ಮರ ಬೆಳೆಸುವಲ್ಲಿ ಕ್ರಮವಹಿಸುವಂತೆ ಕಾವೇರಿ ನೀರಾವರಿ ಇಲಾಖೆ ಎಂಜಿನಿಯರ್‌ಗೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಕಾರಿ ಡಾ.ಬಿ.ಸಿ.ಸತೀಶ ಅವರು, ಕಾವೇರಿ ನದಿ ದಡದಲ್ಲಿ ಒತ್ತುವರಿ ಮಾಡಿಕೊಂಡಿದ್ದಲ್ಲಿ ಪರಿಶೀಲಿಸಬೇಕಿದೆ. ಮನೆ ಕಟ್ಟಿದ್ದಲ್ಲಿ ಗ್ರಾ.ಪಂ.ವತಿಯಿಂದ ಪರಿಶೀಲಿಸಿ ಕ್ರಮವಹಿಸಬೇಕಿದೆ ಎಂದರು.

ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಶಾಸಕರಾದ ಕೆ.ಜಿ.ಬೋಪಯ್ಯ ಅವರು, ಯಾವುದೇ ವಾಸದ ಮನೆ ನಿರ್ಮಾಣ ಮಾಡುವಾಗ ಸ್ಥಳೀಯ ಸಂಸ್ಥೆಯಿಂದ ಅನುಮತಿ ಪಡೆಯಬೇಕಿದೆ. ಅನುಮತಿ ಪಡೆದಿರುವವರಿಗೆ ಮಾತ್ರ ವಿದ್ಯುತ್ ಸಂಪರ್ಕ, ಕುಡಿಯುವ ನೀರು ಕಲ್ಪಿಸಲು ಸಾಧ್ಯ. ಆ ನಿಟ್ಟಿನಲ್ಲಿ ಕಾವೇರಿ ನದಿ ಪಾತ್ರ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ನಿಯಮಾನುಸಾರ ಕ್ರಮವಹಿಸಬೇಕಿದೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಯಕ್ರಮಗಳಿಗೆ ಇನ್ನಷ್ಟು ವೇಗ ನೀಡಬೇಕು ಎಂದು ರವಿಕುಶಾಲಪ್ಪ ಅವರು ಹೇಳಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವರಾಮ್, ಪೂವಯ್ಯ, ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ವಿರಾಜಪೇಟೆ ತಾಲೂಕು ಅಕ್ರಮ ಸಕ್ರಮ ಸಮಿತಿಯ ಅಧ್ಯಕ್ಷ ಗಿರೀಶ್ ಗಣಪತಿ, ಜಿ.ಪಂ.ಸಿಇಒ ಭಂವರ್ ಸಿಂಗ್ ಮೀನಾ, ಉಪ ಕಾರ್ಯದರ್ಶಿ ಪಿ.ಲಕ್ಷ್ಮಿ, ಲೋಕೋಪಯೋಗಿ ಇಲಾಖೆಯ ಇಇ ನಾಗರಾಜು, ತಹಶೀಲ್ದಾರ್ ಪಿ.ಎಸ್.ಮಹೇಶ್, ಗೋವಿಂದರಾಜು, ಯೋಗಾನಂದ, ಮಹೇಶ್, ಭೂದಾಖಲೆಗಳ ಸಹಾಯಕ ನಿರ್ದೇಶಕರಾದ ವಿರೂಪಾಕ್ಷ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನೆಹರು, ಇತರರು ಇದ್ದರು.

ಅರಣ್ಯ ಇಲಾಖೆಯಲ್ಲಿ ಉತ್ತಮವಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಾದ ಶಶಿ ಪಿ.ಟಿ., ಸುನಿಲ್ ಅಹ್ಮದ್, ಮಲ್ಲನಗೌಡ, ಶಿವಕುಮಾರ್, ಸುಬ್ರಾಯ, ಬಾಬು ರಾಠೋಡ ಅವರನ್ನು ಇದೇ ಸಂದರ್ಭದಲ್ಲಿ ಶಾಲೂ, ಹಾರ, ಪ್ರಮಾಣ ಪತ್ರ ನೀಡಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕೂಡಿಗೆ ಸೈನಿಕ ಶಾಲೆಯ ವಿದ್ಯಾರ್ಥಿಗಳ ಪದಗ್ರಹಣ



ಮಡಿಕೇರಿ,ಜೂ.16– ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದಷ್ಟೇ ಮುಖ್ಯವಲ್ಲ, ಅದನ್ನು ಪ್ರಾಮಾಣಿಕವಾಗಿ, ನಿಷ್ಠೆಯಿಂದ ನಿರ್ವಹಿಸಬೇಕು ಎಂದು ಕೂಡಿಗೆ ಸೈನಿಕ ಶಾಲೆ ವಿದ್ಯಾರ್ಥಿ ನಾಯಕರಿಗೆ ಸೈನಿಕ ಶಾಲಾ ಸೊಸೈಟಿಯ ನಿರೀಕ್ಷಣಾಧಿಕಾರಿ ಬ್ರಿಗೇಡಿಯರ್ ಡಾ. ಪರ್ವೀನ್ ಕುಮಾರ್ ಶರ್ಮಾ ಕರೆ ನೀಡಿದ್ದಾರೆ.

ಕೂಡಿಗೆ ಸೈನಿಕ ಶಾಲೆಯ 2022–23ನೇ ಸಾಲಿನ ವಿದ್ಯಾರ್ಥಿಗಳ ಪದಗ್ರಹಣ ಸಮಾರಂಭ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಬ್ರಿಗೇಡಿಯರ್ ಡಾ.ಪರ್ವೀನ್ ಕುಮಾರ್ ಶರ್ಮಾ, ಶಾಲೆಯ ಆವರಣದಲ್ಲಿರುವ ಯುದ್ಧ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ ಹುತಾತ್ಮ ಯೋಧರಿಗೆ ಗೌರವ ಸಮರ್ಪಿಸಿದರು.

ಬಳಿಕ ಜ್ಯೋತಿ ಬೆಳಗುವ ಮೂಲಕ ವಿದ್ಯಾರ್ಥಿಗಳ ಪದಗ್ರಹಣ ಸಮಾರಂಭಕ್ಕೆ ಚಾಲನೆ ನೀಡಲಾಯಿತು. ಇದೇ ಸಂದರ್ಭ ಶಾಲೆಯ ವಿವಿಧ ವಿಭಾಗಗಳ ನಾಯಕರಾಗಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಜವಾಬ್ದಾರಿಗಳನ್ನು ವಹಿಸಲಾಯಿತು.

ಇದೇ ಸಂದರ್ಭ ಶಾಲೆಯ ವಿವಿಧ ವಿಭಾಗಗಳ ಹಾಗೂ ವಿವಿಧ ನಿಲಯಗಳ ನಾಯಕರು ಶಾಲೆಯ ಧ್ಯೇಯ ವಾಕ್ಯವಾದ ವೀರತೆ, ದೃಢತೆ ಮತ್ತು ಪ್ರಾಮಾಣಿಕತೆಯ ತತ್ವಗಳನ್ನಾಧರಿಸಿ ಶಾಲೆಯ ಎಲ್ಲಾ ನಿಯಮ ಮತ್ತು ಕಾನೂನುಗಳಿಗೆ ಬದ್ಧರಾಗಿ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುತ್ತೇವೆಂದು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಬಾಲಕಿಯರ ಹಿಂಜರಿಕೆಯನ್ನು ಹೋಗಲಾಡಿಸುವ ಹಾಗೂ ನವೀನ ಅನುಭವವನ್ನು ನೀಡುವ ಸಲುವಾಗಿ ಜ್ಯೋತಿಯನ್ನು ಎಲ್ಲಾ ಬಾಲಕಿಯರಿಗೆ ರಿತು ಶರ್ಮ ಮತ್ತು ಪ್ರಿಯಾಂಕ ಕಣ್ಣನ್ ಅವರುಗಳು ಹಸ್ತಾಂತರಿಸುವ ಮೂಲಕ ನೆರವೇರಿಸಿದರು.

ಕಾರ್ಯಕ್ರಮದ ಕುರಿತು ಮಾತನಾಡಿದ ಬ್ರಿಗೇಡಿಯರ್ ಡಾ. ಪರ್ವೀನ್ ಕುಮಾರ್ ಶರ್ಮಾ, ನೂತನವಾಗಿ ನೇಮಕಗೊಂಡ ನಾಯಕರುಗಳು ಮಹತ್ವಾಕಾಂಕ್ಷೆ, ಕರುಣೆ, ಲಭ್ಯತೆ ಮತ್ತು ಮುಕ್ತ ಮನಸ್ಸುಳ್ಳವರಾಗಿರಬೇಕೆಂದು ಅವರು ಕರೆ ನೀಡಿದರು. ತಾವುಗಳು ಯಾವಾಗಲೂ ತಮ್ಮ ಶಾಲೆಯ ಅಧಿಕಾರಿಗಳು ಮತ್ತು ಶಿಕ್ಷಕರ ಗುಣಗಳನ್ನು ಮೈಗೂಡಿಸಿಕೊಂಡು ಸಮನ್ವಯತೆಯೊಂದಿಗೆ ಇತರೆ ಎಲ್ಲಾ ವಿದ್ಯಾರ್ಥಿಗಳಿಗೆ ಮಾದರಿಯಾಗಿರಬೇಕೆಂದು ಕಿವಿಮಾತು ಹೇಳಿದರು.

ಇದೇ ಸಂದರ್ಭ ಶಾಲೆಯಲ್ಲಿ ಪ್ರಗತಿಯಲ್ಲಿರುವ ವಿವಿಧ ಕಾಮಗಾರಿಗಳನ್ನು ವೀಕ್ಷಿಸಿದರಲ್ಲದೇ, ಶಾಲೆಯ ವಿವಿಧ ತರಬೇತಿ ವಿಭಾಗಗಳಾದ ದೈಹಿಕ ಶಿಕ್ಷಣ, ಕ್ರೀಡೆ, ಕುದುರೆ ಸವಾರಿ, ಸ್ಕೇಟಿಂಗ್ ಮೈದಾನ ಮೊದಲಾದವುಗಳನ್ನು ವೀಕ್ಷಿಸಿದರು. ಇದರೊಂದಿಗೆ ಶಾಲೆಯು ಎನ್.ಡಿ.ಎ ತರಬೇತಿಗೆ ಕೈಗೊಂಡಿರುವ ಕ್ರಮಗಳನ್ನು ಅವಲೋಕಿಸುವುದರೊಂದಿಗೆ, ಶಾಲೆಯ 10 ಮತ್ತು 12ನೇ ತರಗತಿಗಳ ಫಲಿತಾಂಶವನ್ನು ಕುರಿತು ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕರಾದ ವಿಬಿನ್ ಕುಮಾರ್, ಬೋಧಕ, ಬೋಧಕೇತರ ವರ್ಗ, ಎನ್.ಸಿ.ಸಿ ಮತ್ತು ದೈಹಿಕ ಶಿಕ್ಷಕರು ಮತ್ತು ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕಕ್ಕಬ್ಬೆ ಗ್ರಾಪಂಗೆ ಉತ್ತಮ ಸಾರ್ವಜನಿಕ ಸ್ನೇಹಿ ಪ್ರಶಸ್ತಿ

ನಾಪೋಕ್ಲು ಜೂ.16– ಮಡಿಕೇರಿ ತಾಲೂಕಿನ ಕಕ್ಕಬ್ಬೆ ಗ್ರಾಮ ಪಂಚಾಯಿತಿಯು ಪ್ರಸಕ್ತ ಸಾಲಿನ ಉತ್ತಮ ಸಾರ್ವಜನಿಕ ಸ್ನೇಹಿ ಪ್ರಶಸ್ತಿಯನ್ನು ಪಡೆದುಕೊಂಡಿದೆ.

ಕೊಡಗು ಜಿಲ್ಲಾ ಪಂಚಾಯತ್ ಮಡಿಕೇರಿ ಮತ್ತು ಪಂಚಾಯತ್ ರಾಜ್ ದಿನಾಚರಣೆಯಲ್ಲಿ ಈ ಪ್ರಶಸ್ತಿಯನ್ನು ಮಡಿಕೇರಿಯಲ್ಲಿ ಗ್ರಾಮ ಪಂಚಾಯತ್ ಪಿ.ಡಿ.ಒ ಅಶೋಕ್, ಅಧ್ಯಕ್ಷರಾದ ಕಲಿಯಂಡ ಸಂಪನ್ನರವರು ಸ್ವೀಕರಿಸಿದರು.

ಜೂ.19, ಉಚಿತ ಆರೋಗ್ಯ ತಪಾಸಣಾ ಶಿಬಿರ

ಗೋಣಿಕೊಪ್ಪ, ಜೂ.16–ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಚಿತ್ತ ಸಂಜೀವಿನಿ ಚಾರಿಟಬಲ್ ಟ್ರಸ್ಟ್ ಹಾಗೂ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಜೂ.19 ರಂದು ಗೋಣಿಕೊಪ್ಪ ವೆಲ್‌ಕೇರ್ ಡಯಾಗ್ನೊಸ್ಟಿಕ್‌ನಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಬೆಳಗ್ಗೆ 10ರಿಂದ ಮಧ್ಯಾಹ್ನ 1 ರವರೆಗೆ ವೈದ್ಯರು ತಪಾಸಣೆ ನಡೆಸಲಿದ್ದಾರೆ. ಮಾನಸಿಕ ತೊಂದರೆ, ಬುದ್ಧಿಮಾಂದ್ಯತೆ, ಮೂರ್ಛೆರೋಗ, ನಿದ್ರಾಹೀನತೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದಾಗಿದೆ.

ಮೈಸೂರು ಮಿತ್ರ ಶುಕ್ರವಾರ 17 ಜೂನ್ 2022

ಒಂದನೇ ಪುಟದಿಂದ

ಮಧು ಮಾದೇಗೌಡ ಗೆಲುವು

ಕ್ಷೇತ್ರದ ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ ತೃತೀಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಸ್ಪರ್ಧಾ ಕಣದಲ್ಲಿದ್ದ ಎಲ್ಲಾ 19 ಅಭ್ಯರ್ಥಿಗಳ ಪ್ರಥಮ ಪ್ರಾಶಸ್ತ್ಯದ ಮತ ಎಣಿಕೆ ಮುಕ್ತಾಯಗೊಂಡಾಗ ಇಂದು ಮಧು ಜಿ.ಮಾದೇಗೌಡ 38,169, ಮೈ.ವಿ.ರವಿಶಂಕರ್ 29,614 ಹಾಗೂ ಹೆಚ್.ಕೆ.ರಾಮು 19,630 ಮತ ಗಳಿಸಿದ್ದರು. ಗೆಲುವಿಗೆ ನಿಗದಿಪಡಿಸಲಾಗಿದ್ದ 46,083 ಮತಗಳ ಗುರಿಯನ್ನು ಯಾವುದೇ ಅಭ್ಯರ್ಥಿಯೂ ತಲುಪದ ಕಾರಣ ಎರಡನೇ ಪ್ರಾಶಸ್ತ್ಯದ ಮತ ಎಣಿಕೆ ಮಾಡಲಾಯಿತು. 19 ಅಭ್ಯರ್ಥಿಗಳ ಪೈಕಿ 3ನೇ ಸ್ಥಾನದಲ್ಲಿದ್ದ ಹೆಚ್.ಕೆ.ರಾಮು ಅವರ ಮತ ಪತ್ರದಲ್ಲಿ ಎರಡನೇ ಪ್ರಾಶಸ್ತ್ಯದ ಮತಗಳನ್ನು ಎಣಿಕೆ ಮಾಡಿ ಸೇರ್ಪಡೆಗೊಳಿಸಿದಾಗ ಮಧು ಜಿ.ಮಾದೇಗೌಡರಿಗೆ 45,275 ಹಾಗೂ ರವಿಶಂಕರ್‌ಗೆ 33,878 ಮತಗಳು ಬಂದಿದ್ದವು. 17 ಅಭ್ಯರ್ಥಿಗಳನ್ನು ಎಲಿಮಿನೇಷನ್ ಮಾಡಿದ ಬಳಿಕವೂ ಅತೀ ಹೆಚ್ಚು ಮತ ಗಳಿಸಿದ್ದ ಮಧು ಜಿ.ಮಾದೇಗೌಡರಿಗೆ ನಿಗದಿತ ಕೋಟಾ (46,083) ತಲುಪಲು 808 ಮತಗಳ ಕೊರತೆ ಎದುರಾಯಿತು. ಆಗ ಚುನಾವಣಾಧಿಕಾರಿ ಡಾ. ಪ್ರಕಾಶ್ ಅವರು ಭಾರತ ಚುನಾವಣಾ ಆಯೋಗ ಸಂಪರ್ಕಿಸಿ ಅವರು ನೀಡಿದ ನಿರ್ದೇಶನದಂತೆ ಎರಡನೇ ಸ್ಥಾನದಲ್ಲಿದ್ದ ಬಿಜೆಪಿಯ ಮೈ.ವಿ.ರವಿಶಂಕರ್ ಅವರ ಮತಪತ್ರದಲ್ಲಿನ ಎರಡನೇ ಪ್ರಾಶಸ್ತ್ಯದ ಮತಗಳನ್ನು ಎಣಿಸುವ ಕಾರ್ಯ ನಡೆಸಿದರು. ಮೊದಲ ಸ್ಥಾನದಲ್ಲಿದ್ದ ಮಧು ಜಿ.ಮಾದೇಗೌಡರ ಗೆಲುವಿಗೆ ಅಗತ್ಯವಿರುವ 808 ಮತಗಳು ಬರುವವರೆಗೆ ಮಾತ್ರ ಎಣಿಕೆ ಪ್ರಕ್ರಿಯೆ ನಡೆಸಿ, ಕೋಟಾ ತಲುಪುತ್ತಿದ್ದಂತೆಯೇ ಎಣಿಕೆ ಕಾರ್ಯ ನಿಲ್ಲಿಸಿ ಮಧು ಜಿ.ಮಾದೇಗೌಡರು ವಿಜೇತರಾಗಿದ್ದಾರೆಂದು ಮಧ್ಯಾಹ್ನ ಸುಮಾರು 1.30 ಗಂಟೆ ವೇಳೆಗೆ ಅಧಿಕೃತವಾಗಿ ಫಲಿತಾಂಶ ಘೋಷಿಸಿ, ವಿಜೇತ ಅಭ್ಯರ್ಥಿಗೆ ಪ್ರಮಾಣ ಪತ್ರವನ್ನು ನೀಡಿದರು.

ಬುಧವಾರ ಬೆಳಗ್ಗೆ 8 ಗಂಟೆಗೆ ಆರಂಭವಾದ ಮತ ಎಣಿಕೆ ಪ್ರಕ್ರಿಯೆ ಗುರುವಾರ ಮಧ್ಯಾಹ್ನ 2 ಗಂಟೆಗೆ ಮುಕ್ತಾಯಗೊಂಡಿತು. 30 ಗಂಟೆಗಳ ಕಾಲ ನಿರಂತರ ಮತ ಎಣಿಕೆ ನಡೆದದ್ದು ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಇತಿಹಾಸದಲ್ಲಿ ಇದೇ ಮೊದಲು ಎಂದು ಜನಪ್ರತಿನಿಧಿಗಳು ಮಾತನಾಡಿಕೊಳ್ಳುತ್ತಿದ್ದರು.

ಅಧಿಕೃತ ಫಲಿತಾಂಶದಂತೆ ಕಾಂಗ್ರೆಸ್‌ನ ಮಧು ಜಿ.ಮಾದೇಗೌಡರು 46,082 ಮತ ಗಳಿಸಿ ಜಯಶೀಲರಾದರೆ, ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಮೈ.ವಿ.ರವಿಶಂಕರ್ 33,878 ಮತ ಪಡೆದು ಎರಡನೇ ಸ್ಥಾನ ಗಳಿಸಿದರೆ, ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು 19,630 ಮತಗಳಿಗೆ ತೃಪ್ತಿ ಪಟ್ಟುಕೊಂಡು 3ನೇ ಸ್ಥಾನಕ್ಕೆ ದೂಡಲ್ಪಟ್ಟಿದ್ದಾರೆ. ಇನ್ನುಳಿದಂತೆ ರೈತ ಸಂಘ ಬೆಂಬಲಿತ ಪ್ರಸನ್ನ ಎನ್.ಗೌಡ 7,587 ಮತ ಪಡೆದು ನಾಲ್ಕನೇ ಸ್ಥಾನ ಗಳಿಸಿದರೆ, ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದು, ಪಕ್ಷೇತರರಾಗಿ ಸ್ಪರ್ಧಿಸಿದ್ದ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ಹಿಂದಿನ ಆಪ್ತ ಸಹಾಯಕ ಎನ್.ಎಸ್.ವಿನಯ್ 3,864 ಮತಗಳೊಂದಿಗೆ ಐದನೇ ಸ್ಥಾನ ಪಡೆದಿದ್ದಾರೆ. ಎಸ್‌ಡಿಪಿಐನ ರಫತುಲ್ಲಾ ಖಾನ್ 788, ವಾಟಾಳ್ ನಾಗರಾಜ್ 516, ಎನ್.ವೀರಭದ್ರಸ್ವಾಮಿ 97, ಡಾ. ಅರುಣ್‌ಕುಮಾರ್ ಜಿ.ಚಿಕ್ಕ ಗಂಡಸಿ 44, ಕಾವ್ಯಶ್ರೀ ಐರೇಶ 98, ಡಾ. ಬಿ.ಹೆಚ್. ಚೆನ್ನಕೇಶವಮೂರ್ತಿ 2,836, ಡಾ. ಪುಟ್ಟಸ್ವಾಮಿ 120, ಕೆ.ಪಿ.ಪ್ರಸನ್ನಕುಮಾರ್ 710, ಕಂದಲ್ಲಿ ಮಹೇಶ 323, ಡಾ. ಜಿ.ಸಿ.ರವೀಂದ್ರ 222, ಎನ್.ರಾಜೇಂದ್ರ ಸಿಂಗ್ ಬಾಬು ಪಾಂಡವಪುರ 22, ಎಸ್.ರಾಮು 186, ಡಾ. ಹೆಚ್.ಎಲ್.ವೆಂಕಟೇಶ 42 ಹಾಗೂ ಹೆಚ್.ಪಿ.ಸುಜಾತ ಅವರು 78 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ.

ಫಲಿತಾಂಶ ಘೋಷಣೆಯಾಗುತ್ತಿದ್ದಂತೆಯೇ ಎಣಿಕಾ ಕೇಂದ್ರದ ಹೊರಗೆ ಕಾಂಗ್ರೆಸ್ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತು. ಪ್ರಮಾಣ ಪತ್ರ ಪಡೆದು ಹೊರ ಬರುತ್ತಿದ್ದಂತೆಯೇ ಮಧು ಮಾದೇಗೌಡರಿಗೆ ಜಯಘೋಷ ಕೂಗಿ ಸಂಭ್ರಮಿಸಿ ದರು. ಸುಮಾರು 30 ತಾಸು ನಿರಂತರ ಮತ ಎಣಿಕೆಯ ಮೇಲ್ವಿಚಾರಣೆ ನಡೆಸಿದ ಚುನಾವಣಾ ವೀಕ್ಷಕ ಪೊನ್ನುರಾಜ್ ಸಮ್ಮುಖದಲ್ಲಿ ಮಧ್ಯಾಹ್ನದ ನಂತರ ಮತ ಎಣಿಕಾ ಪ್ರಕ್ರಿಯೆ ಮುಕ್ತಾಯವಾಯಿತು. ಮತ ಎಣಿಕಾ ಪ್ರಕ್ರಿಯೆಗೆ ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲಾಧಿಕಾರಿಗಳು, ಹೆಚ್ಚುವರಿ ಜಿಲ್ಲಾಧಿಕಾರಿಗಳು ಸಾಥ್ ನೀಡಿದರು.

ಜೆಡಿಎಸ್ ಅಧ್ಯಕ್ಷರನ್ನು ಬದಲಿಸಿ!!!

ಮಾಡುತ್ತೇನೆ' ಎಂದು ಪದವೀಧರ ಮತದಾರರೊಬ್ಬರು ಮತಪತ್ರದಲ್ಲಿ ಬರೆದಿದ್ದಾನೆ. 'ಯಾರೂ ದುಡ್ಡು ಕೊಟ್ಟಿಲ್ಲ' ಎಂದು ಅಭ್ಯರ್ಥಿಗಳ ವಿರುದ್ಧ ಕಿಡಿಕಾರಿರುವ ಮತದಾರರೊಬ್ಬ, ಪೆಟ್ರೋಲ್, ರಸಗೊಬ್ಬರ ಬೆಲೆ ಇಳಿಸುವಂತೆ ಮನವಿ ಮಾಡಿದ್ದಾನೆ. ಮತ್ತೊರ್ವ, ನನಗೆ ಜನಪ್ರತಿನಿಧಿಗಳ ಮೇಲೆ ವಿಶ್ವಾಸವಿಲ್ಲದ ಕಾರಣ ಸಂಪೈ ನಮೂದಿಸಿಲ್ಲ. ಸರ್ಕಾರವೂ ನಮ್ಮ ನೆರವಿಗೆ ಬರುತ್ತಿಲ್ಲ ಎಂದು ಮತಪತ್ರದಲ್ಲಿ ಬರೆದು ಪೆಟ್ಟಿಗೆಗೆ ಹಾಕಿರುವುದು ಬೆಳಕಿಗೆ ಬಂದಿದೆ.

ಅಧ್ಯಕ್ಷರನ್ನು ಬದಲಿಸಿ: ಕೆ.ಆರ್.ಪೇಟೆ ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕಿ ರಾಮರನ್ನು ಬದಲಿಸಬೇಕು. ಆತ ಸಚಿವ ನಾರಾಯಣಗೌಡರ ಬೆಂಬಲಿಗನಾಗಿದ್ದು, ಪಕ್ಷ ವಿರೋಧಿ ಚಟುವಟಿಕೆ ಮಾಡುತ್ತಿದ್ದಾನೆ. ಅದರಿಂದ ಪಕ್ಷಕ್ಕೆ ತೊಂದರೆಯಾಗುತ್ತಿದೆ ಎಂದು ಪದವೀಧರ ನೋರ್ವ ಮತಪತ್ರದ ಹಿಂಬದಿ ಖಾಲಿ ಪುಟದಲ್ಲಿ ಪತ್ರ ಬರೆದಿದ್ದಾನೆ. ಈ ರೀತಿ ತಮ್ಮ ಆಕ್ರೋಶ, ಅನಿಸಿಕೆ, ಅಭಿಪ್ರಾಯ ಬರೆದಿರುವ ಮತ ಪತ್ರಗಳನ್ನು ಅಧಿಕಾರಿಗಳು ತಿರಸ್ಕೃತ ಮತಗಳೆಂದು ತೀರ್ಮಾನಿಸಿದರು.

ಖಾತೆ ತೆರೆದ ಕಾಂಗ್ರೆಸ್

ಕ್ಷೇತ್ರದಲ್ಲಿ ಜೆಡಿಎಸ್ ಭದ್ರಕೋಟೆ ಎನಿಸಿದ್ದ ಮಂಡ್ಯ, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಆ ಪಕ್ಷದ ಅಭ್ಯರ್ಥಿಗಳೇ ಗೆಲುವು ಸಾಧಿಸುತ್ತಿದ್ದರು. ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರು ಮೂಲತಃ ಮಂಡ್ಯದವರಾಗಿದ್ದು, ತಮ್ಮ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು, ಶಿಕ್ಷಕರೊಂದಿಗಿನ ಒಡನಾಟ, ತಮ್ಮ ತಂದೆ ಜಿ.ಮಾದೇಗೌಡರ ನಿರಂತರ ಕಾವೇರಿ ನದಿ ನೀರಿನ ಹೋರಾಟ, ಕಾಂಗ್ರೆಸ್ ನಾಯಕರು, ಮುಖಂಡರ ಒಗ್ಗಟ್ಟಿನ ಪ್ರಚಾರ ಹಾಗೂ ಜೆಡಿಎಸ್‌ನಿಂದ ಸಿಡಿದೆದ್ದು ತಮ್ಮ ಪರ ಬಹಿರಂಗವಾಗಿಯೇ ಚುನಾವಣಾ ಪ್ರಚಾರ ಮಾಡಿದ ಮರಿತಿಬ್ಬೇಗೌಡರ ನಿಲುವನ್ನು ಸಮರ್ಥವಾಗಿ ಬಳಸಿಕೊಂಡು ಜಯಭೇರಿ ಗಳಿಸಿದ್ದಾರೆ. ಆ ಮೂಲಕ ಮೈಸೂರು ಭಾಗದಲ್ಲಿ ಜೆಡಿಎಸ್ ಭದ್ರಕೋಟೆಗೆ ಲಗ್ಗೆ ಇಟ್ಟಿರುವ ಕಾಂಗ್ರೆಸ್, ಜಾ.ದಳದ ಗೆಲುವಿಗೆ ಬ್ರೇಕ್ ಹಾಕಿ ಅಭ್ಯರ್ಥಿಗಳಿಗೆ ಗೆಲ್ಲುತ್ತಿರುವುದನ್ನು ಮೊಟಕುಗೊಳಿಸಿ ಮಧು ಮಾದೇಗೌಡರು ಪ್ರಥಮ ಬಾರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಖಾತೆ ತೆರೆದಿದ್ದಾರೆ.

7,901 ಮಂದಿ ತಿರಸ್ಕೃತರು

ಪೈಕಿ 99,304 ಮಂದಿ ಮತ ಚಲಾಯಿಸಿದ್ದರು. ಮತಗಳ ಎಣಿಕೆ ವೇಳೆ 7,901 ಮತಗಳು ಅನರ್ಹಗೊಂಡವು. ಕೇವಲ ಅಂಕಿಗಳನ್ನು ಮಾತ್ರ ಬರೆದು ಪ್ರಾಶಸ್ತ್ಯದ ಮತ ಚಲಾಯಿಸುವ ಸಂಬಂಧ ಸಾಕಷ್ಟು ಅರಿವು ಮೂಡಿಸಲಾಗಿತ್ತಾದರೂ, ವಿದ್ಯಾವಂತರಾದ ಪದವೀಧರರು ತಪ್ಪು ತಪ್ಪಾಗಿ ಬರೆದು ತಮ್ಮ ಅಮೂಲ್ಯ ಮತಗಳನ್ನು ಹಾಳುಗೆಡವಿದ್ದಾರೆ.

ನಿಗದಿತ ಕಾಲಂನಲ್ಲಿ ಅಭ್ಯರ್ಥಿ ಎದುರು ಅಂಕಿ ಬರೆಯುವ ಬದಲು ಅಕ್ಷರದಲ್ಲಿ ಬರೆದಿರುವುದು, ಕಾಲಂ ಬಿಟ್ಟು ಬೇರೆ ಕಡೆ ಸಂಖ್ಯೆ ನಮೂದು, ಒಂದೇ ಅಭ್ಯರ್ಥಿಗೆ ಎರಡು ಅಂಕಿ ಬರೆದಿರುವುದು, ಮುಖ ಪುಟದ ಬದಲು ಹಿಂದಿನ ಖಾಲಿ ಪುಟದಲ್ಲಿ ಮತ ಹಾಕಿರುವುದು, ತಮಗೆ ತೋಚಿದ್ದನ್ನು ಬರೆದಿರುವುದು, ಸರ್ಕಾರ, ಜನಪ್ರತಿನಿಧಿಗಳ ವಿರುದ್ಧ ಅಸಮಾಧಾನ ಹೊರ ಹಾಕಿರುವುದು, ಸಾಮಾಜಿಕ ವ್ಯವಸ್ಥೆ ಖಂಡಿಸಿ ಅಭಿಪ್ರಾಯ ಬರೆದಿರುವುದು ಎಣಿಕೆ ವೇಳೆ ಪತ್ತೆಯಾಗಿದೆ. ಒಂದೇ ಅಭ್ಯರ್ಥಿಗೆ ಎರಡು, ಮೂರು ನಮೂದು, ಯಾರಿಗೂ ಮತ ಹಾಕದೇ ಖಾಲಿ ಬಿಟ್ಟಿರುವುದು, ಅಂಕಿ ಬರೆಯದೆ ರೈಟ್, ಇಂಟು ಮಾರ್ಕ್ ಮಾಡಿರುವುದು, ಗ್ರೀನ್, ರೆಡ್ ಇಂಕ್ ಪೆನ್‌ನಲ್ಲಿ ಮತ ಚಲಾವಣೆ ಸೇರಿದಂತೆ ಹಲವು ಬಗೆಯ ಲೋಪದೋಷಗಳು ಮತ ಪತ್ರದಲ್ಲಿ ಕಂಡು ಬಂದ ಹಿನ್ನೆಲೆಯಲ್ಲಿ ಒಟ್ಟು 7,901 ಮತಗಳನ್ನು ತಿರಸ್ಕೃತಗೊಳಿಸಲಾಯಿತು. ವಿದ್ಯಾವಂತರಾದ ಪದವೀಧರರೇ ಕ್ರಮಬದ್ಧವಾಗಿ ಮತ ಚಲಾಯಿಸುವಲ್ಲಿ ಲೋಪವೆಸಗಿ ತಮ್ಮ ಹಕ್ಕಿಗೆ ಅಗೌರವ ತೋರಿಸಿ ಮತ ಕುಲಗೆಡಲು ಕಾರಣರಾಗಿರುವುದು ಪ್ರಜ್ಞಾವಂತ ನಾಗರಿಕರು ತಲೆ ತಗ್ಗಿಸುವಂತಾಗಿದೆ ಎಂದು ಸಾರ್ವಜನಿಕರು ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ.

ಜಿಲ್ಲಾಧಿಕಾರಿ ದಂಪತಿಯ ಪರಿಶ್ರಮ

ಡಾ.ಜಿ.ಸಿ.ಪ್ರಕಾಶ್, ಸಹಾಯಕ ಚುನಾವಣಾಧಿಕಾರಿ, ಮೈಸೂರು ಡಿಸಿ ಡಾ. ಬಗಾದಿ ಗೌತಮ್, ಅವರ ಪತ್ನಿ ಮಂಡ್ಯ ಡಿಸಿ ಅಶ್ವತಿ ನಿರಂತರ ಕರ್ತವ್ಯ ನಿರ್ವಹಣೆ ಮೂಲಕ ಗಮನ ಸೆಳೆದರು. ಹಾಸನ ಡಿಸಿ ಗಿರೀಶ್, ಚಾ.ನಗರ ಡಿಸಿ ಚಾರುಲತಾ ಹಾಗೂ ಎಡಿಸಿಗಳು 30 ಗಂಟೆಗಳ ನಿರಂತರ ಮತ ಎಣಿಕೆಯಲ್ಲಿ ತೊಡಗಿಸಿಕೊಂಡಿದ್ದರು. ಬುಧವಾರ ಬೆಳಗ್ಗೆ 8 ಗಂಟೆಗೆ ಆರಂಭವಾದ ಮತ ಎಣಿಕೆಯು ಗುರುವಾರ ಮಧ್ಯಾಹ್ನ 2 ಗಂಟೆಗೆ ಮುಕ್ತಾಯವಾಯಿತು. ರಾತ್ರಿ ಇಡೀ ನಿದ್ರೆ ಇಲ್ಲದೆ ಪ್ರಕ್ರಿಯೆಯಲ್ಲಿ ನಿರತರಾಗಿದ್ದ ಅಧಿಕಾರಿಗಳೊಂದಿಗೆ ಸಿಬ್ಬಂದಿ ಕೆಲಸ ಮಾಡಿ ಹಾಸುಗೊಂಡಿದ್ದರು. ಅದರಲ್ಲೂ ಮೈಸೂರು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಹೆಚ್ಚು ಜವಾಬ್ದಾರಿ ತೆಗೆದುಕೊಂಡು ಶ್ರಮಿಸುತ್ತಿದ್ದರು. ಅವರಿಗೆ ಪತ್ನಿ ಅಶ್ವತಿ ಅವರೂ ಸಾಥ್ ನೀಡಿದ್ದರು.

ಇಂದು ಮಧ್ಯಾಹ್ನದ ವೇಳೆಗೆ ಯಶಸ್ವಿಯಾಗಿ ಯಾವುದೇ ಗೊಂದಲ ಇಲ್ಲದಂತೆ ಮತ ಎಣಿಕೆ ಕಾರ್ಯ ಮುಗಿಸಿ ಫಲಿತಾಂಶ ಪ್ರಕಟಿಸಿದ ನಂತರ ನಿದ್ರೆ ಇಲ್ಲದೆ ಹಾಸುಗೊಂಡಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಸಂಜೆ ವೇಳೆ ಮನೆಗೆ ತೆರಳಿ ವಿಶ್ರಾಂತಿಗೆ ಜಾರಿದರು.

ಬಿಜೆಪಿ ಹವಾ ಸೃಷ್ಟಿಸಲು ಸಿದ್ಧತೆ

ಹಲವು ಮುಖಂಡರು ನಿನ್ನೆ ಸಭೆಯಲ್ಲಿ ಭಾಗಿಯಾಗಿದ್ದರು. ಜೂ.20, 21ರಂದು ಎರಡು ದಿನಗಳ ಕಾಲ ಬೆಂಗಳೂರು ಮತ್ತು ಮೈಸೂರಿನಲ್ಲಿ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಿ ಅವರೇ ರಾಜ್ಯದ ಮತದಾರರ ಮನ ಗೆಲ್ಲಲು ಅವರೇ ಕೆಲವು ಕಾರ್ಯಕ್ರಮ ರೂಪಿಸಿದ್ದಾರೆ. ಇದರ ಜತೆಗೆ ರಾಜ್ಯ ಘಟಕ ಇತ್ತೀಚೆಗೆ ಕಳೆದುಕೊಂಡಿರುವ ವರ್ಚಸ್ಸನ್ನು ಮರು ಸ್ಥಾಪಿಸಲು ಈ ಕಾರ್ಯಕ್ರಮಗಳನ್ನೇ ಬಂಡವಾಳವನ್ನಾಗಿ ಬಳಸಿಕೊಳ್ಳುವ ಯೋಜನೆ ರೂಪಿಸಿದೆ.

ಒಂದು ಕಾರ್ಯಕ್ರಮದಿಂದ ಇನ್ನೊಂದು ಕಾರ್ಯಕ್ರಮಕ್ಕೆ ತೆರಳುವ ಮಾರ್ಗದಲ್ಲಿ ಸರಪಳಿ ರೀತಿಯಲ್ಲಿ ನಿಂತು ಪಕ್ಷದ ಹಾಗೂ ಕೇಸರಿ ಧ್ವಜವಿಡಿದು ಅದ್ದೂರಿ ಸ್ವಾಗತ ಕೋರುವುದು. ಅದರಲ್ಲೂ ಹಳೇ ಮೈಸೂರು ಭಾಗದ ಕೇಂದ್ರಬಿಂದುವಾಗಿರುವ ಮೈಸೂರು ನಗರವನ್ನು ಸಂಪೂರ್ಣವಾಗಿ ಕೇಸರೀಕರಣಗೊಳಿಸಿ, ಈ ಭಾಗದಲ್ಲಿ ದೊಡ್ಡ ಪ್ರಮಾಣ ದಲ್ಲಿ ಮತದಾರರನ್ನು ಸೆಳೆಯುವ ಬಿಜೆಪಿಯ ಕಸರತ್ತು ಇದಾಗಿರುತ್ತದೆ.

ಮೋದಿ ಸ್ವಾಗತಕ್ಕೆ 50 ಸಾವಿರ ಮನೆಗಳಿಗೆ ಆಮಂತ್ರಣ ಪತ್ರ

ಕೆ.ಆರ್.ಕ್ಷೇತ್ರದ ಶಾಸಕ ರಾಮದಾಸರ ವಿಶೇಷ ಅಭಿಯಾನ

ಮೈಸೂರು,ಜೂ.16(ಎಂಟಿವೈ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವ ಕಾರ್ಯಕ್ರಮಕ್ಕೆ ಕೃಷ್ಣರಾಜ ಕ್ಷೇತ್ರದಿಂದ ಫಲಾನುಭವಿಗಳನ್ನು ಆಹ್ವಾನಿಸುವ ಅಭಿಯಾನಕ್ಕೆ ಜೂ.17(ಶುಕ್ರವಾರ)ರ ಬೆಳಗ್ಗೆ 10ಕ್ಕೆ ಫಲಾನುಭವಿಗಳ ಮನೆಗೆ ಗಿಡ ನೀಡಿ, ಕ್ಷೇತ್ರದ ಐದು ಸ್ಥಳದಲ್ಲಿ ಅರ್ಹರಿಗೆ ವಿವಿಧ ಯೋಜನೆಗಳ ಸೌಲಭ್ಯ ಕಲ್ಪಿಸಿಕೊಡಲು ವಿಶೇಷ ಅಭಿಯಾನ ಆರಂಭಿಸಲಾಗುತ್ತಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.20ರಂದು ಮಧ್ಯಾಹ್ನ 3.30ಕ್ಕೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಫಲಾನುಭವಿಗಳ ಆಮಂತ್ರಿಸಲು ವಿಶೇಷ ಅಭಿಯಾನ ಆರಂಭಿಸಲಾಗುತ್ತಿದೆ. ಕೇಂದ್ರ ಸರ್ಕಾರದ 202 ಯೋಜನೆಗಳ ಫಲಾನುಭವಿಗಳಾಗಿರುವ 70 ಸಾವಿರ ಮಂದಿ ಕೆ.ಆರ್.ಕ್ಷೇತ್ರದಲ್ಲಿದ್ದಾರೆ. ಅವರ ಮನೆಗೆ ತೆರಳಿ ಬಟ್ಟೆ ಬ್ಯಾಗ್‌ನಲ್ಲಿ ದಾಸವಾಳ ಅಥವಾ ತುಳಸಿಗಿಡದೊಂದಿಗೆ ಕಾರ್ಯಕ್ರಮದ ಆಹ್ವಾನ ಪತ್ರಿಕೆ ನೀಡಲಾಗುತ್ತದೆ. ಆಲನಹಳ್ಳಿಯಲ್ಲಿರುವ ಗಣಪತಿ ದೇವಾಲಯದ ಮುಂಭಾಗದಿಂದ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತದೆ. ಎರಡು ದಿನದಲ್ಲಿ ಕೆ.ಆರ್. ಕ್ಷೇತ್ರದಲ್ಲಿರುವ 50 ಸಾವಿರ ಫಲಾನುಭವಿಗಳ ಮನೆಗಳಿಗೆ ಆಮಂತ್ರಣ ಪತ್ರವನ್ನು ನೀಡಿ, ಮೋದಿಯವರ ಸ್ವಾಗತಕ್ಕೆ ಬರುವಂತೆ ಕೋರಲಾಗುತ್ತಿದೆ. ಈ ಅಭಿಯಾನದಲ್ಲಿ ಬೂತ್ ಮಟ್ಟದ ಪದಾಧಿಕಾರಿಗಳು ಹಾಗೂ ವಿವಿಧ ಮೋರ್ಚಾದ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದರು.



ಪ್ರಧಾನಿ ನರೇಂದ್ರ ಮೋದಿ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದ ಫಲಾನುಭವಿಗಳ ಆಹ್ವಾನಕ್ಕಾಗಿ ತರಿಸಿರುವ ಗಿಡಗಳನ್ನು ಶಾಸಕ ಎಸ್.ಎ.ರಾಮದಾಸ್ ಪ್ರದರ್ಶಿಸಿದರು.

ಸರ್ಕಾರಿ ಸೌಲಭ್ಯ ತಲುಪಿಸಲು ವಿಶೇಷ ಅಭಿಯಾನ: ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಬರುವಷ್ಟರಲ್ಲಿ ಕೆ.ಆರ್.ಕ್ಷೇತ್ರದಲ್ಲಿ ಇನ್ನಷ್ಟು ಮಂದಿಗೆ ಸರ್ಕಾರಿ ಸವಲತ್ತುಗಳನ್ನು ದೊರಕಿಸಿಕೊಡಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಕ್ಷೇತ್ರದ 5 ಸ್ಥಳಗಳಲ್ಲಿ ಎರಡು ದಿನ ವಿವಿಧ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ವಿಶೇಷ ಕಾರ್ಯಕ್ರಮ ರೂಪಿಸಲಾಗಿದೆ. ಕೇಂದ್ರ ಸರ್ಕಾರದ 43 ಯೋಜನೆಗಳ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಜೂ.17ರಂದು ಬೆಳಗ್ಗೆ 10.30ರಿಂದ ಸಂಜೆ 5 ಗಂಟೆವರೆಗೆ ಪಾಲಿಕೆಯ 48,56, 57, 60 ವಾರ್ಡ್ ನಿವಾಸಿಗಳಿಗೆ ಜಯನಗರದ ಪೈಲ್ವಾನ್ ಬಸವಯ್ಯ ಸಮುದಾಯ ಭವನದಲ್ಲಿ, ಪಾಲಿಕೆಯ 49, 50, 51ನೇ ವಾರ್ಡ್ ಜನರಿಗಾಗಿ ಅಗ್ರಹಾರದ ಅಕ್ಕನ ಬಳಗ ಶಾಲೆಯಲ್ಲಿ, ಪಾಲಿಕೆಯ 52, 53ನೇ ವಾರ್ಡ್ ಜನರಿಗಾಗಿ ಸಿದ್ಧಾರ್ಥನಗರದ ಸಿಐಟಿಬಿ ಚೌಲ್ಟ್ರಿಯಲ್ಲಿ ಈ ಕಾರ್ಯಕ್ರಮ ಜರುಗಲಿದೆ.

ಜೂ.18ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆವರೆಗೆ ವಾರ್ಡ್ ನಂ. 43, 47, 59, 64, 65ರ ಜನರಿಗಾಗಿ ಶ್ರೀರಾಮಪುರದ ಅನ್ನಪೂರ್ಣೇಶ್ವರಿ ಕಲ್ಯಾಣ ಮಂಟಪದಲ್ಲಿ, ವಾರ್ಡ್ ನಂ 54, 55,61, 62, 63ರ ನಿವಾಸಿಗಳಿಗಾಗಿ ವಿದ್ಯಾರಣ್ಯಪುರಂನಲ್ಲಿನ ರಾಮಲಿಂಗೇಶ್ವರ ಉದ್ಯಾನವನದಲ್ಲಿ ವಿಶೇಷ ಕಾರ್ಯಕ್ರಮ ನಡೆಯಲಿದ್ದು, ಎಲ್ಲಾ ಇಲಾಖೆಗಳ ಪಾಲ್ಗೊಳ್ಳಲಿದ್ದಾರೆ. ಈ ಅಭಿಯಾನದಲ್ಲಿ ಆಧಾರ್ ಕಾರ್ಡ್‌ನಲ್ಲಿ ಹೆಸರು, ವಿಳಾಸ ಬದಲಾವಣೆ, ಬಿಪಿಎಲ್ ಕಾರ್ಡ್, ಆಯುಷ್ಮಾನ್ ಕಾರ್ಡ್, ಸಾಮಾಜಿಕ ಭದ್ರತಾ ಯೋಜನೆಯ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ. ಇದರ ಸದುಪಯೋಗ ಪಡೆದುಕೊಳ್ಳಬಯಸುವವರು ಆಧಾರ್ ಕಾರ್ಡನ್ನು ತೆಗೆದುಕೊಂಡು ಬರುವಂತೆ ಮನವಿ ಮಾಡಿದರು.

ಮೋದಿ ಅವರ 71ನೇ ಹಾಗೂ ದೀನ್ ದಯಾಳ್ ಉಪಾಧ್ಯಾಯ ಜನ್ಮದಿನದ ಅಂಗವಾಗಿ 20 ದಿನಗಳ ಕಾಲ ಮೋದಿ ಯುಗ ಉತ್ಸವ (ಡೆವಲಪ್ಮೆಂಟ್ ಫಸ್ಟ್) ಮೂಲಕವಾಗಿ ಕೃಷ್ಣರಾಜ ಕ್ಷೇತ್ರವನ್ನು ಒಂದು ಪೈಲೆಟ್ ಪ್ರಾಜೆಕ್ಟ್ ಆಗಿ ತೆಗೆದುಕೊಂಡು ಕ್ಷೇತ್ರದಲ್ಲಿರುವ 80 ಸಾವಿರ ಮನೆಗಳಿಗೆ ಅಧಿಕಾರಿಗಳೊಂದಿಗೆ ತೆರಳಿ ಸರ್ವೆ ಮಾಡಿ ಅವರಿಗೆ ಸರ್ಕಾರದ ಸೌಲಭ್ಯದ ಅಗತ್ಯತೆ ಮನಗಂಡು, ವಿವಿಧ ಯೋಜನೆಗಳ ಮೂಲಕ ಕೆಲ ಸೌಲಭ್ಯ ಕಲ್ಪಿಸಲಾಯಿತು ಎಂದರು.

ಹೌಸಿಂಗ್ ಫಾರ್ ಆಲ್: ಕೃಷ್ಣರಾಜ ಕ್ಷೇತ್ರದಲ್ಲಿ 'ಹೌಸಿಂಗ್ ಫಾರ್ ಆಲ್' ಘೋಷಣೆಯೊಂದಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜೂ.17ರಿಂದ ಮೂರು ದಿನ 'ಪ್ರಧಾನಮಂತ್ರಿ ಅವಾಸ್' ಯೋಜನೆಗೆ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಪ್ರಮಾಣ ಪತ್ರವನ್ನು ನೀಡುವ ಕಾರ್ಯ ನಡೆಸಲಾಗುತ್ತಿದೆ. ಕೆ.ಆರ್.ಕ್ಷೇತ್ರದಲ್ಲಿ 12 ಸಾವಿರ ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮುಗಿದಿದ್ದು, 6,500 ಮನೆ ನಿರ್ಮಾಣಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುಮತಿ ದೊರೆತಿದೆ. ಆರ್ಥಿಕ ನೆರವು ನೀಡಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕೆನರಾ ಬ್ಯಾಂಕಿನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಉಳಿದ 6 ಸಾವಿರ ಫಲಾನುಭವಿಗಳಿಗೆ ಮನೆ ಮಂಜೂರು ಮಾಡುವ ನಿಟ್ಟಿನಲ್ಲಿ ಕೇಂದ್ರದ ವಸತಿ ಸಚಿವರು ಹಾಗೂ ಪ್ರಧಾನಮಂತ್ರಿಗಳ ಕಚೇರಿಗೆ ಮನವಿ ಸಲ್ಲಿಸಲಾಗಿತ್ತು. ಅದಕ್ಕೆ ಸ್ಪಂದಿಸಿರುವ ರಾಜ್ಯದ ವಸತಿ ಸಚಿವ ವಿ.ಸೋಮಣ್ಣ ಕೆ.ಆರ್.ಕ್ಷೇತ್ರಕ್ಕೆ 6 ಸಾವಿರ ಮನೆ ಮಂಜೂರು ಮಾಡಿಕೊಟ್ಟಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆ.ಆರ್.ಕ್ಷೇತ್ರ ಬಿಜೆಪಿ ಅಧ್ಯಕ್ಷ ವಡಿವೇಲು, ಪ್ರಧಾನ ಕಾರ್ಯದರ್ಶಿ ಓಂ ಶ್ರೀನಿವಾಸ್, ಪ್ರಸಾದ್‌ಬಾಬು, ಹಾಗೂ ಇನ್ನಿತರರು ಇದ್ದರು.

ಸುಗಮವಾಗಿ ನಡೆದ ಮೊದಲ ದಿನದ ಸಿಇಟಿ



ಮೈಸೂರು, ಜೂ.16(ಆರ್‌ಕೆಬಿ)– ಇಂಜಿನಿಯರಿಂಗ್, ಕೃಷಿ ವಿಜ್ಞಾನ, ಫಾರ್ಮಸಿ ಮತ್ತು ಇತರೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಎರಡು ದಿನಗಳ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಗುರುವಾರ ಮೈಸೂರಿನ 26 ಪರೀಕ್ಷಾ ಕೇಂದ್ರಗಳಲ್ಲಿ ಸುಗಮವಾಗಿ ನಡೆಯಿತು. ಮೊದಲ ದಿನ ಅಭ್ಯರ್ಥಿಗಳು ಬೆಳಗ್ಗೆ ಜೀವಶಾಸ್ತ್ರ ಮಧ್ಯಾಹ್ನ ಗಣಿತ ಪರೀಕ್ಷೆ ಬರೆದರು.

ಮೈಸೂರಿನ 26 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಪರೀಕ್ಷೆಗಳಿಗೆ ಒಟ್ಟು 11,565 ಮಂದಿ ಹೆಸರು ನೋಂದಾಯಿಸಿದ್ದು, ಆ ಪೈಕಿ ಬೆಳಗ್ಗೆ 10.30ರಿಂದ 11.50ರವರೆಗೆ ನಡೆದ ಜೀವಶಾಸ್ತ್ರ ಪರೀಕ್ಷೆಗೆ 9,381 ಮಂದಿ ಹಾಜರಾಗಿದ್ದರು. 2,184 ಮಂದಿ ಅಭ್ಯರ್ಥಿಗಳು ಗೈರು ಹಾಜರಾಗಿದ್ದರು. ಮಧ್ಯಾಹ್ನ 2.30ರಿಂದ 3.50ರವರೆಗೆ ನಡೆದ ಗಣಿತ ಪರೀಕ್ಷೆಯಲ್ಲಿ 11,219 ಮಂದಿ ಹಾಜರಾಗಿ, 346 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು.

ಕೋವಿಡ್ ನಿಯಮಗಳನ್ನು ಅನುಸರಿಸಿ ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಪರೀಕ್ಷಾ ಕೇಂದ್ರದೊಳಗೆ ಪ್ರವೇಶಿಸುವ ಮೊದಲು ಯಾವುದೇ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳು, ವಾಚ್‌ಗಳು, ಟ್ಯಾಬ್ಲೆಟ್, ಕ್ಯಾಲ್ಕುಲೇಟರ್, ಮೊಬೈಲ್ ಫೋನ್ ಇನ್ನಿತರೆ ಪರಿಕರಗಳ ಬಗ್ಗೆ ಪರೀಕ್ಷಿಸಲಾಯಿತು. ಪದವಿಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಉಪನಿರ್ದೇಶಕ ಶ್ರೀನಿವಾಸಮೂರ್ತಿ ಎಲ್ಲಾ ಪರೀಕ್ಷಾ ಕೇಂದ್ರಗಳಿಗೂ ಭೇಟಿ ನೀಡಿ, ಪರೀಕ್ಷೆಗಳು ಸುಗಮವಾಗಿ ನಡೆಯುವಂತೆ ನೋಡಿಕೊಂಡರು.

ಪೊಲೀಸರು ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಎಲ್ಲಾ ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ಪರೀಕ್ಷೆಯ ಎರಡೂ ದಿನ ಎಲ್ಲಾ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಲು ಆದೇಶಿಸಲಾಗಿದೆ.

ನಾಳೆ (ಜೂ.17) ಬೆಳಗ್ಗೆ 10.30ರಿಂದ 11.50ರವರೆಗೆ ಭೌತಶಾಸ್ತ್ರ ಮಧ್ಯಾಹ್ನ 2.30ರಿಂದ 3.50ರವರೆಗೆ ರಸಾಯನ ಶಾಸ್ತ್ರ ಪರೀಕ್ಷೆ ನಡೆಯಲಿದೆ.

ದೇಶದಾದ್ಯಂತ ಹಿಂಸಾಚಾರ: ಮೈಸೂರಲ್ಲಿ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರ ಪ್ರತಿಭಟನೆ



ಮೈಸೂರು, ಜೂ.16(ಎಂಟಿವೈ)– ಬಿಜೆಪಿಯ ನಾಯಕರಾದ ನೂಪುರ್ ಶರ್ಮಾ, ನವೀನ್ ಜಿಂದಾಲ್ ಹೇಳಿಕೆ ಖಂಡಿಸಿ ಕೆಲವರು ದೇಶದಾದ್ಯಂತ ಹಿಂಸಾಚಾರ ನಡೆಸುವ ಮೂಲಕ ಅಶಾಂತಿ ವಾತಾವರಣ ಸೃಷ್ಟಿಸಲು ಮುಂದಾಗಿದ್ದಾರೆ ಎಂದು ಆರೋಪಿಸಿ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ದೇಶದಲ್ಲಿ ಜಿಹಾದಿಗಳಿಂದ ಅಶಾಂತಿ ವಾತಾವರಣ ಕದಡುವ ಸಂಚು ನಿರಂತರವಾಗಿ ನಡೆಯುತ್ತಿದೆ. ನೂಪುರ್ ಶರ್ಮಾ, ನವೀನ್ ಜಿಂದಾಲ್ ನೀಡಿರುವ ಹೇಳಿಕೆ ಮುಂದಿಟ್ಟುಕೊಂಡು ಗಲಭೆ ನಡೆಸುತ್ತಿದ್ದಾರೆ. ಕಲ್ಲು ತೂರಾಟ ನಡೆಸಿ ಸಾರ್ವಜನಿಕ ಆಸ್ತಿಗಳನ್ನು ನಷ್ಟ ಮಾಡುತ್ತಿರುವ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮಾತನಾಡಿ, ಹಿಂದೂಗಳು ಸೌಹಾರ್ದವಾಗಿದ್ದರೂ ದ್ವೇಷವನ್ನು ಹೆಚ್ಚಿಸುವಲ್ಲಿ ಜಿಹಾದಿ ಮನಸ್ಥಿತಿಯವರು ನಿರತರಾಗಿದ್ದು, ಅವರನ್ನು ಬಂಧಿಸಬೇಕು ಎಂದರು. ಕಾರ್ಯದರ್ಶಿ ಪ್ರದೀಶ್ ಕುಮಾರ್ ಮಾತನಾಡಿದರು. ಪ್ರತಿಭಟನೆಯಲ್ಲಿ ಪದಾಧಿಕಾರಿಗಳಾದ ಡಾ.ಕೃಷ್ಣಮೂರ್ತಿ, ರಮೇಶ್, ಜಗದೀಶ್ ಹೆಬ್ಬಾರ್ ಇನ್ನಿತರರು ಪಾಲ್ಗೊಂಡಿದ್ದರು.

ಅಧ್ಯಯನಕ್ಕೆ ಪ್ರೇರಣೆಯಾದ ಶಂಕರ್ ಬಿದರಿ

ಮೈಸೂರು ವಿವಿಯಿಂದ ಪಿಹೆಚ್.ಡಿಗೆ ಪ್ರಬಂಧ ಅಂಗೀಕಾರ

ಬೆಂಗಳೂರು, ಜೂ.16– ವೀರಪ್ಪನ್ ಗ್ಯಾಂಗ್ ಸದೆ ಬಡಿದ ಪೊಲೀಸ್ ಅಧಿಕಾರಿ ಶಂಕರ್ ಎಂ ಬಿದರಿ ಇದೀಗ ಡಾಕ್ಟರೇಟ್ ಪ್ರಬಂಧ ಮಂಡನೆಗೆ ಪ್ರೇರಣೆಯಾಗಿದ್ದಾರೆ.

ಮಾಜಿ ಡಿಜಿಪಿ ಶಂಕರ ಬಿದರಿ, ಕಾಡುಗಳ್ಳ ವೀರಪ್ಪನ್ ಗ್ಯಾಂಗ್ ಅನ್ನು ಮಟ್ಟಹಾಕಿದ ಕಾರ್ಯಾಚರಣೆಯಿಂದಲೇ ಖ್ಯಾತರು. ಮೈಸೂರು ವಿಶ್ವವಿದ್ಯಾನಿಲಯದಿಂದ ತಮ್ಮ ಬಗ್ಗೆ ಡಾಕ್ಟರೇಟ್ ಪ್ರಬಂಧಕ್ಕಾಗಿ 'ಕರ್ನಾಟಕ ರಾಜ್ಯ ಪೊಲೀಸ್ ಸಂಸ್ಥೆ ಮತ್ತು ಆಡಳಿತ: ಶಂಕರ್ ಎಂ ಬಿದರಿ ಅವರ ಕೊಡುಗೆ' ಕುರಿತು ಅಧ್ಯಯನ ಮಾಡಲು ಪ್ರೇರೇಪಿಸಿದ್ದಾರೆ.

ಡಾ. ಆರ್.ಎನ್.ದಿನೇಶ್ ಮಾರ್ಗದರ್ಶನದಲ್ಲಿ ದಾಬಸ್‌ಪೇಟೆ ಠಾಣೆಯ ಇನ್ಸ್‌ಪೆಕ್ಟರ್ ಎಂ.ಬಿ. ನವೀನ್‌ಕುಮಾರ್ ರಾಜ್ಯಶಾಸ್ತ್ರ ವಿಷಯದಲ್ಲಿ ಶಂಕರ್ ಬಿದರಿ ಅವರ ಬಗ್ಗೆ ಅಧ್ಯಯನ ಮಾಡಿ ಮಂಡಿಸಿದ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿಗೆ ಅಂಗೀಕರಿಸಿದೆ. ಬಿದರಿಯವರು 1978ರಲ್ಲಿ ಐಪಿಎಸ್‌ಗೆ ಸೇರಿ 2012ರಲ್ಲಿ ನಿವೃತ್ತಿಯಾಗುವವರೆಗೆ 34 ವರ್ಷಗಳ ಕಾಲ ಸೇವೆ ಸಲ್ಲಿಸಿದರು.



ಶಂಕರ ಬಿದರಿ



ನವೀನ್ ಕುಮಾರ್

ಕರ್ನಾಟಕದಲ್ಲಿ ಇಲ್ಲಿಯವರೆಗೂ ಯಾವೊಬ್ಬ ಪೊಲೀಸ್ ಅಧಿಕಾರಿಯೂ ಪಿಎಚ್.ಡಿ ಪ್ರಬಂಧಕ್ಕೆ ಪ್ರೇರಣೆ ಆಗಿಲ್ಲ. ಪೊಲೀಸ್ ಸೇವೆಗೆ ಬಿದರಿ ಅವರ ಅಪ್ರತಿಮ ಕೊಡುಗೆಯನ್ನು ಅಧ್ಯಯನ ಮಾಡಿದ್ದು ನಿಜಕ್ಕೂ ಶ್ಲಾಘನೀಯ ಎಂದು ಎಂಎಂ ಹಿಲ್ಸ್‌ನಲ್ಲಿ ಬಿದರಿ ಅವರ ತಂಡದೊಂದಿಗೆ ಕೆಲಸ ಮಾಡಿದ ಇನ್ನೊಬ್ಬ ಖ್ಯಾತ ಪೊಲೀಸ್ ಅಧಿಕಾರಿ, ಡಿಸಿಪಿ (ನಿವೃತ್ತ) ಬಿ.ಎಂ.ಪೂಣಚ ಹೇಳಿದ್ದಾರೆ.

ಕುಖ್ಯಾತ ಕಾಡುಗಳ್ಳ ವೀರಪ್ಪನ್ ಗ್ಯಾಂಗ್ ಅನ್ನು ನಾಶಪಡಿಸಿದವರಲ್ಲಿ ಬಿದರಿಯವರು ಮೊದಲಿಗರು. ವೀರಪ್ಪನ್ ಗ್ಯಾಂಗ್ ಸಂಖ್ಯೆಯನ್ನು 200 ರಿಂದ ಕೇವಲ ಐದು ಜನರಿಗೆ ಅವರು ಇಳಿಸಿದ್ದರು. ಬಿದರಿಯವರು ತಮ್ಮ ವೃತ್ತಿಜೀವನದಲ್ಲಿ ಅತ್ಯಂತ ಕಷ್ಟಕರವಾದ ಸಂದರ್ಭ, ಸನ್ನಿವೇಶಗಳನ್ನು ನಿಭಾಯಿಸಿದ್ದಾರೆ.

ಬಾಬರಿ ಮಸೀದಿ ನೆಲಸಮ ಸಮಯದಲ್ಲಿ ಎಸ್ಪಿಯಾಗಿ ಬಳ್ಳಾರಿಯನ್ನು ಕೋಮು ಗಲಭೆ ಘಟನೆಗಳಿಂದ ಮುಕ್ತಗೊಳಿಸಿದ್ದಕ್ಕಾಗಿ ಇವರನ್ನು ಜನ ನೆನಪಿಸಿಕೊಳ್ಳುತ್ತಾರೆ. ಆ ಸಮಯದಲ್ಲಿ ಕರ್ನಾಟಕದ ಹೆಚ್ಚಿನ ಜಿಲ್ಲೆಗಳು ಭಾರೀ ಕೋಮು ಗಲಭೆಗಳಿಗೆ ಸುದ್ದಿಯಾಗಿದ್ದವು.

ಕರ್ನಾಟಕದ ಪೊಲೀಸ್ ಅಧಿಕಾರಿಗಳಲ್ಲಿ ಅತೀ ಹೆಚ್ಚು ಬಾರಿ ಗೌರವಕ್ಕೆ ಪಾತ್ರರಾದವರು ಶಂಕರ್ ಬಿದರಿ. ಎರಡು ಬಾರಿ ಶೌರ್ಯ ಪದಕವನ್ನು ಪಡೆದು, ಇತಿಹಾಸ ನಿರ್ಮಿಸಿದ್ದಾರೆ.

ಜಿಲ್ಲಾ ಶಸ್ತ್ರಚಿಕಿತ್ಸಕರಾಗಿ ಡಾ.ಅಮರನಾಥ್ ಅಧಿಕಾರ ಸ್ವೀಕಾರ

ಮೈಸೂರು, ಜೂ.15– ಮೈಸೂರು ಜಿಲ್ಲಾಸ್ಪತ್ರೆಯ ನೂತನ ಜಿಲ್ಲಾ ಶಸ್ತ್ರಚಿಕಿತ್ಸಕರಾಗಿ ಡಾ.ಅಮರನಾಥ್ ಅಧಿಕಾರ ಸ್ವೀಕರಿಸಿದರು. ಈ ಸ್ಥಾನದಲ್ಲಿ ಡಾ.ರಾಜೇಶ್ವರಿ ಅವರು ಕಾರ್ಯನಿರ್ವಹಿಸುತ್ತಿದ್ದರು. ಡಾ.ಅಮರ್‌ನಾಥ್ ಈ ಮೊದಲು ಆರೋಗ್ಯ ಇಲಾಖೆಯ ಉಪ ನಿರ್ದೇಶಕರಾಗಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿದ್ದರು.



ವಿಮಾ ಹಣಕ್ಕಾಗಿ ಅಪಘಾತ ಕಟ್ಟು ಕತೆ: ಮೂವರ ವಿರುದ್ಧ ಕೇಸ್

ಮೊಬೈಲ್ ಟವರ್ ಲೊಕೇಶನ್ ಮೂಲಕ 'ನಾಟಕ' ಬಯಲು

ಶನಿವಾರಸಂತೆ, ಜೂ.16– ವಿಮೆ ಪರಿಹಾರ ಹಣ ಪಡೆಯಲು ಅಪಘಾತವಾಗಿದೆ ಎಂದು ಸುಳ್ಳು ದೂರು ನೀಡಿದ ಆರೋಪದ ಮೇರೆಗೆ ಶನಿವಾರಸಂತೆ ಠಾಣೆ ಪೊಲೀಸರು ಮೂವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಶನಿವಾರಸಂತೆ ನಿವಾಸಿಗಳಾದ ಶಕೀಲ್ (25), ಇರ್ಫಾನ್ (22) ಮತ್ತು ಇಬ್ರಾಹಿಂ (50) ಆರೋಪಕ್ಕೆ ಗುರಿಯಾದವರು.

ವಿವರ: ಟಿಂಬರ್ ಕೆಲಸಕ್ಕೆಂದು ಇರ್ಫಾನ್ ಅವರು ತನ್ನ ತಂದೆ ಇಬ್ರಾಹಿಂ ಅವರನ್ನು ಬೈಕ್ (ಕೆಎ12 ಎಲ್5201)ನಲ್ಲಿ ಮಾ.19ರಂದು ಕರೆದೊಯ್ಯುತ್ತಿದ್ದಾಗ ಬೆಳಗ್ಗೆ 8.45ರಲ್ಲಿ ಮಾಲಂಬಿ ಬಳಿ ನಿಯಂತ್ರಣ ತಪ್ಪಿ ಬೈಕ್ ಬಿದ್ದು ಇಬ್ರಾಹಿಂ ಗಾಯಗೊಂಡಿದ್ದು, ಶನಿವಾರಸಂತೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ವೈದ್ಯರ ಸಲಹೆಯ ಮೇರೆಗೆ ಮಂಗಳೂರಿನ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿದೆ ಎಂದು ಇಬ್ರಾಹಿಂ ಪುತ್ರ ಶಕೀಲ್ ಕಳೆದ ಮಾ.19ರಂದು ಶನಿವಾರಸಂತೆ ಠಾಣೆಗೆ ದೂರು ಸಲ್ಲಿಸಿದ್ದರು.

ಅಪಘಾತ ಪ್ರಕರಣ ದಾಖಲಿಸಿಕೊಂಡ ಎಎಸ್‌ಐ ಕೆ.ಕೆ. ಶಶಿಧರ್ ತನಿಖೆ ಆರಂಭಿಸಿದಾಗ ಅಪಘಾತ ನಡೆದಿದೆ ಎನ್ನಲಾದ ಮಾ.19ರ ಬೆಳಗ್ಗೆ 8.40ರಲ್ಲಿ ಬೈಕ್ ಸವಾರ ಇರ್ಫಾನ್‌ನ ಮೊಬೈಲ್ ಶನಿವಾರಸಂತೆಯ ಟವರ್‌ನಲ್ಲಿ ಕಾರ್ಯನಿರ್ವಹಿಸಿರುವುದು ಹಾಗೂ ಅಪಘಾತದಲ್ಲಿ ಗಾಯಗೊಂಡಿದ್ದಾನೆ ಎನ್ನಲಾದ ಇಬ್ರಾಹಿಂನ ಮೊಬೈಲ್ ಅಂದು ಬೆಳಗ್ಗೆ 9.35ರಲ್ಲಿ ಗುಡುಗಳಲೆಯಲ್ಲಿ ಕಾರ್ಯನಿರ್ವಹಿಸಿರುವುದು ಮೊಬೈಲ್ ಟವರ್ ಲೊಕೇಶನ್‌ನಿಂದ ಗೊತ್ತಾಗಿದೆ. ಅಪಘಾತ ನಡೆದಿದೆ ಎನ್ನಲಾದ ಸಮಯದಲ್ಲಿ ಬೈಕ್ ಸವಾರ ಮತ್ತು ಹಿಂಬದಿ ಸವಾರ ಬೇರೆ ಬೇರೆ ಸ್ಥಳಗಳಲ್ಲಿ ಇದ್ದಾರೆ. ಅಲ್ಲದೆ, ಅಪಘಾತ ನಡೆದಿದೆ ಎಂದು ಅವರು ತಿಳಿಸಿದ್ದ ಮಾಲಂಬಿ ಬಳಿ ಈ ವ್ಯಕ್ತಿಗಳು ಇರಲಿಲ್ಲ ಎಂಬುದು ಪತ್ತೆಯಾಗಿದೆ. ಟಿಂಬರ್ ಮರ ಸಾಗಾಣಿಕೆ ಮಾಡುವಾಗ ಇಬ್ರಾಹಿಂಗೆ ಗಾಯವಾಗಿದ್ದು, ಅಪಘಾತದ ವಿಮೆ ಪರಿಹಾರ ಪಡೆಯುವ ಸಲುವಾಗಿ ಅಪಘಾತ ನಡೆದಿದೆ ಎಂದು ಸರ್ಕಾರಿ ವೈದ್ಯರಿಗೆ ಸುಳ್ಳು ಹೇಳಿಕೆಯನ್ನು ನೀಡಿ ಪೊಲೀಸ್ ಠಾಣೆಯಲ್ಲಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂಬ ಆರೋಪದ ಮೇರೆಗೆ ಮೂವರ ವಿರುದ್ಧವೂ ಭಾರತೀಯ ದಂಡ ಸಂಹಿತೆ 203ರಡಿ ಜೂ.14ರಂದು ಪ್ರಕರಣ ದಾಖಲಿಸಿಕೊಂಡು ಶನಿವಾರಸಂತೆ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಕಾಂಗ್ರೆಸ್ ವಿರುದ್ಧ ಬಿಜೆಪಿಯ ದ್ವೇಷದ ರಾಜಕಾರಣ ಹೆಚ್ಚು ದಿನ ನಡೆಯದು

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಆಕ್ರೋಶ

ಮೈಸೂರು, ಜೂ.16(ಆರ್‌ಕೆಬಿ)– ನ್ಯಾಷನಲ್ ಹೆರಾಲ್ಡ್ ವಿಚಾರದಲ್ಲಿ ಬಿಜೆಪಿ ಕಾಂಗ್ರೆಸ್ ವಿರುದ್ಧ ದ್ವೇಷದ ರಾಜಕಾರಣ ಮಾಡುತ್ತಿದೆ. ಇದರಲ್ಲಿ ಬಿಜೆಪಿಯವರು ಯಶಸ್ವಿಯಾಗಲು ಸಾಧ್ಯವಿಲ್ಲ. ಸತ್ಯಕ್ಕಾಗಿ ನಡೆಯುತ್ತಿರುವ ಈ ಅಗ್ನಿಪರೀಕ್ಷೆಯಿಂದ ರಾಹುಲ್ ಮತ್ತು ಸೋನಿಯಾ ಗಾಂಧಿ ಇನ್ನಷ್ಟು ಪ್ರಕಾಶಮಾನವಾಗಿ ಹೊರ ಹೊಮ್ಮಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ತಿಳಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಷನಲ್ ಹೆರಾಲ್ಡ್ ವಿಚಾರದಲ್ಲಿ ಯಾವುದೇ ಹಣ ವರ್ಗಾವಣೆ ಆಗಿಲ್ಲ. ದುರುಪಯೋಗವೂ ಆಗಿಲ್ಲ. ಇದೆಲ್ಲವೂ ಬಿಜೆಪಿಗೂ ತಿಳಿದಿರುವ ವಿಚಾರ. ಆದರೆ ದ್ವೇಷದ ರಾಜಕಾರಣಕ್ಕಾಗಿ ಹೀಗೆಲ್ಲಾ ವರ್ತಿಸುತ್ತಿದೆ ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು.

ರಾಹುಲ್ ಅವರನ್ನು ಇಡಿ ವಿಚಾರಣೆ ನಡೆಸುತ್ತಿರುವ ಬಗ್ಗೆ ಪ್ರಸ್ತಾಪಿಸಿದ ಅವರು, ದೆಹಲಿ ಪೊಲೀಸರು ಮಿತಿ ಮೀರಿದ ದೌರ್ಜನ್ಯ ನಡೆಸುತ್ತಿದ್ದಾರೆ. ಇದೇನು ಪೊಲೀಸ್ ರಾಜ್ಯವೇ, ಗೂಂಡಾ ರಾಜ್ಯವೇ ಎಂಬುದು ತಿಳಿಯುತ್ತಿಲ್ಲ. ಶಾಂತಿಯುತ ಪ್ರತಿಭಟನೆ ನಡೆಸುತ್ತಿರುವ ಕಾಂಗ್ರೆಸ್ ನಾಯಕರು, ಜನಪ್ರತಿನಿಧಿಗಳ ಮೇಲೆ ಪೊಲೀಸ್ ಗೂಂಡಾಗಿರಿ ನಡೆದಿದೆ. ಸೋನಿಯಾ ಗಾಂಧಿ ತಮ್ಮ ಆಸ್ತಿ ಪಾಸ್ತಿಯನ್ನು ದೇಶದ ಜನರಿಗಾಗಿ



ತ್ಯಾಗ ಮಾಡಿದ್ದಾರೆ. ವಿರೋಧ ಪಕ್ಷಗಳನ್ನು ದಮನ ಮಾಡುವ ಪ್ರಯತ್ನ ಬಿಜೆಪಿ ಮಾಡುತ್ತಿದೆ. ಇಂತಹ ಸೇಡಿನ ರಾಜಕಾರಣ ಹೆಚ್ಚು ದಿನ ನಡೆಯುವುದಿಲ್ಲ. ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದರು.

ವಿಧಾನಸಭಾ ಚುನಾವಣೆಗೆ ದಿಕ್ಸೂಚಿ ಫಲಿತಾಂಶ: ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಪದವೀಧರ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರನ್ನು ಆಯ್ಕೆ ಮಾಡಿದ್ದಾರೆ. ಪ್ರಜ್ಞಾವಂತ ಪದವೀಧರ ಮತದಾರರು ಬಿಜೆಪಿಗೆ ತಕ್ಕ ಪಾಠ ಕಲಿಸಿದ್ದಾರೆ. ಇದು ಇಲ್ಲಿಗಷ್ಟೇ ಮುಗಿಯುವುದಿಲ್ಲ. ಮುಂಬರುವ ವಿಧಾನಸಭಾ ಚುನಾವಣೆಗೆ ಇದು ದಿಕ್ಸೂಚಿಯಾಗಲಿದೆ ಎಂದು ತಿಳಿಸಿದರು.

ನಿರುದ್ಯೋಗಿಗಳಿಗೆ ಉದ್ಯೋಗ ನೀಡದೆ ಪಕೋಡ ಮಾರಿ ಎಂದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅವರ ಮೈಸೂರು ಭೇಟಿ ಸಂದರ್ಭದಲ್ಲಿ ಪದವೀಧರ ಮತದಾರರು ಉತ್ತಮ ಉಡುಗೊರೆ ನೀಡಿದ್ದಾರೆ. ಪಕ್ಷದ ಸಂಘಟಿತ ಹೋರಾಟದ ಫಲವಾಗಿ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಅಭೂತಪೂರ್ವ ಫಲಿತಾಂಶ ಬಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಮತದಾರರು ಮತ್ತು ಪಕ್ಷದ ನಾಯಕರು, ಮುಖಂಡರು, ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.

ಸಿದ್ದರಾಮಯ್ಯ ವಿರುದ್ಧ ಮಾತನಾಡುವ ನೈತಿಕತೆ ಪ್ರತಾಪ್‌ಸಿಂಹಗಿಲ್ಲ: ವಿರೋಧ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿರುವ ಪ್ರತಾಪ್‌ಸಿಂಹ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಧ್ರುವನಾರಾಯಣ್, ಇದು ಅವರ ಅಪ್ರಬುದ್ಧ ಹಾಗೂ ಅಜ್ಞಾನದ ಹೇಳಿಕೆಗಳಾಗಿವೆ. ಸಿದ್ದರಾಮಯ್ಯ ಹಿರಿಯ ರಾಜಕಾರಣಿ. ಅವರ ವಿರುದ್ಧ ಹೇಳಿಕೆ ನೀಡುವಷ್ಟು ನೈತಿಕತೆ ಪ್ರತಾಪ್‌ಸಿಂಹಗೆ ಇಲ್ಲ. ಬಿಜೆಪಿ ನಾಯಕರ ಆಂತರಿಕ ಕಚ್ಚಾಟದಿಂದ ಮೈಸೂರಿನ ಗೌರವ ಹಾಳಾಗುತ್ತಿದೆ. ನಮ್ಮ ಸರ್ಕಾರ ಇದ್ದಾಗಲೇ 50 ಸಾವಿರ ಯೋಗಪಟುಗಳು ಪ್ರದರ್ಶನ ನೀಡಿದ್ದು ಪ್ರತಾಪ್‌ಸಿಂಹರಿಗೆ ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.

ಮೋದಿ ಸಮ್ಮುಖದಲ್ಲಿ ಸಾವಿರಾರು ಮಂದಿ ಯೋಗ ಪ್ರದರ್ಶನದಿಂದ ಕೊರೊನಾ ಹರಡುವುದಿಲ್ಲವೇ?: ಕಾಂಗ್ರೆಸ್ ಪ್ರತಿಭಟನೆಯಿಂದ ಕೊರೊನಾ ಹರಡುತ್ತದೆ. ಹಾಗೇನಾದರೂ ಆದರೆ ಕಾಂಗ್ರೆಸಿಗರನ್ನೇ ಹೊಣೆ ಮಾಡಲಾಗುವುದು ಎಂಬ ಆರೋಗ್ಯ ಸಚಿವ ಡಾ.ಸುಧಾಕರ್ ಹೇಳಿಕೆಗೆ ಧ್ರುವನಾರಾಯಣ್ ಆಕ್ಷೇಪ ವ್ಯಕ್ತಪಡಿಸಿದರು. ಜೂ.21ರಂದು ಪ್ರಧಾನಿ ಮೋದಿ ಸಮ್ಮುಖದಲ್ಲಿ 15 ಸಾವಿರಕ್ಕೂ ಹೆಚ್ಚು ಮಂದಿಯನ್ನು ಸೇರಿಸಿ ಯೋಗದಲ್ಲಿ ಪಾಲ್ಗೊಳ್ಳುತ್ತಿದ್ದು, ಅದರಿಂದ ಕೊರೊನಾ ಹರಡುವುದಿಲ್ಲವೇ?

ಮರಿತಿಬ್ಬೇಗೌಡರಿಗೆ ಕಾಂಗ್ರೆಸ್ ಆಹ್ವಾನ: ಕಾಂಗ್ರೆಸ್ ಅಭ್ಯರ್ಥಿ ಗೆಲುವಿನಲ್ಲಿ ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡರ ಪಾತ್ರವೂ ಇದ್ದು, ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆಯೇ ಎಂಬ ಪ್ರಶ್ನೆಗೆ, ಅವರು ಪಕ್ಷಕ್ಕೆ ಬರುವುದಾದರೆ ಕಾಂಗ್ರೆಸ್ ಆಹ್ವಾನವಿದೆ. ಅಂತಿಮ ನಿರ್ಧಾರ ಅವರದ್ದಾಗಿದೆ ಎಂದು ಹೇಳಿದರು.


ಅರ್ಜಿ ಆಹ್ವಾನ

ತಿ.ನರಸೀಪುರ, ಜೂ.16(ಎಸ್‌ಕೆ)– ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ 18 ರಿಂದ 35 ವರ್ಷದೊಳಗಿನ ನಿರುದ್ಯೋಗ ಮಹಿಳೆಯರು, ಅಂಗವಿಕಲರು, ವಿಧವೆಯರು, ನಿರ್ಗತಿಕರು, ಲಿಂಗತ್ವ ಅಲ್ಪಸಂಖ್ಯಾತರು, ದಮನಿತ ಮಹಿಳೆಯರಿಗೆ CRM Domestic Noc-Voice ಉಚಿತ ಕಂಪ್ಯೂಟರ್ ತರಬೇತಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತರು ಅರ್ಜಿಯನ್ನು ವಿಶ್ವಾಸ್ ಸಾಫ್ಟ್ ಟೆಕ್, ಕೌಶಲ್ಯ ಕರ್ನಾಟಕ ತರಬೇತಿ ಸಂಸ್ಥೆ, ನಂ 108/1 ವಿದ್ಯೋದಯ ಕಾಲೇಜು ಸರ್ಕಲ್, ತಿ.ನರಸೀಪುರ ಅವರಿಗೆ ಅಥವಾ ಆನ್‌ಲೈನ್ ವಿಳಾಸ www.kaushalkar.com ನಲ್ಲಿ ಜೂ.20ರವರೆಗೆ ಸಲ್ಲಿಸಬಹುದು. ಮಾಹಿತಿಗೆ ಮೊ: 9880968946 ಅಥವಾ 08227–297096 ಸಂಪರ್ಕಿಸಬಹುದು.

ತುಮಕೂರಿನ ಗುಬ್ಬಿಯಲ್ಲಿ ದಸಂಸ ಮುಖಂಡನ ಹತ್ಯೆ ಪ್ರಕರಣ

ದುಷ್ಕರ್ಮಿಗಳ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ನಂಜನಗೂಡು, ಜೂ.16(ಸುದರ್ಶನ್)– ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ ದಲಿತ ಸಂಘರ್ಷ ಸಮಿತಿಯ ಮುಖಂಡ ನರಸಿಂಹಮೂರ್ತಿ ಅವರನ್ನು ಬರ್ಬರವಾಗಿ ಕೊಲೆ ಮಾಡಿರುವ ದುಷ್ಕರ್ಮಿಗಳಿಗೆ ಗಲ್ಲುಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿ ನಗರದಲ್ಲಿ ಗುರುವಾರ ದಲಿತ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ನಡೆಯಿತು.

ನಗರದ ತಾಲೂಕು ಕಚೇರಿ ಮುಂಭಾಗ ಜಮಾವಣೆಗೊಂಡ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಸಂಘಟನೆಗಳ ಕಾರ್ಯದರ್ಶಿ ನಗರ್ಲೆ ವಿಜಯ್‌ಕುಮಾರ್ ಮಾತನಾಡಿ, ಸ್ವತಂತ್ರ ಬಂದು 75 ವರ್ಷಗಳಾದರೂ ದೇಶದಲ್ಲಿ ಇನ್ನೂ ವರ್ಣಾಶ್ರಮ ನಿಯಮಾವಳಿಯೊಳಗೆ ಬದುಕುವಂತಹ ಶೋಚನೀಯ ಸ್ಥಿತಿ ದಲಿತರಿಗೆ ಎದುರಾಗಿದೆ. ಈ ಅಸಮಾನತೆಯನ್ನು ಕೊನೆಗಾಣಿಸಿ ಸಮ ಸಮಾಜ ನಿರ್ಮಿಸಲು ದಸಂಸ ಸಫಲತೆ ಕಾಣುತ್ತಿದೆ. ಇದನ್ನು ಅರಿತ ಸವರ್ಣೀಯ ಮನಸುಗಳು ಚಳುವಳಿ ಹತ್ತಿಕ್ಕುವ ಉದ್ದೇಶದಿಂದ ಚಳವಳಿಯ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸುತ್ತಿದ್ದಾರೆ ಎಂದು ದೂರಿದರು.

ಚಳವಳಿ ಹತ್ತಿಕ್ಕುವ ಘಟನೆಗಳಿಗೆ ಕಡಿವಾಣ ಹಾಕುವಲ್ಲಿ ಸರ್ಕಾರ ವಿಫಲವಾಗಿವೆ. ಕಾನೂನು ವ್ಯವಸ್ಥೆ ಕಾಪಾಡುವಲ್ಲಿ ವಿಫಲರಾಗಿರುವ ಗೃಹಮಂತ್ರಿ ಅರಗಜ್ಞಾನೇಂದ್ರ ಅವರು ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಗುಬ್ಬಿ ತಾಲೂಕಿನಲ್ಲಿ ದಸಂಸ ಕಾರ್ಯಕರ್ತ ನರಸಿಂಹಮೂರ್ತಿ ಅವರನ್ನು ಕೊಲೈದಿರುವ ದುಷ್ಕರ್ಮಿಗಳನ್ನು ಬಂಧಿಸಿ, ಗಲ್ಲಿಗೇರಿಸಬೇಕು. ನರಸಿಂಹಮೂರ್ತಿ ಅವರ ಕುಟುಂಬಸ್ಥರಿಗೆ ಸರ್ಕಾರಿ ಉದ್ಯೋಗ ನೀಡಿ, 50 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಬಳಿಕ ಉಪ ತಹಸೀಲ್ದಾರ್ ಬೈರಯ್ಯ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸುರೇಶ್, ಸಂಚಾಲಕರಾದ ಚುಂಚನಹಳ್ಳಿ ಮಲ್ಲೇಶ್, ಮಲ್ಲಹಳ್ಳಿ ನಾರಾಯಣ, ಬೊಕ್ಕಹಳ್ಳಿ ಲಿಂಗಯ್ಯ, ಪುಟ್ಟಸ್ವಾಮಿ, ಶಂಕರಪುರ ಮಂಜು, ಯಶವಂತ್ ಸೇರಿದಂತೆ ದಸಂಸ ಕಾರ್ಯಕರ್ತರು ಇದ್ದರು.

ಪಿ.ಪಟ್ಟಣದಲ್ಲಿ ಅರೆಸೇನಾ ಪಡೆಯಿಂದ ಪಥಸಂಚಲನ



ಪಿರಿಯಾಪಟ್ಟಣ, ಜೂ.16(ವೀರೇಶ್)– ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಗಲಭೆ ಹಾಗೂ ಕೆಲವೆಡೆ ನಡೆಯುತ್ತಿರುವ ಧರ್ಮ ಸಂಘರ್ಷದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತೆವಹಿಸಲು ಗುರುವಾರ ಅರೆ ಸೇನಾಪಡೆಯಿಂದ ಪಥಸಂಚಲನ ನಡೆಯಿತು.

ಜನಸಾಮಾನ್ಯರ ಜೊತೆ ನಾವಿದ್ದೇವೆ ಹಾಗೂ ಸಮಾಜಘಾತುಕ ಶಕ್ತಿಗಳಿಗೆ ಎಚ್ಚರಿಕೆ ನೀಡುವ ಸಂಬಂಧವಾಗಿ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಪ್ರದೇಶಗಳಲ್ಲಿ ಹಾಗೂ ಪ್ರಮುಖ ಬೀದಿಗಳಲ್ಲಿ ಅರೆಸೇನಾ ಪಡೆ ಹಾಗೂ ಪೊಲೀಸ್ ಸಿಬ್ಬಂದಿ ಪಥಸಂಚಲನ ನಡೆಸಿ ಅರಿವು ಮೂಡಿಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಈ ವೇಳೆ ಇನ್‌ಸ್ಪೆಕ್ಟರ್ ಜಗದೀಶ್, ಪ್ರಕಾಶ್, ಸಬ್ ಇನ್‌ಸ್ಪೆಕ್ಟರ್‌ಗಳಾದ ಪುಟ್ಟರಾಜು, ಪ್ರಕಾಶ್ ಎತ್ತಿನಬಂಡಿ, ಬಸವರಾಜ ಸಂಗಪ್ಪ ಉಪ್ಪಿನ ದಿಣ್ಣೆ, ಗೋವಿಂದರಾಜು, ಸುರೇಶ್, ಸಿಬ್ಬಂದಿಗಳಾದ ಚಿಕ್ಕನಾಯಕ, ವೀರೇಂದ್ರ ಕುಮಾರ್, ಜಮೀರ್, ಅನಂತ ಇದ್ದರು.

ಡೇರಿ ಸರ್ವತೋಮುಖ ಅಭಿವೃದ್ಧಿಗೆ ಒತ್ತು: ಜಿ.ಕೆ.ಮಹದೇವ್



ಭೇರ್ಯ, ಜೂ.16– ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಗ್ರಾಮದ ಹಾಲಿನ ಡೇರಿಯ ಸಭಾಂಗಣದಲ್ಲಿ ಗುರುವಾರ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘದ ನೂತನ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ಸಂಘದ ನೂತನ ಅಧ್ಯಕ್ಷ ಜಿ.ಕೆ.ಮಹದೇವ್ ಮಾತನಾಡಿ, ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸದಾ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕೆ.ಆರ್.ನಗರ ತಾಲೂಕಿನ ವಿವಿಧ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘದ ನೂತನ ಪದಾಧಿಕಾರಿಗಳು ಹಾಗೂ ವಿವಿಧ ಹಾಲಿನ ಡೇರಿಯ ಕಾರ್ಯದರ್ಶಿಗಳನ್ನು ಅಭಿನಂದಿಸಲಾಯಿತು.

ಅಧ್ಯಕ್ಷತೆಯನ್ನು ಹರದನಹಳ್ಳಿ ಡೇರಿಯ ಅಧ್ಯಕ್ಷ ಹೆಚ್.ಟಿ.ರವಿ ವಹಿಸಿದ್ದರು.

ಕೆ.ಆರ್.ನಗರ ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘದ ಉಪಾಧ್ಯಕ್ಷ ಬಿ.ಪಿ.ದಿನೇಶ್, ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಗಿರೀಶ್, ಸಹ ಕಾರ್ಯದರ್ಶಿ ಬಿ.ಪಿ.ಲೋಕೇಶ್, ಖಜಾಂಚಿ ಎಲ್.ಎಂ.ಮಂಜುನಾಥ್, ಸಂಘಟನಾ ಕಾರ್ಯದರ್ಶಿ ಸಿ.ಜೆ.ರಾಜಲಕ್ಷ್ಮೀ, ಜಂಟಿ ಕಾರ್ಯದರ್ಶಿ ಹೆಚ್.ಸಿ.ಮಹೇಶ್, ನಿರ್ದೇಶಕರಾದ ಹೆಚ್.ಪಿ.ಜಲೇಂದ್ರ, ರಂಗಪ್ಪ, ಜಿ.ಎಸ್.ನಾಗೇಶ್, ಎಂ.ಎಸ್.ರೇಷ್ಮಾ, ಹೆಚ್.ಆರ್.ಪ್ರಸನ್ನ, ಕೆ.ಎನ್.ಬಸವಣ್ಣ, ಹರದನಹಳ್ಳಿ ಸಂಘದ ಕಾರ್ಯದರ್ಶಿ ಗಣೇಶ ಸೇರಿದಂತೆ ತಾಲೂಕಿನ ವಿವಿಧ ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿ ಉಪಸ್ಥಿತರಿದ್ದರು.

ಮುತ್ತಲವಾಡಿ ಗ್ರಾಪಂ ಉಪಾಧ್ಯಕ್ಷರಾಗಿ ಸಿದ್ದಮ್ಮ ಆಯ್ಕೆ



ತಿ.ನರಸೀಪುರ, ಜೂ.16(ಎಸ್‌ಕೆ)– ತಾಲೂಕಿನ ಮುತ್ತಲವಾಡಿ ಗ್ರಾಪಂ ಉಪಾಧ್ಯಕ್ಷರಾಗಿ ಮುಸುವಿನಕೊಪ್ಪಲು ಗ್ರಾಮದ ಸಿದ್ದಮ್ಮ ಲಾಟರಿ ಮೂಲಕ ಆಯ್ಕೆಗೊಂಡರು.

ಈ ಹಿಂದೆ ಉಪಾಧ್ಯಕ್ಷರಾಗಿ 15 ತಿಂಗಳ ಅಧಿಕಾರಾವಧಿ ಪೂರೈಸಿದ ಕೃಷ್ಣಾಪುರ ಗ್ರಾಮದ ಸದಸ್ಯೆ ಪುಷ್ಪ ಅವರು ಆಂತರಿಕ ಒಪ್ಪಂದದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಡೆಯಿತು.

ಪಂಚಾಯಿತಿ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಸಿದ್ದಮ್ಮ ಹಾಗೂ ಕೈಯ್ಯಂಬಳ್ಳಿ ನಾಗಮಣಿ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣೆ ನಡೆಸಲು ನಿರ್ಧರಿಸಲಾಯಿತು. ಒಟ್ಟು 16 ಸದಸ್ಯರ ಬಲವುಳ್ಳ ಪಂಚಾಯಿತಿಯಲ್ಲಿ ಎಲ್ಲಾ ಸದಸ್ಯರು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

ಲಾಟರಿ ಮೂಲಕ ಅದೃಷ್ಟ!: ಚುನಾವಣೆಯಲ್ಲಿ ಮತದಾನ ನಡೆದು ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಗಳಿಬ್ಬರಿಗೂ ತಲಾ 8 ಮತಗಳು ಬಂದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಹೆಚ್.ಮಮತಾ ಲಾಟರಿ ಮೂಲಕ ಉಪಾಧ್ಯಕ್ಷರ ಆಯ್ಕೆಗೆ ಅವಕಾಶ ಕಲ್ಪಿಸಿದರು. ಲಾಟರಿಯಲ್ಲಿ ಸಿದ್ದಮ್ಮರಿಗೆ ಅದೃಷ್ಟ ಒಲಿದು ಬಂತು.

ಈ ವೇಳೆ ಅಧ್ಯಕ್ಷ ಕೆ.ಎಂ.ರಮೇಶ್, ಸದಸ್ಯರಾದ ಶಿವಸ್ವಾಮಿ, ನಿಕಟ ಪೂರ್ವ ಉಪಾಧ್ಯಕ್ಷೆ ಪುಷ್ಪ, ನಾಗರತ್ನಮ್ಮ, ಪಿ.ಮಹದೇವಯ್ಯ, ಎಂ.ನಾಗೇಶ್, ನಾಗಮಣಿ, ಆರ್.ಸರಸ್ವತಿ, ಕೆ.ಎನ್.ಅಶೋಕ್, ಎಂ.ರೇಖಾ, ಹೆಚ್.ಎಂ. ಮಹಾಲಿಂಗಸ್ವಾಮಿ, ಮಂಗಳಮ್ಮ, ಮಂಜುಳಾ, ಪ್ರಕಾಶ್, ಎಸ್.ಸಿದ್ದರಾಜು, ಪಿಡಿಓ ಆರ್.ನಿರ್ಮಲಾ, ಕಾರ್ಯದರ್ಶಿ ಆರ್.ಪದ್ಮ ಸೇರಿದಂತೆ ಗ್ರಾಮದ ಮುಖಂಡರು ಇತರರು ಹಾಜರಿದ್ದರು.

ಬಿಡುಗಲಿ ಅಂಗನವಾಡಿ ಕೇಂದ್ರಕ್ಕೆ ಚೇರು, ಜಮಖಾನ ವಿತರಣೆ



ಸರಗೂರು, ಜೂ.16(ನಾಗೇಶ್)– ಪಟ್ಟಣದ ಬಿಡುಗಲಿನಲ್ಲಿರುವ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಕ್ರೇಡಿಟ್ ಆಕ್ಸಿಸ್ ಗ್ರಾಮೀಣ್ ಲಿಮಿಟೆಡ್‌ನ ಗ್ರಾಮೀಣ ಕೂಟ ಸಂಸ್ಥೆಯಿಂದ ಚೇರು, ಜಮಖಾನ ಸೇರಿದಂತೆ ಇನ್ನಿತರ ಪರಿಕರಗಳನ್ನು ವಿತರಿಸಲಾಯಿತು.

ಸಂಸ್ಥೆಯ ವಲಯ ಅಧಿಕಾರಿ ಎಂ.ಕೆ.ಲೋಕೇಶ್ ಹಾಗೂ ಪ್ರಾದೇಶಿಕ ವ್ಯವಸ್ಥಾಪಕ ಮುತ್ತುರಾಜ್ ಅವರ ಮಾರ್ಗದರ್ಶನದೊಂದಿಗೆ ನಂಜನಗೂಡು ಪ್ರಾದೇಶಿಕ ವ್ಯವಸ್ಥಾಪಕ ಬಿ.ಕೆ.ಉಮೇಶ್ ಪರಿಕರಗಳನ್ನು ವಿತರಿಸಿದರು. ಈ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೇಲ್ವಿಚಾರಕಿ ರಚಿತಾ, ಶಾಖೆ ವ್ಯವಸ್ಥಾಪಕ ಪಿ.ಸುರೇಶ್, ಆರ್.ಭುಜಂಗಪ್ಪ ಪಪಂ ಸದಸ್ಯ ಚಲುವಕೃಷ್ಣ, ಸಂಸ್ಥೆಯ ಸಿಬ್ಬಂದಿಗಳಾದ ಪ್ರಿಯಾ, ಮಹೇಂದ್ರ, ಕಿರಣ್, ಬಸವರಾಜು, ವಿಜಯ್, ನಂದಕುಮಾರ್, ಅಂಗನವಾಡಿ ಕಾರ್ಯಕರ್ತೆಯರಾದ ಹೆಚ್.ಎಂ.ಯಮುನಾ, ಶಿವರಂಜನಿ, ಚಿಕ್ಕಹನುಮ್ಮ, ಸುಮಾ, ರಂಗಲಕ್ಷ್ಮೀ, ಮಂಜುಳಾ, ಚೆಲುವಮ್ಮ, ಆಶಾ, ರತ್ನಮ್ಮ, ಭವಾನಿ ಸೇರಿದಂತೆ ಇನ್ನಿತರರು ಹಾಜರಿದ್ದರು.

ಕ್ಯಾತನಹಳ್ಳಿ ಗ್ರಾಪಂ ಅಧ್ಯಕ್ಷೆ ಮಾಲತಿ ಪದಚ್ಯುತಿ



ಹೆಚ್.ಡಿ.ಕೋಟೆ, ಜೂ.16(ಮಂಜು)– ತಾಲೂಕಿನ ಕ್ಯಾತನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಾಲತಿ ಅವರನ್ನು ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸಿ ಪದಚ್ಯುತಿಗೊಳಿಸಿದರು. ಅಧ್ಯಕ್ಷೆ ಮಾಲತಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಕೈಗೊಂಡು ಕಳೆದ ತಿಂಗಳು ಕೆಲವು ಸದಸ್ಯರು ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ಹಿನ್ನೆಲೆಯಲ್ಲಿ ಬುಧವಾರ ಗ್ರಾಪಂ ಕಚೇರಿಯಲ್ಲಿ ಉಪವಿಭಾಗಾಧಿಕಾರಿ ಅಧ್ಯಕ್ಷತೆಯಲ್ಲಿ ಅವಿಶ್ವಾಸ ಮಂಡನೆ ಸಭೆ ನಡೆಯಿತು.

ಸದಸ್ಯರಾದ ಪ್ರಸನ್ನಕುಮಾರ್, ಬಸವರಾಜು, ಸಿದ್ದೇಗೌಡ, ಕೃಷ್ಣಮೂರ್ತಿ, ರತ್ನಮ್ಮ, ಸುನೀತಾ, ಮಹದೇವಮ್ಮ, ರಾಜೇಗೌಡ, ಮಲ್ಲಿಕಾರ್ಜುನ್, ಸೋಮಣ್ಣ ಅವರು ಅಧ್ಯಕ್ಷೆ ಮಾಲತಿ ವಿರುದ್ಧ ಅವಿಶ್ವಾಸ ಮಂಡನೆ ಪರ ಮತ ಚಲಾಯಿಸಿದರು.

ಪಂಚಾಯತಿಯಲ್ಲಿ ಒಟ್ಟು 13 ಸದಸ್ಯರ ಪೈಕಿ ಅಧ್ಯಕ್ಷರ ಪರವಾಗಿ ಉಪಾಧ್ಯಕ್ಷರಾದ ಸುನೀತಾ, ಸದಸ್ಯರಾದ ಪುಟ್ಟರತ್ನ, ಕೆಂಪಮ್ಮ, ಗೈರು ಹಾಜರಾಗುವ ಮೂಲಕ ಬೆಂಬಲ ಸೂಚಿಸಿದರು. ಆದರೆ, ಅವಿಶ್ವಾಸ ಮಂಡನೆ ಪರವಾಗಿ 9 ಸದಸ್ಯರು ಬೆಂಬಲ ವ್ಯಕ್ತಪಡಿಸಿದ್ದರಿಂದ ಅಧ್ಯಕ್ಷೆ ಮಾಲತಿ ಅಧಿಕಾರದಿಂದ ಕೆಳಗಿಳಿಯುವಂತೆ ಆಯಿತು.

ಹೈನುಗಾರಿಕೆ ಮಹತ್ವದ ಬಗ್ಗೆ ಮಕ್ಕಳಿಗೆ ಮಾಹಿತಿ



ಹನಗೋಡು, ಜೂ.16(ಮಹೇಶ್)– ಹರಳಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಿಂದ ಗ್ರಾಮದ ಶಾಲಾ ಮಕ್ಕಳಿಗೆ ಹೈನುಗಾರಿಕೆ ಮಹತ್ವ ಮತ್ತು ಲಾಭದ ಬಗ್ಗೆ ತಿಳಿಸಲು ಮಕ್ಕಳನ್ನು ಶಾಲೆಯಿಂದ ಹಾಲಿನ ಡೈರಿಗೆ ಕರೆತಂದು ಮಾಹಿತಿ ನೀಡಲಾಯಿತು.

ಡೈರಿಯ ಕಾರ್ಯದರ್ಶಿ ಹಾಗೂ ಗ್ರಾಪಂ ಸದಸ್ಯೆ ಸ್ವಪ್ನ ಚಂದ್ರಶೇಖರ್ ಮಾತನಾಡಿ, ಹಾಲಿನ ದೀರ್ಘಾವಧಿ ಉತ್ಪಾದನೆಗೆ ಸಂಬಂಧಿಸಿದಂತಿರುವ ಕೃಷಿಯ ಅಥವಾ ಒಂದು ಪಶುಸಂಗೋಪನೆ ಉದ್ಯಮದ ಒಂದು ವರ್ಗವಾಗಿದೆ. ಹಾಲಿನ ಉತ್ಪಾದನೆಯನ್ನು ಸಾಮಾನ್ಯವಾಗಿ ಹಸುಗಳಿಂದ ಮಾಡಲಾಗುತ್ತದೆ. ಹೀಗೆ ಉತ್ಪಾದನೆಯಾದ ಹಾಲು ಸ್ಥಳದಲ್ಲೇ ಸಂಸ್ಕರಿಸಲ್ಪಡಬಹುದು ಅಥವಾ ಸಂಸ್ಕರಿಸುವಿಕೆ ಮತ್ತು ಕೊನೆಯ ಚಿಲ್ಲರೆ ಮಾರಾಟಕ್ಕೆ ಸಂಬಂಧಿಸಿದಂತೆ ಹೈನುಕಾರ್ಖಾನೆಯೊಂದಕ್ಕೆ ಸಾಗಣೆ ಮಾಡಲ್ಪಡಬಹುದು ಎಂದು ತಿಳಿಸಿದರು.

ಒಂದು ಆವರ್ತಕ ಹಾಲು ಕರೆಯುವ ಕೋಣೆ: ಬಹುಪಾಲು ಹೈನು ಕೇಂದ್ರಗಳು ತಮ್ಮದೇ ಆದ ಪಶು ಆಹಾರವನ್ನೂ ಬೆಳೆಯುತ್ತವೆ. ಮೆಕ್ಕೆಜೋಳ, ಒಣಹುಲ್ಲು ಇತ್ಯಾದಿಗಳು ಇದರಲ್ಲಿ ಸೇರಿವೆ. ಇದನ್ನು ಹಸುಗಳಿಗೆ ನೇರವಾಗಿ ತಿನ್ನಿಸಲಾಗುತ್ತದೆ. ಹಾಲಿನ ಉತ್ಪಾದನೆಯ ಗುಣಮಟ್ಟವನ್ನು ಹೆಚ್ಚಿಸುವುದಕ್ಕೋಸ್ಕರ, ಆಹಾರ ಕ್ರಮದ ಹೆಚ್ಚುವರಿ ಪೂರಕ ಅಂಶಗಳನ್ನು ಪಶು ಆಹಾರಕ್ಕೆ ಸೇರಿಸಲಾಗುತ್ತದೆ. ಇನ್ನೂ ಹೆಚ್ಚು ಮಾಹಿತಿಯನ್ನು ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಹಂತ-ಹಂತವಾಗಿ ತಿಳಿಸಲಾಗುವುದು. ಮಕ್ಕಳು ಬಿಡುವಿನ ವೇಳೆಯಲ್ಲಿ ಪೋಷಕರ ಜೊತೆಗೆ ಹೈನುಗಾರಿಗೆ ಸಹಕರಿಸಬೇಕು ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಹುಟ್ಟುಹಬ್ಬ: ಹಲವು ಸೇವಾ ಕಾರ್ಯಕ್ರಮ



ಉದ್ಯೋಗ ಮೇಳದಲ್ಲಿ ಆಕಾಂಕ್ಷಿಯೊಬ್ಬರಿಗೆ ನೇಮಕಾತಿ ಪತ್ರ ವಿತರಿಸುತ್ತಿರುವುದು.



ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಅವರ ಅಭಿಮಾನಿಗಳು ಸನ್ಮಾನಿಸಿದರು.

ಹುಣಸೂರು, ಜೂ.16(ಕೆಕೆ)– ಶಾಸಕ ಹೆಚ್.ಪಿ.ಮಂಜುನಾಥ್ ಅವರ 55ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಗುರುವಾರ ಶ್ರೀಶಿರಡಿ ಸಾಯಿ ಬಾಬಾ ಟ್ರಸ್ಟ್, ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಸಪ್ತಗಿರಿ ಆಸ್ಪತ್ರೆ ಸಹಯೋಗದಲ್ಲಿ ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ, ಉದ್ಯೋಗ ಮೇಳ ಸೇರಿದಂತೆ ಹಲವು ಸೇವಾ ಕಾರ್ಯಕ್ರಮಗಳು ನಡೆಯಿತು.

ಉದ್ಯೋಗ ಮೇಳ ಯಶಸ್ವಿ: ಬೆಳಗ್ಗೆ 10ರಿಂದ ಮಧ್ಯಾಹ್ನ 2ಗಂಟೆಯವರೆಗೂ ನಡೆದ ಉದ್ಯೋಗ ಮೇಳದಲ್ಲಿ 750ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ಪಾಲ್ಗೊಂಡಿದ್ದರು. ಈ ಪೈಕಿ 380 ಮಂದಿಗೆ ವಿವಿಧ ಕಂಪನಿಗಳು ಸ್ಥಳದಲ್ಲಿಯೇ ಉದ್ಯೋಗದ ನೇಮಕಾತಿ ನೀಡಲಾಯಿತು.

ರಕ್ತದಾನ ಶಿಬಿರ: ಶಾಸಕರ ಹುಟ್ಟುಹಬ್ಬದ ಅಂಗವಾಗಿ ಶಾಸಕರ ಬೆಂಬಲಿಗರು ಹಾಗೂ ಅಭಿಮಾನಿಗಳು ರಕ್ತದಾನ ಮಾಡುವ ಮೂಲಕ ಅರ್ಥಪೂರ್ಣವಾಗಿ ಅವರ ಹುಟ್ಟುಹಬ್ಬ ಆಚರಿಸಿದರು. ಶಿಬಿರದಲ್ಲಿ ಒಟ್ಟು 72 ಮಂದಿ ರಕ್ತದಾನ ಮಾಡಿದರು.

ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ: ಅಂಬೇಡ್ಕರ್ ಭವನದಲ್ಲಿ ನಡೆದ ಆರೋಗ್ಯ ತಪಾಸಣಾ ಶಿಬಿರದಲ್ಲಿ ತಾಲೂಕಿನ ಹಲವು ಗ್ರಾಮಗಳಿಂದ ಸುಮಾರು 1,152 ಮಂದಿ ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

12 ಮಂದಿ ಹೃದಯ ಶಸ್ತ್ರಚಿಕಿತ್ಸೆ, 58 ಮಂದಿ ಗರ್ಭಕೋಶ ಸಮಸ್ಯೆ, ಅಲ್ಸರ್ ಸೇರಿದಂತೆ ಹಲವು ತೊಂದರೆ ಇರುವವರನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸಲಾಗಿದ್ದು, ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಲಾಯಿತು. ನೇತ್ರಾ ಸಮಸ್ಯೆ ಹೊಂದಿರುವ 270 ಮಂದಿಗೆ ಕನ್ನಡಕ ವಿತರಣೆ ಮಾಡಿದ್ದು, 58 ಮಂದಿಗೆ ಕಣ್ಣಿನ ಶಸ್ತ್ರಚಿಕಿತ್ಸೆಗೆ ಒಳಪಡಿಸ ಲಾಯಿತು. ಉಳಿದ ಎಲ್ಲಾರಿಗೂ ಆರೋಗ್ಯ ತಪಾಸಣೆ ಮಾಡಿ ಔಷಧಿ ವಿತರಿಸಲಾಯಿತು.

ಬಳಿಕ, ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡಿದ್ದ ವೈದ್ಯರು, ಸಿಬ್ಬಂದಿ ಹಾಗೂ ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದ ವಿವಿಧ ಕಂಪನಿಗಳ ಮುಖ್ಯಸ್ಥರನ್ನು ಶಾಸಕ ಹೆಚ್.ಪಿ.ಮಂಜುನಾಥ್ ಸನ್ಮಾನಿಸಿದರು.

ನಂತರ ಇತ್ತೀಚೆಗೆ ನಿಧನರಾದ ಶಾಸಕರ ಬಾಲ್ಯ ಸ್ನೇಹಿತ ನಾಗೇಶ್ ಅವರ ಸಮಾಧಿಗೆ ತೆರಳಿ ಪುಷ್ಪ ನಮನ ಸಲ್ಲಿಸಿದರು. ಇದಕ್ಕೂ ಮೊದಲು ಶಾಸಕರು ಪಟ್ಟಣದ ವಿವಿಧ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು.

ಶಾಸಕರ, ಅಭಿಮಾನಿಗಳು ಹಾಗೂ ಸ್ನೇಹಜೀವಿ ಅಭಿಮಾನಿ ಬಳಗದವರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಶಾಲಾ ಮಕ್ಕಳಿಗೆ ನೋಟ್‌ಬುಕ್ ಹಾಗೂ ಪೆನ್ ವಿತರಿಸಿದರು. ರಂಗಯ್ಯನ ಕೊಪ್ಪಲು ಗ್ರಾಮದ ಆದಿವಾಸಿ ಜನರಿಗೆ ಛತ್ರಿ, ಬೆಡ್‌ಶೀಟ್ ವಿತರಿಸಿ, ಅನ್ನದಾನ ಮಾಡಿದರು.

ಕಾರ್ಯಕ್ರಮದಲ್ಲಿ ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಆನಂದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಟಿ.ವಿ.ನಾರಾಯಣ್, ದೇವರಾಜು, ರಮೇಶ್, ಜಿಪಂ ಮಾಜಿ ಸದಸ್ಯ ಹಂದನಹಳ್ಳಿ ಸೋಮಶೇಖರ್, ಕೆಂಪೇಗೌಡ, ಡಾ.ವೃಷಬೇಂದ್ರ, ದೇವರಾಜ್, ಮಹದೇವು, ತಾಪಂ ಮಾಜಿ ಸದಸ್ಯ ವಿ.ಪ್ರಸನ್ನ, ಉದ್ಯಮಿ ರಾಜು, ಶಿವರಾಜೇಗೌಡ, ಗ್ರಾಪಂ ಸದಸ್ಯ ಕೆಂಡಗಣ್ಣಪ್ಪ, ಮುಖಂಡರಾದ ಅಜ್ಗರ್‌ಪಾಷ, ರಘು, ಮಹದೇವು, ಕುಮಾರ್, ಗಣೇಶ್, ಮಧು ಸೇರಿದಂತೆ ನಗರಸಭಾ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು, ಅಭಿಮಾನಿಗಳು, ಮುಖಂಡರು ಇದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಜುರಾಸಿಕ್ ವರ್ಲ್ಡ್(3ಡಿ)(ಇಂ): ಬೆ.9.55ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ, **777 ಚಾರ್ಲಿ (ಕ):** ಮ.12.55ಕ್ಕೆ, ರಾ.7ಕ್ಕೆ.
ಸ್ಕ್ರೀನ್ 2	ಡಿಯರ್ ಫ್ರೆಂಡ್ (ಮ): ಬೆ.9.55ಕ್ಕೆ, ವಿಕ್ರಂ (ತ): ಮ.12.20ಕ್ಕೆ, ಅಂಟೆ ಸುಂದರಾನಿಕಿ (ತೆ): ಮ.3.30ಕ್ಕೆ, ಸಂ.6.50ಕ್ಕೆ, **777 ಚಾರ್ಲಿ (ಕ):** ರಾ.10.10ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಬೆ.9.30ಕ್ಕೆ, ಮ.3.30ಕ್ಕೆ, ಸಂ.6.50ಕ್ಕೆ, ಶ್ರೀ ಅಲ್ಲಮ್ಮಪ್ರಭು (ಕ): ಮ.12.45ಕ್ಕೆ, ಅಂಟೆ ಸುಂದರಾನಿಕಿ (ತೆ): ರಾ.10.10ಕ್ಕೆ.
ಸ್ಕ್ರೀನ್ 4	**777 ಚಾರ್ಲಿ (ಕ):** ಬೆ.9.35ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ, ಜುರಾಸಿಕ್ ವರ್ಲ್ಡ್ (3ಡಿ)(ಇಂ): ಮ.1ಕ್ಕೆ, ರಾ.7.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜುರಾಸಿಕ್ ವರ್ಲ್ಡ್ (3ಡಿ)(ಇಂ): ಬೆ.9.30ಕ್ಕೆ, ಮ.12.35ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**777 ಚಾರ್ಲಿ (ಕ):** ಬೆ.9.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಭೂಲ್ ಭುಲಾಯ್ಯ 2 (ಹಿಂ): ಮ.12.40ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಬೆ.11ಕ್ಕೆ, ಸಂ.6.10ಕ್ಕೆ, ಅಂಟೆ ಸುಂದರಾನಿಕಿ (ತೆ): ಮ.2.35ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	ಅಂಟೆ ಸುಂದರಾನಿಕಿ (ತೆ): ಬೆ.9.40ಕ್ಕೆ, **777 ಚಾರ್ಲಿ (ಕ):** ಮ.1.05ಕ್ಕೆ, ಸಂ.4.25ಕ್ಕೆ, ಡಿಯರ್ ಫ್ರೆಂಡ್ (ಮ): ರಾ.7.45ಕ್ಕೆ, ವಿಕ್ರಂ (ತ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10.30ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.25ಕ್ಕೆ, ಮೆಟಡೊರ್ (ಕ): ಮ.1.15ಕ್ಕೆ.
ಸ್ಕ್ರೀನ್ 2	ವಿಕ್ರಂ (ತ): ಬೆ.10ಕ್ಕೆ, ರಾ.9.30ಕ್ಕೆ, ಮೇಜರ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.10.25ಕ್ಕೆ, ಮ.1.20ಕ್ಕೆ, ಸಂ.6.35ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಸಂ.4.15ಕ್ಕೆ, ಮೇಜರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357088
ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಸಂ.5.35ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.6.05ಕ್ಕೆ, ಮೆಟಡೊರ್ (ಕ): ಬೆ.11.45ಕ್ಕೆ, ಟಾಪ್ ಗನ್ (ಇಂ): ಮ.2.45ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಭೂಲ್‌ಭುಲಯ್ಯ 2(ಹಿಂ): ಮ.12.30ಕ್ಕೆ, ಸಂ.6.40ಕ್ಕೆ, ಮೇಜರ್ (ಹಿಂ): ಮ.1.05ಕ್ಕೆ, ರಾ.7.15ಕ್ಕೆ, ರಾ.9.20ಕ್ಕೆ, ವಿಕ್ರಮ್ (ತ): ಬೆ.8.30ಕ್ಕೆ, ಬೆ.9.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.35ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9ಕ್ಕೆ, ರಾ.10.30ಕ್ಕೆ, ಮೇಜರ್ (ತೆ): ಬೆ.9.25ಕ್ಕೆ, ಸಂ.4.10ಕ್ಕೆ, ರಾ.10.20ಕ್ಕೆ, F3 (ತೆ): ಮ.3.35ಕ್ಕೆ, ಸರ್ಕಾರು ವಾರಿ ಪಾಠ (ತೆ): ರಾ.9.45ಕ್ಕೆ.


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿಕ್ರಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಾರ್ಲಿ–777 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಚಾರ್ಲಿ–777 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವಿರಾಟ ಪರ್ವಂ (ತೆ)	4 ಪ್ರದರ್ಶನಗಳು
ಸಂಗಂ	
ವಿಕ್ರಂ (ತ)	4 ಪ್ರದರ್ಶನಗಳು
ಲಿಡೋ	
ಖಡಕ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಾನ್ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಜುರಾಸಿಕ್ ಪಾರ್ಕ್ (ಇ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು

ಕೃಷಿ ಹೊಂಡಕ್ಕೆ ಬಿದ್ದು ವೃದ್ಧೆ ಸಾವು

ಸರಗೂರು, ಜೂ.16(ನಾಗೇಶ್)– ಕೃಷಿ ಹೊಂಡಕ್ಕೆ ಬಿದ್ದು ವೃದ್ಧೆಯೊಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ಮುತ್ತಿಗೆ ಗ್ರಾಮದ ಜಮೀನೊಂದರಲ್ಲಿ ಗುರುವಾರ ನಡೆದಿದೆ. ತಾಲೂಕಿನ ಎಂ.ಸಿ.ತಳಲು ಗ್ರಾಮದ ನಿವಾಸಿ ದೇವಮ್ಮ(65) ಮೃತಪಟ್ಟವರು. ಈಕೆ ಮಾನಸಿಕ ಅಸ್ವಸ್ಥೆಯಾಗಿದ್ದು, ಬೆಳಗ್ಗೆ 8 ಗಂಟೆಯ ಸುಮಾರಿನಲ್ಲಿ ಜಮೀನಿನ ಕಡೆಗೆ ಹೋಗುತ್ತಿದ್ದಾಗ ಮುತ್ತಿಗೆ ಗ್ರಾಮದ ಮಹದೇವಪ್ಪ ಅವರಿಗೆ ಸೇರಿದ ಜಮೀನಲ್ಲಿದ್ದ ಕೃಷಿಹೊಂಡಕ್ಕೆ ಆಯತಪ್ಪಿ ಬಿದ್ದಿದ್ದಾಳೆ. ಮಧ್ಯಾಹ್ನದ ವೇಳೆ ರೈತರೊಬ್ಬರು ಜಮೀನಿಗೆ ಹೋಗಿದಾಗ ಪ್ರಕರಣ ಬೆಳಕಿಗೆ ಬಂದಿದೆ. ವಿಷಯ ತಿಳಿದು ಗ್ರಾಮಸ್ಥರು ಸ್ಥಳಕ್ಕೆ ಬಂದು ಕೃಷಿ ಹೊಂಡದಿಂದ ಮೃತದೇಹ ತೆಗೆದು ವಾರಸುದಾರರಿಗೆ ಒಪ್ಪಿಸಿದ್ದಾರೆ. ಸಂಜೆ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಸಾಲಬಾಧೆ: ನೇಣು ಬಿಗಿದುಕೊಂಡು ರೈತ ಆತ್ಮಹತ್ಯೆ



ಹುಣಸೂರು, ಜೂ.16(ಕೆಕೆ)– ಸಾಲಬಾಧೆ ತಾಳಲಾರದೆ ರೈತನೊಬ್ಬ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಮೋದೂರು ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ರಾಜಶೇಖರ(52) ಆತ್ಮಹತ್ಯೆ ಮಾಡಿಕೊಂಡ ರೈತ. ಇವರಿಗೆ ಗ್ರಾಮದಲ್ಲಿ 4 ಎಕರೆ ಜಮೀನಿದ್ದು, ಕೃಷಿ ಚಟುವಟಿಕೆಗಾಗಿ ಕಾವೇರಿ ಗ್ರಾಮೀಣ ಬ್ಯಾಂಕಿನಿಂದ 8 ಲಕ್ಷ ರೂ., ಕೈ ಸಾಲ 7ಲಕ್ಷ ರೂ., ಮಹಿಳಾ ಸಂಘಗಳಿಂದ 3ಲಕ್ಷ ಸಾಲ ಮಾಡಿದ್ದರು. ಸಾಲ ತೀರಿಸಲಾಗದೆ ಮನನೊಂದು ರಾಜಶೇಖರ ಅವರು ಇಂದು ಮಧ್ಯಾಹ್ನ ಮನೆಯಲ್ಲಿ ಯಾರು ಇಲ್ಲದ ವೇಳೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜಮೀನಿಗೆ ಹೋಗಿದ್ದ ಪತ್ನಿ ನಂಜಮಣಿ ಮನೆಗೆ ಬಂದಾಗ ಪ್ರಕರಣ ಬೆಳಕಿಗೆ ಬಂದಿದೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೋಹನ್‌ಲಾಲ್ ನಿಧನ



ಹುಣಸೂರು, ಜೂ.16(ಕೆಕೆ)– ನಗರದ ಎಸ್.ಜೆ.ರಸ್ತೆಯ ನಿವಾಸಿ ಹಾಗೂ ಜೈನ ಮುಖಂಡ ಮೋಹನ್‌ಲಾಲ್(70) ಗುರುವಾರ ನಿಧನರಾದರು.

ಮೃತರು ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಇವರು ತಾಲೂಕು ಜೈನ ಸಮಾಜದಲ್ಲಿ ಪ್ರಮುಖರಾಗಿ ಹಲವು ಸಮಾಜಮುಖಿ ಕೆಲಸಗಳನ್ನು ಮಾಡುವ ಮೂಲಕ ತಾಲೂಕು ಜನತೆಗೆ ಚಿರ ಪರಿಚಿತರಾಗಿದ್ದರು. ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ಚಿತಗಾರದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಚಾಮುಂಡೇಶ್ವರಿ ದರ್ಶನ

ಚಾ.ಬೆಟ್ಟ ಮುಖ್ಯರಸ್ತೆಯಲ್ಲಿ ವಿದ್ಯುತ್ ದೀಪ ಅಳವಡಿಕೆ ಕಾಮಗಾರಿ ಆರಂಭ

- ಡ್ರಿಲ್ಲಿಂಗ್ ಮೂಲಕ 20 ಮೀಟರ್‌ಗೆ ಒಂದರಂತೆ ಕಂಬ ಅಳವಡಿಕೆ
- ಮಾರ್ಗದುದ್ದಕ್ಕೂ ಪ್ರಜ್ವಲಿಸುವ ದೀಪ ಜೋಡಣೆ
- ಪರಿಸರವಾದಿಗಳ ಆಕ್ಷೇಪ




ವಿದ್ಯುತ್ ಕಂಬ ಅಳವಡಿಕೆಗೆ ಡ್ರಿಲ್ಲಿಂಗ್ ಯಂತ್ರ ಬಳಸಿ ಗುಂಡಿ ತೋಡುತ್ತಿರುವುದು. ಬಲಚಿತ್ರದಲ್ಲಿ ಚಾಮುಂಡಿಬೆಟ್ಟ ರಸ್ತೆಯುಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗಿದ್ದ ಗಿಡಗಳ ತೆರವು ವೇಳೆ ಕೆಲಸಗಾರರಿಗೆ ಸೂಚನೆ ನೀಡುತ್ತಿರುವ ಸಂಸದ ಪ್ರತಾಪ ಸಿಂಹ.

ಮೈಸೂರು,ಜೂ.16(ಎಂಟಿವೈ)–ಅಂತಾರಾಷ್ಟ್ರೀಯ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ, ಚಾಮುಂಡೇಶ್ವರಿ ದರ್ಶನಕ್ಕೂ ತೆರಳುವ ಹಿನ್ನೆಲೆಯಲ್ಲಿ ಬೆಟ್ಟದ ರಸ್ತೆಯಲ್ಲಿ ದೀಪದ ವ್ಯವಸ್ಥೆ ಮಾಡಲು ವಿದ್ಯುತ್ ಕಂಬ ಅಳವಡಿಸುವ ಪ್ರಕ್ರಿಯೆ ಆರಂಭಿಸಲಾಗಿದ್ದು, ಇದಕ್ಕೆ ಪರಿಸರವಾದಿಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಜೂ.20 ಮತ್ತು 21ರಂದು ಮೈಸೂರು ಪ್ರವಾಸ ಕೈಗೊಂಡಿರುವ ಪ್ರಧಾನಿ ಮೋದಿ ಇದೇ ಮೊದಲು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುತ್ತಿದ್ದಾರೆ. ಹಾಗಾಗಿ ಬೆಟ್ಟದಲ್ಲಿ ಈಗಾಗಲೇ ಸಿದ್ಧತಾ ಕಾರ್ಯ ಆರಂಭವಾಗಿದೆ. ಇದರೊಂದಿಗೆ ಕಳೆದೆರಡು ದಿನದಿಂದ ಬೆಟ್ಟದ ತಪ್ಪಲು ತಾವರೆಕಟ್ಟೆಯಿಂದ ಮಹಿಷಾಸುರ ಪ್ರತಿಮೆವರೆಗೂ ಹೊಸದಾಗಿ ವಿದ್ಯುತ್ ಕಂಬ ನೆಡಲಾಗುತ್ತಿದೆ. ಪ್ರಧಾನಿ ತೆರಳುವ ಮಾರ್ಗದಲ್ಲಿ ಕತ್ತಲಿರದಂತೆ ಭದ್ರತಾ ಸಿಬ್ಬಂದಿ ಸೂಚಿಸಿರುವ ಹಿನ್ನೆಲೆಯಲ್ಲಿ ಇದೀಗ ತ್ವರಿತಗತಿಯಲ್ಲಿ ವಿದ್ಯುತ್ ಕಂಬ ಅಳವಡಿಸುವ ಕಾರ್ಯ ಆರಂಭಿಸಲಾಗುತ್ತಿದೆ. ಕಂಬ ನೆಡಲು ಟ್ರಾಕ್ಟರ್‌ನಲ್ಲಿ ಅಳವಡಿಸಿರುವ ಡ್ರಿಲ್ಲಿಂಗ್ ಯಂತ್ರದ ಮೂಲಕ ಗುಂಡಿ ತೋಡಲಾಗುತ್ತಿದೆ. ಬೋರ್‌ವೆಲ್ ಮಾದರಿಯಲ್ಲಿ ನೆಲ ಕೊರೆದು ಕಂಬ ನೆಟ್ಟು ಬೀದಿದೀಪ ಅಳವಡಿಕೆ ಕಾರ್ಯ ಭರದಿಂದ ಸಾಗಿದೆ.

ಚಾಮುಂಡಿಬೆಟ್ಟ ಮುಖ್ಯ ರಸ್ತೆಯಲ್ಲಿ ವಿದ್ಯುತ್ ದೀಪ ಅಳವಡಿಸಲು ಈ ಮೊದಲೇ ಉದ್ದೇಶಿಸಲಾಗಿತ್ತು. ಆದರೆ ಬೆಟ್ಟದ ಜೀವ ವೈವಿಧ್ಯತೆಗೆ ತೊಂದರೆಯಾಗಲಿದೆ ಎಂಬ ಕಾರಣಕ್ಕೆ ಕಂಬ ನೆಡುವುದನ್ನು ಕೈ ಬಿಡಲಾಗಿತ್ತು. ಆದರೆ, ಇದೀಗ ಪ್ರಧಾನಿ ಮೋದಿ ಆಗಮನದ ಹಿನ್ನೆಲೆಯಲ್ಲಿ ದೀಪ ಅಳವಡಿಸುತ್ತಿರುವುದು ಪರಿಸರವಾದಿಗಳ ಕೆಂಗಣ್ಣಿಗೆ ಗುರಿಯಾಗಿದೆ.

ಆಕ್ಷೇಪ: ಪರಿಸರವಾದಿ ಎಸ್.ಶೈಲಜೇಶ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಚಾಮುಂಡಿಬೆಟ್ಟ ರಸ್ತೆಗೆ ವಿದ್ಯುತ್ ದೀಪ ಅಳವಡಿಸುವ ಅವಶ್ಯಕತೆ ಇರಲಿಲ್ಲ. ಬೆಟ್ಟದಲ್ಲಿರುವ ಜೀವ ವೈವಿಧ್ಯತೆಗೆ ಇಂತಹ ದೀಪದ ಬೆಳಕಿನಿಂದ ಧಕ್ಕೆಯಾಗಲಿದೆ. ಸಹಜ ವಾತಾವರಣಕ್ಕೆ ಹೊಂದಿಕೊಂಡಿರುವ ಬೆಟ್ಟದಲ್ಲಿನ ಪಕ್ಷಿ, ಪ್ರಾಣಿ ಸಂಕುಲ ಈಗ ಅಳವಡಿಸುವ ಪ್ರಜ್ವಲಿಸುವ ದೀಪದಿಂದ ಘಾಸಿಗೊಳ್ಳುತ್ತದೆ. ಈಗ ಇರುವ ವ್ಯವಸ್ಥೆಯೇ ಮುಂದುವರೆಯಬೇಕು. ಅದರಲ್ಲೂ ಹೆಚ್ಚು ಬೆಳಕು ಚೆಲ್ಲುವ ಎಲ್‌ಇಡಿ ಬಲ್ಬ್ ಅಳವಡಿಸುತ್ತಿರುವುದು ನೈಸರ್ಗಿಕ ಅರಣ್ಯ ಪರಿಸರದ ಮೇಲೆ ದುಷ್ಪರಿಣಾಮ ಬೀರಲಿದೆ. ಜೊತೆಗೆ ಸುಮಾರು 150 ಕಂಬ ನೆಡುವುದು ಭಾರೀ ನಷ್ಟದ ಕಾಮಗಾರಿ. ಕಂಬ ನೆಡಲು ಡ್ರಿಲ್ಲಿಂಗ್ ಯಂತ್ರ ಬಳಸುವುದರಿಂದ ಬೆಟ್ಟದ ಭೂ ಭಾಗದಲ್ಲಿ ಕಂಪನ ಉಂಟಾಗಿ ಮಣ್ಣು ಸಡಿಲಗೊಳ್ಳುವ ಸಾಧ್ಯತೆಯೂ ಇದೆ. ಈಗಾಗಲೇ ಬೆಟ್ಟದ ನಂದಿ ರಸ್ತೆಯಲ್ಲಾಗಿರುವ ಭೂ ಕುಸಿತದಿಂದ ಇನ್ನೂ ಪಾಠ ಕಲಿಯದೆ ಮತ್ತೆ ಡ್ರಿಲ್ಲಿಂಗ್ ಯಂತ್ರ ಬಳಸುವುದು ಎಷ್ಟು ಸರಿ? ಕೂಡಲೇ ವಿದ್ಯುತ್ ದೀಪ ಅಳವಡಿಸುವ ಕಾಮಗಾರಿ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಲೋಕೋಪಯೋಗಿ ವ್ಯಾಪ್ತಿ ಚಾಮುಂಡಿಬೆಟ್ಟದ ರಸ್ತೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಅರಣ್ಯ ಪ್ರದೇಶದಲ್ಲಿ ಯಾವುದೇ ಚಟುವಟಿಕೆ ನಡೆಸಬೇಕಾದರೆ ಇಲಾಖಾ ಅನುಮತಿ ಪಡೆಯುವುದು ಅನಿವಾರ್ಯ. ಆದರೆ ಬೆಟ್ಟದ ರಸ್ತೆ ಲೋಕೋಪಯೋಗಿ ಇಲಾಖೆಗೆ ಸೇರಿರುವುದರಿಂದ ಬೆಟ್ಟದ ಗ್ರಾಮಸ್ಥರು, ಪ್ರವಾಸಿಗರು ಹಾಗೂ ವಾಹನ ಸವಾರರ ಹಿತ ಕಾಯಲು ವಿದ್ಯುತ್ ದೀಪ ಅಳವಡಿಸುತ್ತಿರುವುದಾಗಿ ಮಾಹಿತಿ ಲಭ್ಯವಾಗಿದೆ ಎಂದು ಡಿಸಿಎಫ್ ಕೆ.ಕಮಲಾ ಕರಿಕಾಳನ್ ಸ್ಪಷ್ಟಪಡಿಸಿದ್ದಾರೆ.

ರಸ್ತೆಗೆ ಚಾಚಿದ್ದ ಗಿಡ–ಗಂಟಿ: ಒಂದೆಡೆ ವಿದ್ಯುತ್ ಕಂಬ ಅಳವಡಿಸುತ್ತಿದ್ದರೆ, ಮತ್ತೊಂದೆಡೆ ಬೆಟ್ಟದ ರಸ್ತೆಯುದ್ದಕ್ಕೂ ಚಾಚಿಕೊಂಡಿದ್ದ ಗಿಡಗಂಟಿ, ರೆಂಬೆಗಳನ್ನು ಕತ್ತರಿಸಲಾಗುತ್ತಿದೆ. ಭದ್ರತೆಯೊಂದಿಗೆ ಸುರಕ್ಷಿತ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ರಸ್ತೆಗೆ ಚಾಚಿಕೊಂಡಿದ್ದ ಗಿಡ ಕತ್ತರಿಸಲಾಗುತ್ತಿದೆ. ಬುಧವಾರ ಸಂಸದ ಪ್ರತಾಪ ಸಿಂಹ ಬೆಟ್ಟಕ್ಕೆ ತೆರಳಿ ಗಿಡಗಂಟಿಗಳ ತೆರವು ಕಾರ್ಯಾಚರಣೆ ವೀಕ್ಷಿಸಿ, ಕೆಲವು ಸೂಚನೆ ನೀಡಿದರು.

ನಾಳೆ ಗ್ರಾಹಕರ ಸಂವಾದ ಸಭೆ

ಮೈಸೂರು,ಜೂ.16–ಚೆಸ್ಕಾಂ ವತಿಯಿಂದ ನರಸಿಂಹರಾಜ ಮೊಹಲ್ಲಾ ವಿಭಾಗ ವ್ಯಾಪ್ತಿಯ ಕೇಂದ್ರ ಉಪವಿಭಾಗಗಳಾದ ಜ್ಯೋತಿನಗರ, ನರಸಿಂಹರಾಜ ಮೊಹಲ್ಲಾ ಚಾಮುಂಡಿಪುರಂ ಹಾಗೂ ವರುಣಾ ಉಪವಿಭಾಗಗಳ ವ್ಯಾಪ್ತಿಯಲ್ಲಿರುವ ಗ್ರಾಹಕರಿಗೆ ಜೂ.18ರಂದು ಬೆಳಗ್ಗೆ 11 ಗಂಟೆಗೆ ಎಲ್ಲಾ ಉಪವಿಭಾಗ ಕಚೇರಿಗಳಲ್ಲಿ ಗ್ರಾಹಕರ ಸಂವಾದ ಸಭೆ ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಆಯಾ ಉಪವಿಭಾಗಗಳಲ್ಲಿ ನಡೆಯುವ ಗ್ರಾಹಕರ ಸಂವಾದ ಸಭೆಗೆ ಲಿಖಿತ ರೂಪದಲ್ಲಿ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಕೋರಲಾಗಿದೆ.

ನಾಳೆ ಎಂ.ಶಿವಣ್ಣ ಜಿಲ್ಲಾ ಪ್ರವಾಸ



ಮೈಸೂರು, ಜೂ.16–ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಜೂ.18ರಂದು ಮೈಸೂರು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ.

ಅಂದು ಬೆಳಗ್ಗೆ 10 ಗಂಟೆಗೆ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರೊಂದಿಗೆ ನೇರ ಸಂವಾದದಲ್ಲಿ ಪಾಲ್ಗೊಳ್ಳುವರು. ಬೆಳಗ್ಗೆ 11.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ, ಕುಲಸಚಿವ, ಉಪ ಕುಲಪತಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸುವರು ಹಾಗೂ ಮಧ್ಯಾಹ್ನ 1 ಗಂಟೆಗೆ ಪತ್ರಿಕಾಗೋಷ್ಠಿ ನಡೆಸುವರು ಹಾಗೂ ಮಧ್ಯಾಹ್ನ 3 ಗಂಟೆಗೆ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ವಿಚಾರಣೆ ಮಾಡುವರು.

ಜೂ.19, ಐಎಎಸ್ ಸ್ಕಾಲರ್‌ಶಿಪ್ ಪರೀಕ್ಷೆ

ಮೈಸೂರು, ಜೂ.16–ಹೈದರಾಬಾದಿನ ಲಾ ಎಕ್ಸೆಲ್ಸ್ ಐಎಎಸ್ ಸಂಸ್ಥೆಯು ಬಡ ಪ್ರತಿಭಾವಂತ ಅಭ್ಯರ್ಥಿಗಳಿಗೆ ಉಚಿತ ಐಎಎಸ್ ಸ್ಕಾಲರ್‌ಶಿಪ್ ಪರೀಕ್ಷೆಯನ್ನು ಜೂ.19ರಂದು ನಡೆಸಲು ತೀರ್ಮಾನಿಸಿದೆ. ಎನ್.ಆರ್.ಮೊಹಲ್ಲಾದ ಲಿಟಲ್ ಜೆವೆಲ್ಸ್ ಪಿಯು ಕಾಲೇಜಿನಲ್ಲಿ ಪರೀಕ್ಷೆಯನ್ನು ಬೆಂಗಳೂರಿನ ನುರಿತ ತರಬೇತುದಾರರಿಂದ ನಡೆಸಲಾಗುವುದು. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ದೂ.ಸಂ. 9121239996, 9121412929 ಮತ್ತು ನೋಂದಾಯಿಸಿಕೊಳ್ಳಲು https://forms.gle/kqkR3ShZLCofGAiK6 ಮೂಲಕ ಸಂಪರ್ಕಿಸಬಹುದು.

5ನೇ ವರ್ಷದ ಸವಿನೆನಪು
ಡಾ|| ವೀಣಾರವಿ
ಸದಾ ನಿಮ್ಮ ನೆನಪಿನಲ್ಲಿರುವ ಆರ್.ರವಿ ಮತ್ತು ಕುಟುಂಬವರ್ಗದವರು

2ನೇ ವರ್ಷದ ಸವಿನೆನಪು
ಅಮ್ಮ ನೀವು ನಮ್ಮನ್ನಗಲಿ ಎರಡು ವರ್ಷ ಕಳೆದರೂ ನಿಮ್ಮ ನೆನಪು ನಮ್ಮೆಲ್ಲರ ಮನಸ್ಸಿನಲ್ಲಿ ಸದಾ ಹಸಿರಾಗಿರುತ್ತದೆ. ನಿಮ್ಮ ಆತ್ಮದ ಬೆಳಕು ನಮಗೆಲ್ಲಾ ದಾರಿ ದೀಪವಾಗಿ ಮುನ್ನಡೆಸುತ್ತಿದೆ.
ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು ಮುಮ್ಮಕ್ಕಳು ಮತ್ತು ಕುಟುಂಬವರ್ಗ ನಂಜೇಶ್ ಹೆಬ್ಬಾಳ್ ಮೈಸೂರು
ಶ್ರೀಮತಿ ಮಂಚಮ್ಮ (ಸಬ್ಬನಕುಪ್ಪೆ) ನಿಧನ: 17.06.2020

BEFORE BUYING ANY CYCLE JUST CHECK IN AT
SHAH MOBIKES PVT. LTD.
SHAH SINCE 1947 On wheels
Cycle Division : Sri Harsha Road, Next to Hotel Govardhan & Maurya, Mysore
CYCLES & SPARES : DISTRIBUTORS, DEALER, WHOLESALE & RETAIL
You can see & feel the largest Range of Brands in BICYCLE, ELECTRIC CYCLES, CHILDRENS TRICYCLE all under one roof.
HERCULES, BSA, MONTRA, RODED, HERO, FIREFOX, KROSS, TATA, PHONIX, UPGRADE, KEYSTO, SCHNELL, ZEUS, UNIROX, CANNONDALE, RIDLEY, MAGMA, RAKA, CAYA, OSTER, NEELAM, ELECTRIC CYCLES, DASH, FUN RIDE, SAFARI, Tricycles, Kids Battery Cars & Bikes also available.
PRICES RANGING FROM ₹ 2,000/- & ₹ 1,90,000/-
So just Visit or call us at 0821- 4260009 / 9742297449
Sunday Open 10-00am To 2-30pm Weekdays : 09-30am To 8-00pm

WANTED TEACHERS
Nursery - 04
Primary - 02
Place : Nanjangud
Candidates should fluently communicate in English. Contact no.
70222 37715 / 7676110063

SDJ JEWELERS
ಪುರುಷರು ಮತ್ತು ಮಹಿಳೆಯರು
Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಮೈಸೂರು ಮಿತ್ರ
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ಬೇಕಾಗಿದ್ದಾರೆ
ಫ್ಯಾಷನ್ ಜ್ಯುವೆಲರಿ ಶೋರೂಂಗೆ ಒಳ್ಳೆಯ ವಾಕ್‌ಚಾತುರ್ಯವುಳ್ಳ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ, ಉತ್ತಮ ಸಂಬಳ + ಇನ್‌ಸೆಂಟಿವ್ಸ್
ವಯೋಮಿತಿ: 20 ರಿಂದ 30 ವರ್ಷಗಳು
NPG Lucky Stones Ashoka Road, Mysore
ಫೋನ್ : 93 42 42 42 41

WANTED TEACHERS
Sai Gurukula Pre-School, Hebbal 2nd Stage, 03 - Post Female Candidates only. Experienced & Freshers can also apply, Contact:
7373969663 / 0821-2958545

ಇಂದಿನಿಂದ ಪ್ರಭ
ಆರ್‌ಆರ್‌ಆರ್ (ಕನ್ನಡ)
ಪ್ರತಿದಿನ 4 ಪ್ರದರ್ಶನಗಳು

PUBLIC NOTICE

This is to inform the public in general that our client Mr. TABREZ ALI BAIG, S/o Late Mr. Noorulla Baig is purchasing the Schedule property from Mr. S. M. Sadiq. If any person has any kind of Right, Title, interest, objection, claim or Enforceable charge over the schedule Property or to the proposed Sale by them they may lodge their claim/ objection with the undersigned within 7 days from the notification with supporting documents, Due failing which my client will take it for granted that there are no claims/charges/objections whatsoever from whomsoever. Any claims/ objections received after stipulation period of 7 days will be dated have no claim and the same will be ignored.

SCHEDULE PROPERTY

All the Piece and parcel of the Land bearing Survey No. 30/1D1, (old Sy No. 30/1), Measuring 2.02 (Two Acre Two Guntas), Situated at Sathagalli Village, Kasaba Hobali, Mysore Taluk thereon.

Sd/- Asadulla Khan
Roshan Hussain, Saifuddin,
Advocates, Shop No. 13,
Mahadevpura Main Road,
Sadiq-Ul-Ameen Complex, Udayagiri,
Mysore. **Mob. 9916586222**

ಮೈಸೂರು ಭಾಗದ ಜನತೆಗೆ ಸುವರ್ಣಾವಕಾಶ
ಜ್ಯೋತಿಷ್ಯ ಫಲ ಟಿವಿ ಕಾರ್ಯಕ್ರಮ ಖ್ಯಾತಿಯ ನುಡಿದಂತೆ ನಡೆಯುವ ಖಚಿತ ಭವಿಷ್ಯವಾಣಿಯನ್ನು ಹೇಳುವ ಮಂಗಳೂರು ಮೂಲದ ಬೆಂಗಳೂರಿನ ಪ್ರಖ್ಯಾತ ಜ್ಯೋತಿರ್ವಿಜ್ಞಾನಿ
ಶ್ರೀ ವಿಜಯ್ ಶ್ರೀನಿವಾಸ್ ಗುರೂಜಿಯವರು
ಇದೇ ಜೂನ್ 25ರಂದು ಮೈಸೂರಿನಲ್ಲಿ ನಿಮ್ಮ ಎಲ್ಲಾ ಘೋರ ಸಮಸ್ಯೆಗಳಿಗೂ ನಿಖರ ಪರಿಹಾರಕ್ಕಾಗಿ ನೇರ ಭೇಟಿ ಮಾಡಬಹುದು ಸೀಮಿತ ಜನರಿಗೆ ಮಾತ್ರ ಅವಕಾಶ
ಅಪಾಯಿಂಟ್ಮೆಂಟ್‌ಗಾಗಿ ಸಂಪರ್ಕಿಸಿ:
ಮೊ: 9663463029

S.M GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ
ಕೂಡಲೇ ಸಂಪರ್ಕಿಸಿ.(T&C)
8050518881

ಕರ್ನಾಟಕ ಪ್ರದೇಶ ಜನತಾದಳ (ಜಾ)
ಹೃದಯಪೂರ್ವಕ ಧನ್ಯವಾದಗಳು
ಆತ್ಮೀಯರೆ,
ದಿನಾಂಕ 13/06/2022 ರಂದು ನಡೆದ ದಕ್ಷಿಣ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ನನಗೆ ಮತ ನೀಡಿದ ಸಮಸ್ತ ಪದವೀಧರ ಮತದಾರ ಬಂಧುಗಳಿಗೆ ಹಾಗೂ ಅವಕಾಶ ಕಲ್ಪಿಸಿ ಸಹಕರಿಸಿದ ಮಾಜಿ ಪ್ರಧಾನಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ.ದೇವೇಗೌಡ ರವರು, ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿರವರು, ರಾಜ್ಯಾಧ್ಯಕ್ಷರಾದಸಿ.ಎಂ.ಇಬ್ರಾಹಿಂ ರವರು, ಸಂಸದೀಯ ಮಂಡಳಿಯ ಅಧ್ಯಕ್ಷರಾದ ಸನ್ಮಾನ್ಯ ಹೆಚ್.ಕೆ.ಕುಮಾರಸ್ವಾಮಿ ರವರು, ಎಲ್ಲಾ ಮಾಜಿ ಸಚಿವರು, ಶಾಸಕರು, ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಸದಸ್ಯರು, ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ವಿವಿಧ ಕ್ಷೇತ್ರದ ಗಣ್ಯರು, ಸಂಘಟನೆಯವರು ಹಾಗೂ ಚುನಾವಣೆಯಲ್ಲಿ ಪ್ರತ್ಯಕ್ಷ ವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹೃದಯಪೂರ್ವಕವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.
ಇಂತಿ ತಮ್ಮ ವಿಶ್ವಾಸಿ
ಹೆಚ್.ಕೆ.ರಾಮು
ದಕ್ಷಿಣ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯ ಪರಾಜಿತ ಜೆಡಿಎಸ್ ಅಭ್ಯರ್ಥಿ.

ಯಶಸ್ವಿ 3ನೇ ವಾರ ಪದ್ಮ & ಸಂಗಮ್
ಕಮಲ್ ಹಾಸನ್ ವಿಜಯ್ ಸೇತುಪತಿ ಸೂರ್ಯ ನಟಿಸಿರುವ
ವಿಕ್ರಮ್ (ತಮಿಳು)
ಪ್ರತಿದಿನ 4 ಪ್ರದರ್ಶನಗಳು
10.30, 1.30, 4.30, 7.30

ಶ್ರೀಕಂಠೇಶ್ವರ SKTVC ELECTRONICS | DIGITAL | FURNITURES
ಬೇಕಾಗಿದ್ದಾರೆ/WANTED
* AREA SALES MANAGER
* AREA COLLECTION MANAGER
* RECOVERY OFFICER
* FEMALE ACCOUNTANT
Location : Hassan & Mandya District
SALARY UPTO 30,000/- + Incentive
Qualification : Any Degree,Diploma, ITI (Pass/Fail)
(Preferred Collection Experience Candidates)
96206 42496 - 84949 34898

PUBLIC NOTICE

This is to inform the public in general that our client Mr. TABREZ ALI BAIG, S/o Late Mr. Noorulla Baig is purchasing the Schedule property from Mr. S. M. Siddiq, Mrs. Gulnaz Banu, Mrs. Tabassum Jabeen, Mrs. Naveeda Banu, Mrs. Syed Kousar Fathima Mrs. Nahida Banu, Mrs. Syed Nayaz Fathima, Mrs. Syed Salma Fathima. If any person has any kind of Right, Title, interest, objection, claim or Enforceable charge over the schedule Property or to the proposed Sale by them they may lodge their claim/ objection with the undersigned within 7 days from the notification with supporting documents, Due failing which my client will take it for granted that there are no claims/ charges/objections whatsoever from whomsoever. Any claims/ objections received after stipulation period of 7 days will be dated have no claim and the same will be ignored.

SCHEDULE PROPERTY

All the Piece and parcel of the Land bearing Survey No. 30/1C1, (old Sy No. 30/1), Measuring 1.08 (One Acre Eight Guntas), Situated at Sathagalli Village, Kasaba Hobali, Mysore Taluk thereon.

Sd/- Asadulla Khan, Roshan Hussain, Saifuddin, Advocates, Shop No. 13, Mahadevpura Main Road, Sadiq-Ul-Ameen Complex, Udayagiri, Mysore. **Mob. 9916586222**

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೈಸೂರು ನಗರ, ವಿಜಯನಗರ 2ನೇ ಹಂತ, ರೈಲ್ವೆ ಬಡಾವಣೆ, ಮಹದೇಶ್ವರ ಬಡಾವಣೆಯ 10ನೇ ಅಡ್ಡ ರಸ್ತೆ, ಮನೆ ಸಂಖ್ಯೆ 315 ರಲ್ಲಿ ವಾಸವಾಗಿರುವ ಶ್ರೀ ಎಸ್. ಹೇಮಚಂದ್ರ ಬಿನ್ ಲೇಟ್ ಸಿದ್ದರಾಮಯ್ಯ ಮತ್ತು ಶ್ರೀಮತಿ ಲಕ್ಷ್ಮಿ ಕೋಂ ಶ್ರೀ ಎಸ್. ಹೇಮಚಂದ್ರ.

ಇವರು ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 2ನೇ ಹಂತ, ವೀರಾಂಜನೇಯ ದೇವಸ್ಥಾನದ ಹಿಂಭಾಗ, ಮನೆ ಸಂಖ್ಯೆ 2994/ಸಿ ರಲ್ಲಿ ವಾಸವಾಗಿರುವ ಲೇಟ್ ರಾಮೇಗೌಡ ರವರ ಮಗನಾದ ಸುಮಾರು 17 ವರ್ಷ ವಯಸ್ಸುಳ್ಳ ಶ್ರೀ ಚಂದ್ರೇಗೌಡ ರವರಿಂದ ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಂದಲಾದರೂ ಯಾವುದೇ ರೀತಿಯ ತಂಟೆ ತಕರಾರುಗಳು ಇದ್ದಲ್ಲಿ ಸೂಕ್ತವಾದ ಅಸಲು ದಾಖಲಾತಿಗಳೊಂದಿಗೆ ಈ ಪ್ರಕಟಣೆಯು ಪ್ರಕಟಣೆಗೊಂಡ 5 ದಿನಗಳೊಳಗಾಗಿ ನಮ್ಮನ್ನು ಖುದ್ದಾಗಿ ಕಛೇರಿಯಲ್ಲಿ ಭೇಟಿ ಮಾಡತಕ್ಕದ್ದು. ಈ 5 ದಿನಗಳೊಳಗಾಗಿ ಯಾವುದೇ ರೀತಿಯ ತಂಟೆ ತಕರಾರುಗಳು ಯಾರಿಂದಲೂ ಬಾರದಿದ್ದ ಪಕ್ಷದಲ್ಲಿ ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರು ಶುದ್ಧ ಕ್ರಯಕ್ಕೆ ಪಡೆಯುವವರು, ಅವಧಿ ಮೀರಿ ಬಂದ ತಂಟೆ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತು

ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 2ನೇ ಹಂತ, ನಿವೇಶನ ಸಂಖ್ಯೆ: 2646 ರ ವಿಸ್ತೀರ್ಣ ಪೂರ್ವ ಪಶ್ಚಿಮ: 12 ಮೀಟರ್, ಉತ್ತರ ದಕ್ಷಿಣ: 9 ಮೀಟರ್ ಒಟ್ಟು ವಿಸ್ತೀರ್ಣ 108.00 ಮೀಟರ್‌ಗಳ ಖಾಲಿ ನಿವೇಶನ ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ: 2652 ; ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ: ನಿವೇಶನ ಸಂಖ್ಯೆ: 2645 ; ದಕ್ಷಿಣಕ್ಕೆ: ನಿವೇಶನ ಸಂಖ್ಯೆ: 2647.

Sd/- B. Venkataswamy, M.A., LL.B.
Advocate, KAR-308/92
#1767, Lakshmiram Complex,
Behind V.V. Market, Agrahara,
Mysuru-570 004.
Mob: 9880305388, 8073190717

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಬೆಂಗಳೂರು : ಅನುಪಮ ANUPAMA - DTS (ಅಪರ್ಣ) (10-30, 1-30, 4-30, 7-30)
ವೀರೇಶ್ 4 ಆಟ
ನವರಂಗ್ (ರಾಜಾಜಿನಗರ್) 4 ಆಟ
ವೈಭವ್ (ಸಂಜಯನಗರ) 4 ಆಟ
ಸಿದ್ದಲಿಂಗೇಶ್ವರ (ಜೆ.ಪಿ.ನಗರ) 4 ಆಟ
ವೆಂಕಟೇಶ್ವರ (ಕೆಂಗೇರಿ) 4 ಆಟ
ವೆಂಕಟೇಶ್ವರ (ಗೊಲ್ಲರಹಟ್ಟಿ) 4 ಆಟ
ಗೋವರ್ಧನ್ (ಯಶವಂತಪುರ) 4 ಆಟ
ಆಕಾಶ್ (ಲಗ್ಗೆರೆ) 4 ಆಟ
ಕೃಷ್ಣ (ಕೆ.ಆರ್.ಪುರಂ) 4 ಆಟ
PVR (Forum), PVR (Orion), PVR (Orion Uptown OMR), PVR (Phoniex), PVR (Vaishnavi), PVR (VR Mall), PVR (Regalia)
PVR CINEMAX - 1 (Spirit Mall), PVR CINEMAX - 2 (Arena), PVR (Vega City), GT World Mall
INOX (Mantri), INOX (Central), INOX (Swagath), INOX (Garuda) (M.G.Road), INOX (Neighbourhood Mall), INOX (RMZ Galleria)
Cinépolis (Royal Meenakshi), Cinépolis (ETA Mall), Cinépolis (Orion East), Cinépolis (Shanthinikethan), Cinépolis (Spectrum SJR)
GOPALAN CINEMAS (Archade), GOPALAN CINEMAS (Grand), GOPALAN CINEMAS (Legacy), GOPALAN CINEMAS (Innovation)
CARNIVAL CINEMAS, KINO CINEMAS
ತುಮಕೂರು : INOX
ಕನಕಪುರ : ವಾಣಿ 4 ಆಟ
ತುರುವೇಕೆರೆ : ಕೃಷ್ಣ 4 ಆಟ
ಮೈಸೂರು : ಸಂಗಂ 4 ಆಟ, DRC CINEMAS, PVR (Forum), PVR (Garuda), sathyam CINEMAS, INOX, MVC MYSURU VISION CINEMAS
ಮಂಡ್ಯ : ಮಹಾವೀರ್ 4 ಆಟ
ಹಾಸನ : ಸಹ್ಯಾದ್ರಿ 4 ಆಟ
ಚಾಮರಾಜನಗರ : ಸಿಂಹಮೂವಿ ಪ್ಯಾರಡೈಸ್ 4 ಆಟ
ನಂಜನಗೂಡು : ಭಾರ್ಗವಿ 4 ಆಟ
ಕೊಳ್ಳೇಗಾಲ : ಶಾಂತಿ 4 ಆಟ
ಪಾಂಡುಪುರ : ಕೋಕಿಲ 4 ಆಟ
ಚನ್ನರಾಯಪಟ್ಟಣ : ಬಾಲಾಜಿ 4 ಆಟ
ಮಳವಳ್ಳಿ : ರಾಜರಾಜೇಶ್ವರಿ 4 ಆಟ
ಹುಣಸೂರು : ಲೀಲಾ 4 ಆಟ
ಪಿರಿಯಾಪಟ್ಟಣ : ಶಾರದಾ 4 ಆಟ
ಹೊಳೆನರಸೀಪುರ : ಎಸ್.ಎಲ್.ಎನ್ 4 ಆಟ
ಶಿವಮೊಗ್ಗ : Bharath Cinemas 4 ಆಟ
ಚಿಕ್ಕಮಗಳೂರು : ಶ್ರೀಲೇಖ 4 ಆಟ
ದಾವಣಗೆರೆ : ತ್ರಿಶೂಲ್ 4 ಆಟ, MOVIE TIME CINEMAS
ಚಿತ್ರದುರ್ಗ : ಬಸವೇಶ್ವರ 4 ಆಟ
ಹುಬ್ಬಳ್ಳಿ : ಸುಧಾ 4 ಆಟ, PVR, Cinépolis
ಧಾರವಾಡ : ಶ್ರೀನಿವಾಸ 4 ಆಟ
ಬೆಳಗಾವಿ : INOX, CARNIVAL CINEMAS KAPEEL BELGAUM.
ವಿಜಯಪುರ : ಲಕ್ಷ್ಮೀ 4 ಆಟ
ಗದಗ : ವೆಂಕಟೇಶ್ 4 ಆಟ
ರಾಣಿಬೆನ್ನೂರು : ಶಂಕರ್ 4 ಆಟ
ಬಾಗಲಕೋಟೆ : ವಾಸವಿ 4 ಆಟ
ಇಳಕಲ್ : ನಾರಾಯಣ 4 ಆಟ
ಲಕ್ಷ್ಮೇಶ್ವರ : ಕೃಷ್ಣ 4 ಆಟ
ಸಿಂಧಗಿ : ಆನಂದ್ 4 ಆಟ
ಕಲಬುರ್ಗಿ : SHETTY'S MULTIPLEX, MIRAJ CINEMAS
ಗಂಗಾವತಿ : ಅಮರ್ 4 ಆಟ
ಕೊಪ್ಪಳ : ಶಿವೆ 4 ಆಟ
ಬೀದರ್ : ಸಪ್ನ 4 ಆಟ
ರಾಯಚೂರು : MIRAJ CINEMAS
ಮಂಗಳೂರು : SP CINEMAS, PVR, Cinépolis
ಮಣಿಪಾಲ್ : INOX, Bharath Cinemas
ಕುಂದಾಪುರ : Bharath Cinemas
ಉಡುಪಿ : ಆಶೀರ್ವಾದ 4 ಆಟ
ಹಾಗೂ ರಾಜ್ಯಾದ್ಯಂತ